ಸಂಪುಟ: ೦೬/ ಸಂಚಿಕೆ: ೨೨೭/ಬುಧವಾರ ದಿನಾಂಕ: ೦೬-೧೧-೨೦೨೪/ ಪುಟ: ೬/ ಬೆಲೆ ೨-೦೦

ಸತ್ಯಕ್ಕೆ ಕಿರಣ ಸುಳ್ಳಿಗೆ ಕಿಡಿ

ಕಛೇರಿ ದೂರವಾಣಿ ಸಂಖ್ಯೆ 0831-3564491

# ಬೆಳಗಿನ ಸೂರ್ಯೋದಯ

ಕನ್ನಡ ಪ್ರಾದೇಶಿಕ ದಿನಪತ್ರಿಕೆ

ಬೆಳಗಾವಿ ■ ಧಾರವಾಡ ■ ಬಾಗಲಕೋಟ ■ ವಿಜಯಪುರ ■ ಗದಗ ■ ಕೊಪ್ಪಳ ■ ಹಾವೇರಿ ■ ಕಾರವಾರ

ಸಂಪಾದಕರು : ಗುರುರಾಜ ಈರಪ್ಪಾ ಕದಮ, Editor : GURURAJ IRAPPA. KADAM Cell : 9620099959

Volume : 06/ ISSUE : 227 / WEDNESDAY Date : 06-11-2024/ RNI No. KARKAN/2019/77640/ Postal Reg No. PMG/KA/NK/BM/135/21-24 / POST AT Vantamury Colony Post Office / email : belaginasuryodaya@gmail.com / Page : 6 / Rs. 2.00

### ॥ ಸಪ್ತಋಷಿವಾಣಿ ॥

ಬದುಕಿನಲ್ಲಿ ನಾವು ಹತ್ತಿಯಿದ್ದಂತೆ ಅದನ್ನು ಸಂತೋಷವೆಂಬ ಗಾಳಿಯಲ್ಲಿ ಊದಿ ಆದರೆ ಅದನ್ನು ದುಃಖವೆಂಬ ನೀರಿನಲ್ಲಿ ಅದ್ದಬೇಡಿ.

ಧಾರ್ಮಿಕ ಮಾರ್ಗದರ್ಶಕ
ಸಂತೋಷ ಆಚಾರ್ಯ, ಉಡುಪಿ

## ಕಾಂಗ್ರೆಸ್ ಅಧಿವೇಶನ ಶತಮಾನೋತ್ಸವ: ಸಭೆ

# ಅರ್ಥಪೂರ್ಣ ಶತಮಾನೋತ್ಸವ ಆಚರಣೆ: ಸಚಿವ ಎಚ್.ಕೆ.ಪಾಟೀಲ



**ಬೆಳಗಾವಿ** : ಮಹಾತ್ಮಾ ಗಾಂಧೀಜಿಯವರ ಅಧ್ಯಕ್ಷತೆಯಲ್ಲಿ ಬೆಳಗಾವಿಯಲ್ಲಿ 1924 ರಲ್ಲಿ ಜರುಗಿದ ಕಾಂಗ್ರೆಸ್ ಅಧಿವೇಶನನಕ್ಕೆ ನೂರು ವರ್ಷಗಳು ಪೂರ್ಣಗೊಳ್ಳುತ್ತಿರುವ ಹಿನ್ನೆಲೆಯಲ್ಲಿ ವರ್ಷ ವಿಡೀ ವಿವಿಧ ಬಗೆಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ಶತಮಾನೋತ್ಸವವನ್ನು ಅರ್ಥಪೂರ್ಣವಾಗಿ ಆಚರಿಸಲಾಗುವುದು ಎಂದು ಶತಮಾನೋತ್ಸವ ಸಮಿತಿಯ ಅಧ್ಯಕ್ಷರೂ ಆಗಿರುವ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಪ್ರವಾಸೋದ್ಯಮ ಇಲಾಖೆಯ ಸಚಿವರಾದ ಎಚ್.ಕೆ.ಪಾಟೀಲ ತಿಳಿಸಿದರು.

ನಗರದ ಪ್ರವಾಸಿ ಮಂದಿರದಲ್ಲಿ ಮಂಗಳವಾರ(ನ.5) ಜರುಗಿದ ಶತಮಾನೋತ್ಸವ ಸಮಿತಿಯ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಶತಮಾನೋತ್ಸವ ಆಚರಣೆ ಬರೀ ಬೆಳಗಾವಿ ಕೇಂದ್ರೀಕೃತವಾಗಿರುವುದಿಲ್ಲ; ಪ್ರತಿಯೊಂದು ಕಾರ್ಯಕ್ರಮವು ಇಡೀ ರಾಜ್ಯದಾದ್ಯಂತ ಹಮ್ಮಿಕೊಳ್ಳಲಾಗುವುದು. ಅಧಿವೇಶನ ಹಾಗೂ ಗಾಂಧೀಜಿಯವರ ಜೀವನ ಸಾಧನೆ ಕುರಿತು ದೊಡ್ಡ ಪ್ರಮಾಣದಲ್ಲಿ ಛಾಯಾಚಿತ್ರ ಪ್ರದರ್ಶನ ಆಯೋಜಿಸಲಾಗುವುದು. ಎಲ್ಲ ವಿವಿ ಗಳಲ್ಲಿ ಗಾಂಧಿ ಅಧ್ಯಯನ ಕೇಂದ್ರ ಆರಂಭಿಸಬೇಕಿದೆ ಎಂದು ಪ್ರತಿಪಾದಿಸಿದ ಅವರು, ಎಲ್ಲ ಜಿಲ್ಲಾ ಕೇಂದ್ರಗಳಲ್ಲಿ ಗಾಂಧಿ ಭವನ ಪೂರ್ಣಗೊಳಿಸಬೇಕಿದೆ ಎಂದರು.

**ರಚನಾತ್ಮಕ ಕಾರ್ಯಕ್ರಮ ಆಯೋಜನೆ:** ಅರ್ಥಪೂರ್ಣ, ರಚನಾತ್ಮಕ ಕಾರ್ಯಕ್ರಮ ಆಯೋಜಿಸಲು ಗಾಂಧೀವಾದಿಗಳು, ಹಿರಿಯರ ಜತೆ ಚರ್ಚಿಸಿ ಅಧಿವೇಶನದ ಇತಿಹಾಸ ಮರುಸೃಷ್ಟಿ ಮತ್ತು ಮೆಲುಕು ಹಾಕಲು ಶತಮಾನೋತ್ಸವ ಆಚರಣೆ ಮಾಡಲಾಗುವುದು ಎಂದು ಪಾಟೀಲ ತಿಳಿಸಿದರು. ಕಾಂಗ್ರೆಸ್ ಅಧಿವೇಶನಕ್ಕೆ ಸಾಕ್ಷಿಯಾದ ಸ್ಥಳಗಳಿಗೆ ಭೇಟಿ ನೀಡಿ, ವಿಸ್ತೃತವಾಗಿ ಚರ್ಚಿಸಿದ ಬಳಿಕ ಕಾರ್ಯಕ್ರಮದ ರೂಪುರೇಷೆ ಸಿದ್ಧಪಡಿಸಲಾಗುವುದು. ಅಕ್ಟೋಬರ್ 2 ರಿಂದ ಒಂದು ವರ್ಷಗಳ ಕಾಲ ಶತಮಾನೋತ್ಸವ ವರ್ಷಾಚರಣೆ. ಅಂತರರಾಷ್ಟ್ರೀಯ ಮಹತ್ವ ಪಡೆಯಲು ವಿಧಾನಮಂಡಳ ಜಂಟಿ ಅಧಿವೇಶನ ನಡೆಸಲು ಹಾಗೂ ಅಮೆರಿಕಾ ಮಾಜಿ ಅಧ್ಯಕ್ಷ ಬರಾಕ್ ಒಬಾಮಾ ಅವರನ್ನು ಕರೆಸಲು ಉದ್ಧೇಶಿಸಲಾಗಿದೆ. ಬೆಳಗಾವಿ ಅಧಿವೇಶನ ಕುರಿತು ಸ್ಥಳೀಯ ನಾಟಕಕಾರರು ಒಂದು ವಿಶೇಷ ನಾಟಕವನ್ನು ರಚಿಸುವಂತೆ ಸಚಿವ ಎಚ್.ಕೆ.ಪಾಟೀಲ ತಿಳಿಸಿದರು.

ಇದೇ ವೇಳೆ ಮಾತನಾಡಿದ ಮಾಜಿ ಮುಖ್ಯಮಂತ್ರಿ ಹಾಗೂ ಶತಮಾನೋತ್ಸವ ಸಮಿತಿಯ ಗೌರವ ಅಧ್ಯಕ್ಷರಾದ ವೀರಪ್ಪ ಮೊಯ್ಲಿ ಅವರು, ಶತಮಾನೋತ್ಸವ ಸ್ಮರಣೀಯವಾಗಿಸಲು ಶತಮಾನೋತ್ಸವ ಉದ್ಯಾನ ಮತ್ತು ಭವನ ನಿರ್ಮಾಣ ಮಾಡಬೇಕಿದೆ ಎಂದರು.

ಇದಲ್ಲದೇ ಮಹಾತ್ಮಾ ಗಾಂಧಿ ಪುತ್ಥಳಿ ನಿರ್ಮಾಣ; ಅಧಿವೇಶನ ಸ್ಥಳದಲ್ಲಿ ಗಾಂಧಿ ಸ್ಮಾರಕ; ಛಾಯಾಚಿತ್ರ ಹಾಗೂ ವಸ್ತುಪ್ರದರ್ಶನ ಹಾಗೂ ಖಾಯಂ ಮ್ಯೂಸಿಯಂ ಸ್ಥಾಪಿಸಬೇಕು ಎಂದು ಸಭೆಯಲ್ಲಿ ತಿಳಿಸಿದರು.

ಶತಮಾನೋತ್ಸವ ಅಂಚೆ ಚೀಟಿ ಬಿಡುಗಡೆ; ಬೆಳಗಾವಿಯಲ್ಲಿ ವಿಚಾರಸಂಕಿರಣ ರೂಪುರೇಷೆ ಸಿದ್ಧಪಡಿಸಬೇಕು ಮತ್ತು ಶತಮಾನೋತ್ಸವ ಸಂದರ್ಭದಲ್ಲಿ ವಿವಿಧ ಸಮ್ಮೇಳನ ಹಮ್ಮಿಕೊಳ್ಳಲು ಯೋಜನೆ ರೂಪಿಸಬೇಕು ಎಂದು ಅಧಿಕಾರಿಗಳಿಗೆ ತಿಳಿಸಿದರು.

ಶತಮಾನೋತ್ಸವ ಸಮಿತಿಯ ಸಂಚಾಲಕರಾದ ವಿಧಾನಪರಿಷತ್ ಮಾಜಿ ಸಭಾಪತಿ ಬಿ.ಎಲ್.ಶಂಕರ ಅವರು, ಅಧಿವೇಶನದ ಶತಮಾನೋತ್ಸವವು ಒಂದು ವರ್ಷದ ಕಾರ್ಯಕ್ರಮ. ಮುಂದಿನ ಅಕ್ಟೋಬರ್ 2 ರವರೆಗಿನವರೆಗೆ ಅಳವಡಿಸಿಕೊಳ್ಳಲಾಗುವುದು ಎಂದು ವಿವರಿಸಿದರು.

ಹಿರಿಯ ಸಾಹಿತಿ ಡಾ.ಸರಜೂ ಕಾಟ್ಕರ್, ದೇಶಪಾಂಡೆ ಸ್ಮಾರಕ ಟ್ರಸ್ಟ್ ಅಧ್ಯಕ್ಷರಾದ ರವೀಂದ್ರ ದೇಶಪಾಂಡೆ, ಪ್ರೊ.ಮರಾಠೆ, ನಿಲೇಶ್ ಬೇನಾಳ ಮತ್ತಿತರರು ಕಾಂಗ್ರೆಸ್ ಅಧಿವೇಶನದ ಶತಮಾನೋತ್ಸವವನ್ನು ಅರ್ಥಪೂರ್ಣವಾಗಿ ಆಚರಿಸುವ ಬಗ್ಗೆ ಸಲಹೆಗಳನ್ನು ನೀಡಿದರು.

ಜಿಲ್ಲಾ ಉಸ್ತುವಾರಿ ಸಚಿವರಾದ ಸತೀಶ್ ಜಾರಕಿಹೊಳಿ, ಬೆಳಗಾವಿ ಉತ್ತರ ಶಾಸಕರಾದ ಆಸಿಫ್ (ರಾಜು) ಸೇಠ್, ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್, ಜಿಪಂ ಸಿಇಓ ರಾಹುಲ್ ಶಿಂಧೆ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಭೀಮಾಶಂಕರ ಗುಳೇದ, ಸಮಿತಿಯ ಸದಸ್ಯರಾದ ಎನ್.ಆರ್.ವಿಶುಕುಮಾರ್ ಮತ್ತಿತರರು ಸಭೆಯಲ್ಲಿ ಉಪಸ್ಥಿತರಿದ್ದರು.

**ಅಧಿವೇಶನ ಸ್ಥಳ; ಹುದಲಿ ಭೇಟಿ:** ಸಭೆಯ ಬಳಿಕ ಸಮಿತಿಯ ಅಧ್ಯಕ್ಷರು, ಗೌರವ ಅಧ್ಯಕ್ಷರು, ಸಂಚಾಲಕರು, ಸದಸ್ಯರು ಕಾಂಗ್ರೆಸ್ ಅಧಿವೇಶನನಡೆದ ಸ್ಥಳವಾದ ಟಿಳಕವಾಡಿ, ವೀರಸೌಧಕ್ಕೆ ಭೇಟಿ ನೀಡಿದರು.

ಈ ಸಂದರ್ಭದಲ್ಲಿ ಛಾಯಾಚಿತ್ರ ಪ್ರದರ್ಶನ ಹಾಗೂ ಕಾಂಗ್ರೆಸ್ ಬಾವಿಯನ್ನು ವೀಕ್ಷಿಸಿ, ಜಿಲ್ಲಾಧಿಕಾರಿಗಳಿಂದ ಮಾಹಿತಿಯನ್ನು ಪಡೆದುಕೊಂಡರು. ನಂತರ ಲೆಲೆ ಮೈದಾನ, ಸಿಪಿಎಡ್ ಮೈದಾನ; ಕಣಬರಗಿಯಲ್ಲಿರುವ ಗಂಗಾಧರರಾವ್ ದೇಶಪಾಂಡೆ ಸ್ಮಾರಕ ಮತ್ತು ಹುದಲಿಯಲ್ಲಿರುವ ಮಹಾತ್ಮಾ ಗಾಂಧೀಜಿ ಸ್ಮಾರಕವನ್ನು ವೀಕ್ಷಿಸಿದರು.


ಈ ಸಂದರ್ಭದಲ್ಲಿ 1924 ರಲ್ಲಿ ಮಹಾತ್ಮಾ ಗಾಂಧೀಜಿಯವರ ಅಧ್ಯಕ್ಷತೆಯಲ್ಲಿ ನಡೆದ ಐತಿಹಾಸಿಕ ಕಾಂಗ್ರೆಸ್ ಅಧಿವೇಶನಕ್ಕೆ ಸಾಕ್ಷಿಯಾದ ಸ್ಥಳಗಳಿಗೆ ಶತಮಾನೋತ್ಸವ ಸಮಿತಿಯ ಅಧ್ಯಕ್ಷರಾದ ಎಚ್.ಕೆ.ಪಾಟೀಲ, ಜಿಲ್ಲಾ ಉಸ್ತುವಾರಿ ಸಚಿವರಾದ ಸತೀಶ್ ಜಾರಕಿಹೊಳಿ, ಗೌರವ ಅಧ್ಯಕ್ಷರಾದ ಮಾಜಿ ಮುಖ್ಯಮಂತ್ರಿ ವೀರಪ್ಪ ಮೊಯ್ಲಿ ಹಾಗೂ ಸಮಿತಿಯ ರಾಜ್ಯ ಸಂಚಾಲಕರಾದ ವಿಧಾನ ಪರಿಷತ್ ಮಾಜಿ ಸಭಾಪತಿ ಬಿ.ಎಲ್.ಶಂಕರ, ಸದಸ್ಯರಾದ ಎನ್.ಆರ್.ವಿಶುಕುಮಾರ್, ಬೆಳಗಾವಿ ಉತ್ತರ ಮತಕ್ಷೇತ್ರದ ಶಾಸಕರಾದ ಆಸಿಫ್(ರಾಜು) ಸೇಠ್, ವಿನಯ ನಾವಲಗಟ್ಟಿ, ಶಿವನಗೌಡ ಪಾಟೀಲ, ರಮೇಶ ಜನಗಲ, ರಾಮಕೃಷ್ಣ ಮರಾಠೆ, ಮತ್ತಿತರರು ಉಪಸ್ಥಿತರಿದ್ದರು.

## ಬಣಗಾರ ಗಲ್ಲಿ ಶಂಕರಲಿಂಗ ದೇವಸ್ಥಾನದ ಜಾತ್ರಾ ಮಹೋತ್ಸವ

ಗೋಕಾಕ : ಬಣಗಾರ ಗಲ್ಲಿಯ ಶಂಕಲಿಂಗ ದೇವಸ್ಥಾನದ ಜಾತ್ರಾ ಮಹೋತ್ಸವ ಹಾಗೂ ರಾಜ್ಯೋತ್ಸವದ ಕಾರ್ಯಕ್ರಮದ ಸಮಾರಂಭವು ಸೋಮವಾರ ನ 11ರಿಂದ ನ15 ರ ಶುಕ್ರವಾರದ ವರೆಗೆ ವಿಜ್ರಂಭಣೆಯಿಂದ ಜರುಗಲಿದೆ ಎಂದು ಬಣಗಾರ ಸಮಾಜದ ಅಧ್ಯಕ್ಷ ಬಾಲಚಂದ್ರ ಕುಬಸದ ತಿಳಿಸಿದ್ದಾರೆ, ನೆ 11ರಂದು ಮುಂಜಾನೆ 6 ಗಂಟಗೆ ದೇವಸ್ಥಾನದಲ್ಲಿ ಶಂಕರಲಿಂಗ ದೇವರಿಗೆ ರುದ್ರಾಭಿಷೇಕ ಜರುಗುವದು ಮುಂಜಾನೆ 9 ಗಂಟೆಗೆ ಗೌರಿದೇವಿಯ ಪ್ರತಿಷ್ಠಾಪನೆ ಮತ್ತು 69ನೇ ಕರ್ನಾಟಕ ರಾಜ್ಯೋತ್ಸವ ಅಂಗವಾಗಿ 15ನೇ ಸ್ವಯಂ ಪ್ರೇರಿತ ರಕ್ತದಾನ ಶಿಬಿರದ ಉದ್ಘಾಟನಾ ಸಮಾರಂಭ ಜರುಗುವದು ಸಮಾರಂಭದ ಪಾವನ ಸಾನಿದ್ಯ ದೇವಸ್ಥಾನದ ಪ್ರಧಾನ ಅರ್ಚಕ ಪಪೂ ವೇದಮೋರ್ತಿ ಶ್ರೀ ಸಾತಯ್ಯಾ ಮಹಾಸ್ವಾಮಿಜಿಗಳು ವಹಿಸುವರು ಶ್ಯೂನ ಸಂಪಾದನಾಮಠದ ಪೀಠಾಧಿಪತಿ ಪಪೂ ಶ್ರೀ ಮುರುಘರಾಜೇಂದ್ರ ಮಹಾಸ್ವಾಮಿಜಿಗಳು ಉದ್ಘಾಟಿಸುವರು,ಸಮಾರಂಭ ಅದ್ಯಕ್ಷತೆಯನ್ನು ಬಣಗಾರ ಸಮಾಜದ ಅಧ್ಯಕ್ಷ ಬಾಲಚಂದ್ರ ಕುಬಸದ ವಹಿಸುವರು ಹಲವು ಗಣ್ಯರು ಕಾರ್ಯಕ್ರಮದಲ್ಲಿ ಉಪಸ್ಥಿತರಿರುವರು ಎಂದು ಶಂಕರಲಿಂಗ ಸಂಸ್ಥೆಯ ಅಧ್ಯಕ್ಷ ಡಾ,ರಾಜಶೇಖರ ಗುಣಕಿ ತಿಳಿಸಿದ್ದಾರೆ.

ಸಂಜೆ 6ಗಂಟೆಗೆ ಡಾ ಶಂಕರ ಎಸ್ ತೇರದಾಳ ಅವರ ಅಧ್ಯಕ್ಷತೆಯಲ್ಲಿ ಜಾಗೃತಿಮಹಿಳಾ ಸದಸ್ಯರಿಂದ ಜನಪದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗುತ್ತವೆ ಡಾ ಶಶಿಕಲಾ ಕಾಮೋಜಿ,ಡಾ ಆಶಾಲತಾ ತೇರದಾಳ,ಶೈಲಾ ಮೊರ್ತೆಲಿ,ಶಶಿಕಲಾ ಕೌತನಾಳಿ ಸಮಾರಂಭದಲ್ಲಿ ಭಾಗವಹಿಸುವರು, ನೆ 12ರಂದು ಮಂಗಳವಾರ ಆದರ್ಶ ಶಿಕ್ಷಣ ಸಂಸ್ಥೆಯ ಪ್ರಾಥಮಿಕ ಮತ್ತು ಪ್ರೌಡಶಾಲಾ ಮಕ್ಕಳಿಂದ ಮನರಂಜನೆ ಕಾರ್ಯಕ್ರಮ ರಾಮಚಂದ್ರ ಕಾಕಡೆ ನಿರ್ದೆಶನದಲ್ಲಿ ಜರುಗುತ್ತವೆ ಬಸವರಾಜ ಹಿಂಡಿಹೊಳಿ ಅಧ್ಯಕ್ಷತೆ ವಹಿಸುವರು, ನೆ 13 ಬುಧವಾರ ರಂದು ಶತಮಾನ ಸಂತ ನಡೆದಾಡುವ ದೇವರು ಪೂಜ್ಯ ಸಿದ್ದೇಶ್ವರ ಸ್ವಾಮಿಜಿಗಳ ಬದುಕು ಮತ್ತು ತತ್ವಾದರ್ಶಗಳು ಕುರಿತು ಆಧ್ಯಾತ್ಮಿಕ ಚಿಂತನ ಕಾರ್ಯಕ್ರಮ ಹಿರಿಯ ಸಾಹಿತಿ ಚಂದ್ರಶೇಖರ ಅಕ್ಕಿ ಅಧ್ಯಕ್ಷತೆಯಲ್ಲಿ ಸೋಮಶೇಖರ ಮಗದುಮ್, ರಮೇಶ ಮಿರ್ಜಿ,ಬಸವರಾಜ ಮುರಗೋಡ ಭಾಗವಹಿಸುವರು, ನೇ 14 ಗುರುವಾರರಂದು ಜಾಗೃತಿ ಮಹಿಳಾ ಸಮಾಜ ಇವರ ಸಂಯೋಜನೆಯಲ್ಲಿ ಬಿ ಎನ್ ಮಟ್ಟಿಕಲ್ಲಿ ಕಲ್ಯಾಣ ಮಂಟಪ್ಪದಲ್ಲಿ ಮಹಿಳೆಯರಿಗಾಗಿ ಮೋಜಿನ ಆಟಗಳು ವಸ್ತು ಪ್ರದರ್ಶನ ಮತ್ತು ಆಹಾರ ಮೇಳ.ರಾತ್ರಿ 9.30ಕ್ಕೆ ಜಾನಪದ ಕಾರ್ಯಕ್ರಮಗಳು ನೇ 15ರಂದು ಶುಕ್ರವಾರ ಮುಂಜಾನೆ 8ಗಂಟೆಗೆ ಶಂಕರಲಿಂಗ ದೇವರ ಗೌರಿದೇವಿಯ ಅಲಂಕಾರ,ಮದ್ಯಾನ್ಹ ಶಂಕರಲಿಂಗ ದೇವರ ರಥದ ಕಳಸವನ್ನು ರಥದಲ್ಲಿ ಪ್ರತಿಷ್ಠಾಪನೆ, ಜರುಗುವುದು.

# ಪಂಡರಪೂರ ಪಾದ ಯಾತ್ರೆಗೆ ಚಾಲನೆ



ಯರಗಟ್ಟಿ: ಸಮೀಪದ ಸೊಪ್ಪಡ್ಲ ಗ್ರಾಮದಿಂದ ಮಂಗಳವಾರ ಪಂಡರಾಪುರಕ್ಕೆ ಪಾದಯಾತ್ರೆಯ ಮೂಲಕ ದರ್ಶನಕ್ಕೆ ತೆರಳಿದರು.

ಈ ವೇಳೆ ಬಿಜೆಪಿ ಮುಖಂಡ ವಿರುಪಾಕ್ಷ ಮಾಮನಿ ಮಾತನಾಡಿ ಸೊಪ್ಪಡ್ಲ ಗ್ರಾಮದಿಂದ ಪಂಡರಾಪುರಕ್ಕೆ ಪಾಂಡುರಂಗನ ದರ್ಶನಕ್ಕೆ ನಾಲ್ಕನೇ ವರ್ಷದ ಪಾದಯಾತ್ರಯಲ್ಲಿ 100 ಜನ ಭಕ್ತರ ತಂಡ ತೆರಳಿತು ಅಁ ನೆಲೆಯಲ್ಲಿ ತ್ಯಾಗ ಸರಳತೆ ಕ್ಷಮೆ ಅನುಕಂಪ ಸಹಬಾಳ್ವೆ ಅಹಿಂಸೆ ಪ್ರೇಮ ವಿನಯ ಈ ವಿಷಯಗಳಿಗೆ ಈ ಪಂಥವು ಬಹಳ ಒತ್ತು ಕೊಡುತ್ತದೆ ಉತ್ತರ ಕರ್ನಾಟಕ ಮತ್ತು ಮಹಾರಾಷ್ಟ್ರದಲ್ಲಿ ಪ್ರಚಲಿತ ವಿರುವ ಭಕ್ತಿ ಮಾರ್ಗ ಇದು ಒಂದು ಅಂಗವಾಗಿದೆ ಎಂದರು.

ಭಕ್ತರನ್ನೂ ಭೇಟಿ ಮಾಡಿ ಭಕ್ತಿಯ ಪಾದಯಾತ್ರೆ ಸುರಕ್ಷತವಾಗಿರಲಿ ಎಂದು ಶುಭಕೋರಿದರು.

ಈ ಸಂದರ್ಭದಲ್ಲಿ ಮಹಾಂತೇಶ ಗೋಡಿ, ಮಹಾದೇವ ಯಂಡ್ರಾವಿ, ರವಿಕಿರಣ ಪಾಟೀಲ, ಕರೆಪ್ಪ ಪೂಜೇರ, ಫಕ್ಕೀರಪ್ಪ ನದಾಫ, ಮಹಾಂತೇಶ ಬಟಕುರ್ಕಿ, ಚನ್ನಮಲ್ಲಪ್ಪ ಕುಂಬಾರ, ರಾಮಚಂದ್ರ ಕುರುಬಗಟ್ಟಿ, ಭೀಮಶೆಪ್ಪ ಹೊಂಗಲ, ಭೀಮಪ್ಪ ಬಾವಿಹಾಳ, ಈರಪ್ಪಾ ಐನಾಪೂರ, ಸೋಮಪ್ಪ ಹೊಂಗಲ, ಸಿದ್ದಪ್ಪ ನಾಯ್ಕರ, ಸಿದ್ದಪ್ಪ ನೇಗಿನಾಳ, ಸೋಮಪ್ಪ ಹೊಂಗಲ, ವಿಠ್ಠಲ ಪೂಜೇರ, ಶಿವಣ್ಣ ಶಬರಿ, ಗೌಡಪ್ಪ ಕಮತಗೌಡ್ರ, ಆಯ್. ಕೆ. ಗೌಡ್ರ, ಬಸು ಆರಿಬೆಂಚಿ, ಹೇಮಂತ ಹೊಂಗಲ, ಗೂಳಪ್ಪ ಸಾಲಬನ್ನವರ, ಮಹಾಂತೇಶ ಕಾಶನ್ನವರ, ಶಿವಾನಂದ ಯರಗಟ್ಟಿ, ಶ್ರೀಮತಿ ಲಕ್ಷ್ಮೀ ಕಂಠಿ, ಶ್ರೀಮತಿ ಸಾಂವಕ್ಕ ಮರೆಪ್ಪಗೋಳ ಸೇರಿದಂತೆ ಗ್ರಾಮದ ಹಿರಿಯರು ಹಾಗೂ ಮುಖಂಡರು ಉಪಸ್ಥಿತರಿದ್ದರು.

## ಸಂಪಗಾಂವದಲ್ಲಿ ಇಂದಿನಿಂದ ಶ್ರೀ ದುರದುಂಡೇಶ್ವರ ಮಠದ ಸಂಭ್ರಮದ ಕಾರ್ಯಕ್ರಮ

**ಬೈಲಹೊಂಗಲ**– ತಾಲೂಕಿನ ಸುಕ್ಷೇತ್ರ ಸಂಪಗಾಂವ ಗ್ರಾಮದ ಅರಭಾಂವಿ ಶ್ರೀ ದುರದುಂಡೇಶ್ವರ ನೂತನ ಶಾಖಾ ಮಠದ ಉದ್ಘಾಟನೆ, ಕಳಸಾರೋಹನ, ಪ್ರವಚನ ಹಾಗೂ ಕುಂಭೋತ್ಸವ ಕಾರ್ಯಕ್ರಮವು ಅರಭಾಂವಿಯ ಪುಣ್ಯಾರಣ್ಯ ಸಿದ್ದ ಸಂಸ್ಥಾನ ಶ್ರೀ ದುರದುಂಡೇಶ್ವರ ಮಠದ ಪೂಜ್ಯ ಗುರುಬಸವಲಿಂಗ ಸ್ವಾಮೀಜಿ ಅವರ ನೇತೃತ್ವದಲ್ಲಿ ನ. 6 ರಿಂದ 12 ರವರೆಗೆ ಸಡಗರ–ಸಂಭ್ರಮದಿಂದ ಜರುಗಲಿದೆ. ದಿ. 6 ರಂದು ಸಾಯಂಕಾಲ 6 ಘಂಟೆಗೆ ಪ್ರವಚನ ಉದ್ಘಾಟಣೆ ನೆರವೇರಲಿದ್ದು ಗ್ರಾಮದ ಕಟಾಪೂರಿಮಠದ ಚನ್ನವೀರ ಸ್ವಾಮೀಜಿ, ಬೈಲಹೊಂಗಲದ ಶಾಖಾ ಮೂರುಸಾವಿರ ಮಠದ ಪ್ರಭುನೀಲಕಂಠ ಸ್ವಾಮೀಜಿ, ಕುಳವಳ್ಳಿ ಓಂ ಸುಕುಮಾರ ಯೋಗಾಶ್ರಮದ ಓಂ ಗುರುಜೀ ಸಾನಿಧ್ಯ ವಹಿಸಲಿದ್ದಾರೆ.

ಮಾಜಿ ಜಿ.ಪಂ.ಸದಸ್ಯ ರೋಹಿಣಿ ಪಾಟೀಲ ಕಾರ್ಯಕ್ರಮ ಉದ್ಘಾಟಿಸಲಿದ್ದು, ಆರ್‌ಇಎಸ್ ಸಂಸ್ಥೆಯ ಚೇರಮನ್ ಶಂಕರೆಪ್ಪ ಶಿದ್ನಾಳ, ನೇಗಿನಹಾಳದ ವಿಜಯಕಾಂತ ಡೈರಿ ವ್ಯವಸ್ಥಾಪಕ ನಿರ್ದೇಶಕಿ ದೀಪಾ ಶಿದ್ನಾಳ, ಲಕ್ಷ್ಮೀ ಇನಾಮದಾರ, ಮಂಜುಳಾ ದೊಡಗೌಡರ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ.

ದಿ. 11 ರಂದು ಸಾಯಂಕಾಲ 5 ಘಂಟೆಗೆ ಪ್ರವಚನ ಮಂಗಲ ಕಾರ್ಯಕ್ರಮ ನಡೆಯಲಿದೆ. ನಾಗನೂರ ರುದ್ರಾಕ್ಷಿಮಠದ ಡಾ.ಅಲ್ಲಮಪ್ರಭು ಸ್ವಾಮೀಜಿ, ಚನ್ನಮ್ಮನ ಕಿತ್ತೂರಿನ ಕಲ್ಮಠದ ಮಡಿವಾಳ ರಾಜಯೋಗೀಂದ್ರ ಸ್ವಾಮೀಜಿ ಹುಕ್ಕೇರಿ ವಿರಕ್ತಮಠದ ಶಿವಬಸವ ಸ್ವಾಮೀಜಿ, ಅರಳಿಕಟ್ಟಿ ವಿರಕ್ತಮಠದ ಶಿವಮೂರ್ತಿ ಸ್ವಾಮೀಜಿ ಸಾನಿಧ್ಯ ವಹಿಸಲಿದ್ದಾರೆ. ಶಾಸಕ ಮಹಾಂತೇಶ ಕೌಜಲಗಿ, ಮಾಜಿ ಶಾಸಕ ಮಹಾಂತೇಶ ದೊಡಗೌಡರ, ಹುಬ್ಬಳ್ಳಿಯ ಚೇತನ ಕಾಲೇಜಿನ ಅಧ್ಯಕ್ಷ ಗುರುಶಾಂತ ವಳಸಂಗ, ಬೆಂಗಳೂರಿನ ನಿವೃತ ಎಆರ್‌ಟಿಓ ಚನ್ನಬಸಪ್ಪ ಪುಟ್ಟಿ, ನಿವೃತ ಬಿಎಸ್‌ಎನ್‌ಎಲ್ ಇಂಜನೀಯರ ದುಂಡಪ್ಪ ಒಕ್ಕುಂದ, ಯುವ ಉದ್ಯಮಿ ದಿಗ್ವಿಜಯ ಶಿದ್ನಾಳ, ಸಿಪಿಐ ಪಂಚಾಕ್ಷರಯ್ಯ ಸಾಲಿಮಠ ಮುಂತಾದವರು ಮುಖ್ಯ ಅಥಿತಿಗಳಾಗಿ ಆಗಮಿಸಲಿದ್ದಾರೆ.

ದಿ. 12 ರಂದು ಮುಂಜಾನೆ 11–00 ಘಂಟೆಗೆ ಅರಭಾಂವಿ ಶ್ರೀ ದುರದುಂಡೇಶ್ವರ ನೂತನ ಶ್ರೀಮಠದ ಉದ್ಘಾಟನೆ ಹಾಗೂ ಕಳಸಾರೋಹನ ಕಾರ್ಯಕ್ರಮ ಜರುಗಲಿದೆ. ಗದಗ–ಡಂಬಳದ ತೋಂಟದಾರ್ಯ ಮಠದ ಡಾ.ತೋಂಟದ ಸಿದ್ದರಾಮ ಸ್ವಾಮೀಜಿ, ಕಾರಂಜಿಮಠದ ಗುರುಸಿದ್ದ ಸ್ವಾಮೀಜಿ, ಕಡಕೋಳ ವಿರಕ್ತಮಠದ ಸಚ್ಚಿದಾನಂದ ಸ್ವಾಮೀಜಿ, ಹುಬ್ಬಳ್ಳಿ ರುದ್ರಾಕ್ಷಿಮಠದ ಬಸವಲಿಂಗ ಸ್ವಾಮೀಜಿ ಸಾನಿಧ್ಯ ವಹಿಸಲಿದ್ದಾರೆ.

ಚನ್ನಮ್ಮ ಕಿತ್ತೂರು ಶಾಸಕ ಬಾಬಾಸಾಹೇಬ ಪಾಟೀಲ ಕಾರ್ಯಕ್ರಮ ಉದ್ಘಾಟಿಸಲಿದ್ದು ಗ್ರಾ.ಪಂ.ಅಧ್ಯಕ್ಷ ಶ್ರೀಕಾಂತ ಹಲಕಿ, ವಿ.ಪ.ಸದಸ್ಯ ಪ್ರಕಾಶ ಹುಕ್ಕೇರಿ ಚನ್ನರಾಜ ಹಟ್ಟಿಹೊಳಿ, ಲಖನ್ ಜಾರಕೀಹೊಳಿ, ಮಾಜಿ ಸಂಸದ ಅನಂತಕುಮಾರ ಹೆಗಡೆ, ಮಾಜಿ ವಿ.ಪ.ಸದಸ್ಯ ಮಹಾಂತೇಶ ಕವಟಗಿಮಠ, ಮಾಜಿ ಶಾಸಕ ಸುರೇಶ ಮಾರಿಹಾಳ ಮುಂತಾದವರು ಮುಖ್ಯ ಅಥಿತಿಗಳಾಗಿ ಆಗಮಿಸಲಿದ್ದಾರೆ. ದಿ. 8 ರಂದು ಜೂ. ಶಿವರಾಜಕುಮಾರ ತಂಡದವರಿಂದ ಮನರಂಜನೆ ಹಾಗೂ ಜಾನಪದ, ಹಾಸ್ಯ ಕಲಾವಿದರಿಂದ ವಿಶೇಷ ಕಾರ್ಯಕ್ರಮಗಳು ಜರುಗಲಿವೆ ಎಂದು ಶ್ರೀಮಠದ ಸದ್ಭಕ್ತ ಮಂಡಳಿ ಪ್ರಕಟಣೆಯಲ್ಲಿ ತಿಳಿಸಿದೆ.

## ನ. ೮ರಿಂದ 11ರ ವರೆಗೆ ಸಮಾವೇಶ- ವಚನೋತ್ಸವ ಮಂಟಪ ಪೂಜೆ - ಲೋಕಾರ್ಪಣೆ

**ತೇರದಾಳ**–ಭಕ್ತರ ದೇಣಿಗೆ ಹಣದಿಂದಲೇ ನಿರ್ಮಾಣಗೊಂಡ ಪಟ್ಟಣದ ಕ್ಷೇತ್ರಾಧಿಪತಿ ಅಲ್ಲಮಪ್ರಭುದೇವರ ನೂತನ ದೇವಸ್ಥಾನ ಲೋಕಾರ್ಪಣೆ ನಿಮಿತ್ತ ನ. 8ರಿಂದ 11ರ ವರೆಗೆ ಹಲವು ಕಾರ್‍ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಹಂದಿಗುಂದದ ಶಿವಾನಂದ ಶ್ರೀ, ಶೇಗುಣಸಿ ಡಾ. ಮಹಾಂತಪ್ರಭು ಶ್ರೀ, ಸ್ಥಳೀಯ ಹಿರೇಮಠದ ಗಂಗಾಧರ ದೇವರು ಹಾಗೂ ಚಿಮ್ಮಡ ವಿರಕ್ತಮಠದ ಪ್ರಭು ಶ್ರೀ ತಿಳಿಸಿದ್ದಾರೆ.

ಈ ಕುರಿತು ಮಾಹಿತಿ ನೀಡಿರುವ ಶ್ರೀಗಳು, ಅಲ್ಲಮಪ್ರಭು ದೇವಸ್ಥಾನ ಲೋಕಾರ್ಪಣೆ ಕಾರ್‍ಯಕ್ರಮ ಹೊಸ ಇತಿಹಾಸಕ್ಕೆ ಸಾಕ್ಷಿಯಾಗಬೇಕೆಂಬ ಉದ್ದೇಶದಿಂದ ಅ.14ರಿಂದ ನಿರಂತರವಾಗಿ ವಿವಿಧ ಕಾರ್‍ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಅದರಂತೆ ನ. 8ರಂದು ಬೆಳಗ್ಗೆ ರೈತ ಹಾಗೂ ಸೈನಿಕ ಸಮಾವೇಶ ಮತ್ತು ಸಂಜೆ ಯುವಜನೋತ್ಸವ ಹಮ್ಮಿಕೊಳ್ಳಲಾಗಿದೆ. ನ.9ರಂದು ಬೆಳಗ್ಗೆ ಜನಪದ ಸಂಭ್ರಮ, ಮದ್ಯಾಹ್ನ 3 ಗಂಟೆಗೆ ಬಸವೇಶ್ವರ ಮೂರ್ತಿ ಉದ್ಘಾಟನೆ, ಸಂಜೆ 4 ಗಂಟೆಗೆ ಅಲ್ಲಮಪ್ರಭುದೇವರ 6 ಸಾವಿರ ವಚನ ಗ್ರಂಥಗಳ ವಚನೋತ್ಸವ ಹಾಗೂ ಬಸವ ಪುರಾಣ ಮಹಾಮಂಗಲ ನಡೆಯುವುದು. ನ.10ರಂದು ಬೆಳಗ್ಗೆ 111 ಮಠಾಧೀಶರ ಮಂಟಪ ಪೂಜೆ ಸಂಜೆ 5 ಗಂಟೆಗೆ ಮಹಿಳಾ ಸಮಾವೇಶ ನಡೆಯುವುದು. ನ. 11ರಂದು ಬೆಳಗ್ಗೆ 11 ಗಂಟೆಗೆ ಅಲ್ಲಮಪ್ರಭುದೇವರ ದೇವಸ್ಥಾನ ಕಳಸಾರೋಹಣ ಹಾಗೂ ಲೋಕಾರ್ಪಣೆ ಮತ್ತು ಧರ್ಮ ಸಭೆ ನಡೆಯುವುದು. ಮೊದಲು ನ.8ರಂದು ನಡೆಯಲಿರುವ ರೈತ ಹಾಗೂ ಸೈನಿಕ ಸಮಾವೇಶ ನಿಮಿತ್ತ ಅಂದು ಬೆಳಗ್ಗೆ 8 ಗಂಟೆಗೆ ಬಸ್ ನಿಲ್ದಾಣ ಬಳಿಯ ಮಹಾತ್ಮ ಗಾಂಧೀಜಿ ಕ್ರೀಡಾಂಗಣದಿಂದ 101 ಎತ್ತಿನ ಬಂಡಿಗಳ ಭವ್ಯ ಮೆರವಣಿಗೆ ಮುಖಾಂತರ




ಅತಿಥಿಗಳನ್ನು ವೇದಿಕೆ ಕರೆತರಲಾಗುವುದು. ಬಳಿಕ 10 ಗಂಟೆಗೆ ನಡೆಯುವ ವೇದಿಕೆ ಕಾರ್‍ಯಕ್ರಮದ ಸಾನ್ನಿಧ್ಯವನ್ನು ಕೋಲ್ಲಾಪುರ ಕನ್ನೇರಿ ಮಠದ ಅದೃಶ್ಯ ಕಾಡಸಿದ್ದೇಶ್ವರ ಶ್ರೀ ವಹಿಸುವರು. ಘೊಡಗೇರಿ ಶಿವಾನಂದ ಮಠದ ಮಲ್ಲಯ್ಯ ಶ್ರೀ ಅಧ್ಯಕ್ಷತೆ ವಹಿಸುವರು. ಕುರುಹಿನಶೆಟ್ಟಿ ಸಮಾಜದ ಜಗದ್ಗುರು ಶಿವಶಂಕರ ಶಿವಾಚಾರ್ಯ, ಕಪ್ಪರಗುಡ್ಡ ನಂದಿವೇರಿಮಠದ ಶಿವಕುಮಾರ ಶ್ರೀ, ಅಲ್ಲಮಪ್ರಭು ದೇವಸ್ಥಾನ ಜೀರ್ಣೋದ್ಧಾರ ಸೇವಾ ಸಮಿತಿ ಟ್ರಸ್ಟ್ ಅಧ್ಯಕ್ಷ ಜಗದೀಶ ಗುಡಗುಂಟಿಮಠ, ಹರ್ಷಾನಂದ ಶ್ರೀ, ಶಂಕರಾರೂಢ ಶ್ರೀ, ಗೌರಿಶಂಕರ ಶಿವಾಚಾರ್ಯ, ಜ್ಞಾನೇಶ್ವರ ಶ್ರೀ,ಅಮರೇಶ್ವರ ಶ್ರೀ, ಗುಹೇಶ್ವರ ಪುರಾಣಿಕಮಠ, ಮಾಜಿ ಸೈನಿಕರ ಸಂಘದ ಜಿಲ್ಲಾಧ್ಯಕ್ಷ ಚಂದ್ರಶೇಖರ ಬಡ್ನೂರ, ರೈತ ಹೋರಾಟಗಾರ ಕೆ.ಟಿ. ಗಂಗಾಧರ, ರಾಜ್ಯೋತ್ಸವ ಪ್ರಸಶ್ತಿ ವಿಜೇತ ಸಿದ್ದಪ್ಪ ಬಿದರಿ, ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ. ತಿಮ್ಮಾಪುರ, ರಾಜ್ಯಸಭಾ ಸದಸ್ಯ ಈರಣ್ಣ ಕಡಾಡಿ, ಶಾಸಕ ಸಿದ್ದು ಸವದಿ, ಮಾಜಿ ಸಚಿವ ಕೆ.ಎಸ್. ಈಶ್ವರಪ್ಪ, ಎಸ್.ಆರ್.ಪಾಟೀಲ, ಮುರಗೇಶ ನಿರಾಣಿ, ಆನಂದ ನ್ಯಾಮಗೌಡ ಸೇರಿದಂತೆ ಹಲವು ಮಠಾಧೀಶರು ಹಾಗೂ ಜನಪ್ರತಿನಿಧಿಗಳು ಆಗಮಿಸುವರು.

ಸಂಜೆ 6 ಗಂಟೆಗೆ ಯುವ ಜನೋತ್ಸವ–ಅಂದು ಸಂಜೆ 6 ಗಂಟೆಗೆ ನಡೆಯುವ ಯುವಜನೋತ್ಸವ ಕಾರ್‍ಯಕ್ರಮದ ಸಾನ್ನಿಧ್ಯವನ್ನು ಮುಗಳಖೋಡದ ಡಾ. ಮುರಘರಾಜೇಂದ್ರ ಶ್ರೀ ವಹಿಸುವರು. ಚಿತ್ರದುರ್ಗ ಭೋವಿಮಠದ ಜಗದ್ಗುರು ಇಮ್ಮಡಿ ಸಿದ್ಧರಾಮೇಶ್ವರ ಶ್ರೀ, ಹಾವೇರಿಯ ಸದಾಶಿವ ಶ್ರೀ, ಬೈಲೂರಿನ ನಿಜಗುಣಾನಂದ ಶ್ರೀ, ಡಾ. ವಿಶ್ವಪ್ರಭು ಶಿವಾಚಾರ್ಯ, ಶರಣಬಸವ ಶಿವಾಚಾರ್ಯ, ಶಿವಲಿಂಗ ಪಂಡಿತಾರಾಧ್ಯ ಶಿವಾಚಾರ್ಯ, ಅಭಿನವ ಮೃತ್ಯುಂಜಯ ಶ್ರೀ, ಡಿಐಜಿಪಿ ರವಿ ಚನ್ನಣ್ಣವರ, ಶಾಸಕರಾದ ಹನಮಂತ ನಿರಾಣಿ, ಮಹೇಂದ್ರ ತಮ್ಮಣ್ಣವರ, ಐಎಎಸ್ ಅಧಿಕಾರಿ ಇಬ್ರಾಹಿಂ ಮೈಗೂರ, ಡಿಎಸ್ಪಿ ಜಾಕೀರ ಇನಾಂದಾರ ಮತ್ತಿತರರು ಆಗಮಿಸುವರು. ಕಾರ್‍ಯಕ್ರಮಕ್ಕೆ ಆಗಮಿಸುವ ಭಕ್ತಾಧಿಗಳಿಗೆ ಅನ್ನಪ್ರಸಾದ ಸೇರಿದಂತೆ ಮೂಲಭೂತ ಸೌಲಭ್ಯ ಒದಗಿಸವ ಕ್ರಮಗಳನ್ನು ಆಯಾ ಸಮಿತಿಯವರು ಕೈಗೊಂಡಿದ್ದಾರೆ. ತೇರದಾಳ ಸೇರಿದಂತೆ ಸುತ್ತಮುತ್ತಲ್ಲಿನ ಎಲ್ಲ ಭಕ್ತಾಧಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಬೇಕೆಂದು ಶಿವಾನಂದ ಶ್ರೀ, ಡಾ. ಮಹಾಂತಪ್ರಭು ಶ್ರೀ, ಗಂಗಾಧರ ದೇವರು ಹಾಗೂ ಪ್ರಭು ಶ್ರೀ ತಿಳಿಸಿದ್ದಾರೆ.

## ರಸ್ತೆ ಅಭಿವೃದ್ಧಿ ಕಾಮಗಾರಿ ಪರಿಶೀಲಿಸಿದ

### ಜಿ.ಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶಿಂಧೆ



ಬೆಳಗಾವಿ : ಪಿ.ಎಮ್.ಜಿ.ಎಸ್.ಎಮ್.ವಾಯ್–3 ಯೋಜನೆಯಲ್ಲಿ ಹುಕ್ಕೇರಿ ತಾಲೂಕಿನ ಚಿಕ್ಕಾಲಗುಡ್ಡ ದಿಂದ ಆನಂದಪೂರ ಆರ್.ಸಿ. ವ್ಹಾಯಾ ತುದಿಮೆಳ ತೋಟ, ಉಳ್ಳಾಗಡ್ಡಿ ಖಾನಾಪೂರ ಒಟ್ಟು 7.433 ಕಿಮೀ ಉದ್ದದ ಅಂದಾಜು 439.28 ಲಕ್ಷ ಮೊತ್ತದ ಅಭಿವೃದ್ಧಿ ಕಾಮಗಾರಿ ರಸ್ತೆಯನ್ನು ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹ ಅಧಿಕಾರಿಗಳಾದ ರಾಹುಲ್ ಶಿಂಧೆ ಅವರು ಪರಿಶೀಲಿಸಿದರು.

3.91 ಕಿಮೀ ರಸ್ತೆಯು ಪೂರ್ಣಗೊಂಡಿದ್ದು, ಬಾಕಿ ಉಳಿದ 3.52 ಕಿಮೀ ರಸ್ತೆಯು ರೈತರ ತಕರಾರಿನಿಂದ ಸ್ಥಗಿತವಾಗಿದರಿಂದ ರಸ್ತೆಯನ್ನು ನಕ್ಷೆಯಲ್ಲಿ (ಆಂಖಿಕ–ಒಂಕ) ಗುರುತಿಸಿದಂತೆ ಪೂರ್ಣಗೊಳಿಸುವುದು. ಸಮಂಜಸವಾಗಿರುವದರಿಂದ ರಸ್ತೆಯ ಉದ್ದಕ್ಕೆ ಬರುವ ಎರಡು ಭಾಗದ ರೈತರಿಗೆ ತೀಳಿ ಹೇಳಿ ಅವರಿಂದ ಅನುಮತಿ ಪತ್ರಕ್ಕೆ ಸಹಿ ಪಡೆದುಕೊಂಡು ಕಾಮಗಾರಿಯನ್ನು ಕೈಗೊಳ್ಳಲು ಅನುವು ಮಾಡಿಕೊಡುವಂತೆ ತಾಲೂಕಾ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಹಾಗೂ ಸಂಬಂಧಿಸಿದ ಪಂಚಾಯತ ಅಧ್ಯಕ್ಷರಿಗೆ ಸೂಚಿಸಿದರು. ಸದರೀ ಕೆಲಸವನ್ನು ಕೂಡಲೇ ಕೈಗೊಂಡು ಪತ್ರವನ್ನು ಸಂಬಂಧಿಸಿದ ಯೋಜನಾ ವಿಭಾಗ (PMGSY) ಅವರಿಗೆ ಹಸ್ತಾಂತರಿಸಲು ಸೂಚಿಸಿದರು.

# ತಹಶೀಲ್ ಕಚೇರಿಯಲ್ಲಿ ಎಸ್‌ಡಿಎ ಆತ್ಮಹತ್ಯೆ ಕೇಸ್: ಸಚಿವ ಸತೀಶ ಜಾರಕಿಹೊಳಿ- ಜಿಲ್ಲಾಧಿಕಾರಿ ಹೇಳಿದ್ದೇನು?

**ಬೆಳಗಾವಿ:** ಬೆಳಗಾವಿ ತಹಶೀಲ್ ಕಚೇರಿಯಲ್ಲಿ ದ್ವಿತೀಯ ದರ್ಜೆ ನೌಕರ ರುದ್ರಣ್ಣ ಯಡವಣ್ಣವರ ಆತ್ಮಹತ್ಯೆ ಪ್ರಕರಣದಲ್ಲಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಆಪ್ತ ಸಹಾಯಕನ ಕಿರುಕುಳ ಕಾರಣ ಎಂಬ ಆರೋಪಕ್ಕೆ ಬೆಳಗಾವಿಯಲ್ಲಿ ಸಚಿವ ಸತೀಶ ಜಾರಕಿಹೊಳಿ ಪ್ರತಿಕ್ರಿಯಿಸಿದ್ದಾರೆ.

ಆಪ್ತ ಸಹಾಯಕ ಮಾಡಿರಬಹುದು. ಅದಕ್ಕೂ ಸಚಿವರಿಗೂ ಏನು ಸಂಬಂಧ. ನೇರವಾಗಿ ಸಚಿವರ ಹೆಸರು ಹೇಳಿಲ್ಲ. ಸಚಿವರ ಪಿಎ ಹೆಸರನ್ನು ಮೃತ ನೌಕರ ಹೇಳಿದ್ದಾನೆ. ಹಾಗಾಗಿ, ಪಿಎ ವಿರುದ್ಧ ಪೊಲೀಸರು ವಿಚಾರಣೆ ನಡೆಸಬೇಕು ಎಂದು ಸತೀಶ ಜಾರಕಿಹೊಳಿ ಹೇಳಿದರು.

ಸಚಿವ ಸತೀಶ ಜಾರಕಿಹೊಳಿ, ಜಿಲ್ಲಾಧಿಕಾರಿ ಪ್ರತಿಕ್ರಿಯೆ

ಪ್ರಕರಣದಲ್ಲಿ ಏನಾಗಿದೆ..? ಯಾಕೆ ಆಗಿದೆ..? ಎಂದು ಪೊಲೀಸರು ತನಿಖೆ ನಡೆಸಬೇಕು. ಯಾರಿಂದ ಆತ್ಮಹತ್ಯೆ ಆಗಿದೆ ಎಂದು ಈಗಲೇ ಹೇಳಲು ಬರುವುದಿಲ್ಲ. ಹಾಗಾಗಿ, ಪೊಲೀಸ್ ತನಿಖೆಯ ಬಳಿಕ ಸತ್ಯಾಂಶ ಹೊರ ಬರಬೇಕು ಎಂದರು.



ಕಚೇರಿಯಲ್ಲಿ ನಡೆಯುತ್ತಿದ್ದ ಅನ್ಯಾಯದ ವಿರುದ್ಧ ಹೋರಾಡಿ ಎಂದು ವಾಟ್ಸ್‌ಆಯಪ್ ಗ್ರೂಪ್‌ನಲ್ಲಿ ಮೃತನು ಮೆಸೇಜ್ ಮಾಡಿರುವ ಬಗ್ಗೆ ಪೊಲೀಸರು ತನಿಖೆ ಮಾಡಬೇಕು. ಅಲ್ಲಿಯವರೆಗೂ ಏನೂ ಹೇಳಲು ಬರುವುದಿಲ್ಲ. ನಾನು ತನಿಖಾ ಅಧಿಕಾರಿ ಅಲ್ಲ. ತನಿಖೆಯ ವರದಿ ಬರುವವರೆಗೂ ಕಾಯ್ದು ನೋಡೋಣ ಎಂದು ಸತೀಶ ಜಾರಕಿಹೊಳಿ ಸ್ಪಷ್ಟಪಡಿಸಿದರು.

**ಜಿಲ್ಲಾಧಿಕಾರಿ ಹೇಳಿದ್ದೇನು..?** ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ್ದು, ಆತ್ಮಹತ್ಯೆ ಬಗ್ಗೆ ಬೆಳಗ್ಗೆ ಗೊತ್ತಾಯಿತು. ಕುಟುಂಬಸ್ಥರಿಗೆ ನಾನು ವೈಯಕ್ತಿಕವಾಗಿ ಸಂತಾಪ ಸೂಚಿಸುತ್ತೇನೆ. ಡಿಸಿಪಿ ಹಾಗೂ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಸದ್ಯ ತನಿಖೆ ಜಾರಿಯಲ್ಲಿದೆ. ನಮ್ಮ ಎಲ್ಲ ಸಹಕಾರವನ್ನು ಪೊಲೀಸ್ ಇಲಾಖೆಗೆ ಕೊಡುತ್ತೇವೆ. ಮೃತ ವ್ಯಕ್ತಿಯಿಂದ ಯಾವುದೇ ಮನವಿ ಬಂದಿರಲಿಲ್ಲ. ವಾಟ್ಸ್‌ಆಯಪ್ ಮೆಸೇಜ್ ಬಗ್ಗೆ ತನಿಖೆ ಆಗಬೇಕು. ಈ ಬಗ್ಗೆ ತನಿಖೆ ಮಾಡಲು ಪೊಲೀಸರಿಗೆ ಹೇಳಿದ್ದೇನೆ. ಸೂಕ್ಷ್ಮತೆಯಿಂದ ತನಿಖೆ ಮಾಡಲು ತಿಳಿಸಿದ್ದೇನೆ. ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ ಯಾವುದೇ ಒತ್ತಡ ಇಲ್ಲದೇ ತನಿಖೆ ಮಾಡುತ್ತೇವೆ. ಕಂದಾಯ ಇಲಾಖೆಯ ಮುಖ್ಯಸ್ಥ ನಾನೇ ಇರುತ್ತೇನೆ. ಹಾಗಾಗಿ, ಪೊಲೀಸ್ ಇಲಾಖೆಯ ತನಿಖೆಗೆ ಎಲ್ಲಾ ರೀತಿಯ ಸಹಕಾರ ನೀಡಲಾಗುವುದು. ತನಿಖೆಯ ಬಳಿಕವಷ್ಟೇ ಸತ್ಯಾಂಶ ಹೊರಬರಲಿದೆ ಎಂದರು.

ಮಲ್ಲೇಶ್ವರದ ಬಿಜೆಪಿ ರಾಜ್ಯ ಕಾರ್ಯಾಲಯದಲ್ಲಿ ಮಾಧ್ಯಮಗಳ ಜೊತೆ ಮಾತನಾಡಿದ ಅವರು, ಅನೇಕ ದಿನಗಳಿಂದ ನೊಂದಿದ್ದು, ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ರುದ್ರಣ್ಣ ವಾಟ್ಸ್ ಆಯಪ್ ಸಂದೇಶ ಕಳಿಸಿದ್ದಾರೆ. ನನ್ನ ಸಾವಿಗೆ ಲಕ್ಷ್ಮಿ ಹೆಬ್ಬಾಳ್ಕರ್ ಅವರ ಆಪ್ತ ಕಾರ್ಯದರ್ಶಿ ಕಾರಣ ಎಂದು ಪತ್ರದಲ್ಲಿ ತಿಳಿಸಿದ್ದಾರೆ. ವಾಲ್ಮೀಕಿ ಅಭಿವೃದ್ಧಿ ನಿಗಮದ ಅಧಿಕಾರಿ ಚಂದ್ರಶೇಖರ್ ಆತ್ಮಹತ್ಯೆ ಸಂದರ್ಭದಲ್ಲೂ ಇದೇ ಮಾದರಿ ಪತ್ರ ಬರೆದಿಡಲಾಗಿತ್ತು ಎಂದು ಹೇಳಿದರು. ಹೇಗೆ ಈಶ್ವರಪ್ಪ ಅವರು ರಾಜೀನಾಮೆ ಕೊಟ್ಟಿದ್ದರೋ ಅದೇ ಮಾದರಿಯಲ್ಲಿ ಲಕ್ಷ್ಮಿ ಹೆಬ್ಬಾಳ್ಕರ್ ರಾಜೀನಾಮೆ ಕೊಡಬೇಕೆಂದು ಆಗ್ರಹಿಸಿದರು.

# ವಕ್ಫ್ ಹೆಸರಿನಲ್ಲಿ ರೈತರ ಆಸ್ತಿ ಕಸಿಯಲು ಸರ್ಕಾರ ಪಿತೂರಿ



**ಗೋಕಾಕ:** ವಿಜಯಪುರ ಸೇರಿ ರಾಜ್ಯದ ವಿವಿಧ ಜಿಲ್ಲೆಗಳಲ್ಲಿಯ ಹಿಂದು ಧಾರ್ಮಿಕ ಕೇಂದ್ರಗಳ ಆಸ್ತಿಯನ್ನು ಹಾಗೂ ರೈತರ ಜಮೀನುಗಳನ್ನು ಅಕ್ರಮವಾಗಿ ಕಾಂಗ್ರೇಸ್ ನೇತ್ರತ್ವದ ಸಿದ್ಧರಾಮಯ್ಯ ಸರಕಾರ ವಕ್ಫ ಬೋರ್ಡ ಆಸ್ತಿಯೆಂದು ಅಧಿಕಾರಿಗಳ ಮೂಲಕ ವರ್ಗಾಯಿಸಲು ಪಿತುರಿ ನಡೆಸುತ್ತಿದೆ ಎಂದು ಬಿಜೆಪಿ ಗ್ರಾಮೀಣ ಮಂಡಲ ಅಧ್ಯಕ್ಷ ರಾಜೇಂದ್ರ ಗೌಡಪ್ಪಗೋಳ ರಾಜ್ಯ ಸರಕಾರದ ವಿರುದ್ಧ ಹರಿಹಾಯ್ದರು.

ಅವರು ಬಿಜೆಪಿ ನಗರ ಹಾಗೂ ಗ್ರಾಮೀಣ ಮಂಡಲದಿಂದ ಹಮ್ಮಿಕೊಂಡ ಬೃಹತ್ ಪ್ರತಿಭಟನೆಯಲ್ಲಿ ಭಾಗವಹಿಸಿ, ನಗರದ ಬಸವೇಶ್ವರ ವೃತ್ತದಿಂದ ಪ್ರತಿಭಟನೆಯ ಮೂಲಕ ತಹಶೀಲದಾರ ಕಚೇರಿಗೆ ಆಗಮಿಸಿ ತಹಶೀಲದಾರ ಡಾ.ಮೋಹನ ಭಸ್ಮೆ ಅವರಿಗೆ ಮನವಿ ಸಲ್ಲಿಸಿ ಮಾತನಾಡಿದರು.

ಶಾಂತಿ, ಸಾಮರಸ್ಯದ ನಾಡಾದ ಕರುನಾಡಿನಲ್ಲಿ ರಾಜ್ಯದ ಸಿದ್ಧರಾಮಯ್ಯನವರ ಸರಕಾರ ಅಲ್ಪಸಂಖ್ಯಾತರ ಒಲೈಕೆ ಮಾಡುತ್ತ ಆತಂಕದ ವಾತಾವರಣ ಸೃಷ್ಟಿಸುತ್ತಿದೆ. ಪ್ರಧಾನಿ ನರೇಂದ್ರ ಮೋದಿಯವರು ದೇಶದ ಜನತೆಯ ಹಿತದೃಷ್ಟಿಯಿಂದ ಮತ್ತು ವಕ್ಫಬೋರ್ಡನಲ್ಲಿ ನಡೆಯುತ್ತಿರುವ ಅಕ್ರಮಗಳನ್ನು ಗಮನಿಸಿ ವಕ್ಫಕಾಯ್ದೆ ತಿದ್ದುಪಡಿ ತರುವ ವಿಧೇಯಕ ಮಂಡಿಸಿದೆ. ಇದು ಜಂಟಿ ಪಾರ್ಲಿಮೆಂಟರಿ ಬೋರ್ಡನ ಪರಿಶೀಲನೆಯಲ್ಲಿದೆ. ಈ ತಿದ್ದುಪಡಿ ಜಾರಿಯಾಗುವುದು ಬಹುತೇಕ ಖಚಿತವಾಗುತ್ತಿದ್ದಂತೆ ವಕ್ಫ ಬೋರ್ಡ ತನ್ನ ಕರಾಳ ಕೈಚಳಕವನ್ನು ಮಾಡುವ ಮೂಲಕ ವಿಜಯಪುರ ಜಿಲ್ಲೆಯ ಹೊನ್ನಾವಡದ 1.500 ಎಕರೆ ರೈತರ ಜಮೀನು ವಕ್ಫ ಆಸ್ತಿಯೆಂದು ಘೋಷಿಸಿ ತಹಶೀಲ್ದಾರರಿಂದ ಪುಷ್ಠಿಕರಿಸಿ ನೋಟಿಸ್ ನೀಡಲಾಗಿದೆ. ಬೆಂಗಳೂರಿನ ವಿಧಾನ ಸೌಧವು ಸೇರಿದಂತೆ ಹಲವಾರು ಪ್ರಮುಖ ಆಸ್ತಿಗಳು ವಕ್ಫಗೆ ಸೇರಿದ್ದು ಎಂದು ಮುಸ್ಲಿಂ ನಾಯಕರು ಹೇಳಿಕೆ ನೀಡುತ್ತಿದ್ದಾರೆ. ಅಲ್ಲದೇ ರಾಜ್ಯದ ವಿವಿಧ ಜಿಲ್ಲೆಗಳ ಧಾರ್ಮಿಕ ಕೇಂದ್ರಗಳ ಆಸ್ತಿಯನ್ನು ವಕ್ಫ ತನ್ನ ವಶಕ್ಕೆ ಪಡೆಯಲು ಯತ್ನಿಸುತ್ತಿದೆ ಇದಕ್ಕೆ ಸಿಎಮ್ ಸಿದ್ಧರಾಮಯ್ಯ ಹಾಗೂ ಸಚಿವ ಬಿ ಝಡ್ ಜಮೀರಹ್ಮದ ಕಾರಣ ಎಂದು ದೂರಿದರು. ಸಿದ್ಧರಾಮಯ್ಯನವರು ಬಾಯಿಮಾತಲ್ಲಿ ನೋಟಿಸ್ ಹಿಂಪಡೆಯಲು ಹೇಳಿದರೆ ಸಾಲದು ಪತ್ರರೂಪದಲ್ಲಿ ಜಾರಿಯಾಗಬೇಕು ಎಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ನಗರ ಮಂಡಲ ಅಧ್ಯಕ್ಷ ಭೀಮಶಿ ಭರಮನ್ನವರ, ನಗರಸಭೆ ಅಧ್ಯಕ್ಷ ಪ್ರಕಾಶ ಮುರಾರಿ, ಮುಖಂಡರಾದ ಪ್ರಮೋದ ಜೋಶಿ, ಸುರೇಶ ಸನದಿ, ಶಶಿಧರ ದೇಮಶೆಟ್ಟಿ, ಶಕೀಲ ಧಾರವಾಡಕರ, ಬಸವರಾಜ ಹಿರೇಮಠ, ಜಯಾನಂದ ಹುಣಚ್ಯಾಳ, ಶ್ರೀರಂಗ ನಾಯ್ಕ, ಪುಂಡಲೀಕ ವಣ್ಣೂರ, ಬಸವರಾಜ ಆರೇನ್ನವರ, ವಿಶ್ವನಾಥ ಬಿಳ್ಳೂರ, ಹರೀಶ ಬೂದಿಹಾಳ, ಲಕ್ಕಪ್ಪ ಬಂಡಿ, ಯಲ್ಲಪ್ಪ ಹಳ್ಳೂರ, ಹನಮಂತ ಯಡ್ರಾಂವಿ, ಸದರಜೋಶಿ, ಭೀಮಶಿ ಕೊಳವಿ, ಯಲ್ಲಪ್ಪ ಬಂಗೆನ್ನವರ, ವಿರೇಂದ್ರ ಎಕ್ಕೇರಿಮಠ, ಶಿವಾನಂದ ಪಾಟೀಲ, ಹನಮಂತ ನಿಲಜಗಿ, ಮಹಿಳಾ ಮೋರ್ಚಾ ಅಧ್ಯಕ್ಷೆ ರಾಜೇಶ್ವರಿ ಒಡೆಯರ, ಯುವಮೋರ್ಚಾ ಅಧ್ಯಕ್ಷ ಮಂಜು ಪ್ರಭುನಟ್ಟಿ, ರೈತ ಮೋರ್ಚಾ ಅಧ್ಯಕ್ಷ ಸುರೇಶ ಪತ್ತಾರ, ಎಸ್‌ಸಿ ಮೋರ್ಚಾ ಅಧ್ಯಕ್ಷ ಮಂಜುನಾಥ ಮಾವರಕರ ಸೇರಿದಂತೆ ನೂರಾರು ಜನ ಬಿಜೆಪಿ ಕಾರ್ಯಕರ್ತರು ಇದ್ದರು.

# ವಕ್ಫ್ ಕಾಯ್ದೆ ರದ್ದು ಪಡಿಸಲು ಆಗ್ರಹಿಸಿ ಮನವಿ



**ಬಸವನಬಾಗೇವಾಡಿ:** ಪಟ್ಟಣದಲ್ಲಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ತಾಲೂಕು ಘಟಕವು ತಲೆತಲಾಂತರಗಳಿಂದ ಉಳುಮೆ ಮಾಡಿಕೊಂಡು ಬರುತ್ತಿರುವ ರೈತ ಬಾಂಧವರ ಜಮೀನುಗಳ ಪಹಣಿಯಲ್ಲಿ ವಕ್ಫ್ ಆಸ್ತಿ ಎಂದು ನಮೂದಿಸುತ್ತಿರುವದನ್ನು ಸರ್ಕಾರ ರದ್ದುಪಡಿಸಬೇಕು. ವಕ್ಫ್ ಕಾಯ್ದೆರದ್ದು ಪಡಿಸಬೇಕೆಂದು ಆಗ್ರಹಿಸಿ ತಹಸೀಲ್ದಾರ ವೈ.ಎಸ್.ಸೋಮನಕಟ್ಟಿ ಅವರ ಮುಖಾಂತರ ಸರ್ಕಾರಕ್ಕೆ ಮನವಿ ಸಲ್ಲಿಸಿತು.

ಪಟ್ಟಣದ ಬಸವೇಶ್ವರ ವೃತ್ತದಲ್ಲಿ ಜಮಾಯಿಸಿದ ರೈತ ಬಾಂಧವರು ಮೆರವಣಿಗೆ ಮೂಲಕ ತಹಸೀಲ್ದಾರ ಕಚೇ-ರಿಗೆ ಆಗಮಿಸಿ ಕೆಲ ಹೊತ್ತು ಧರಣಿ ನಡೆಸಿ ವಕ್ಫ್ ಕಾಯ್ದೆ ವಿರುದ್ಧ ಘೋಷಣೆ ಕೂಗಿದರು. ಈ ಸಂದರ್ಭದಲ್ಲಿ ರೈತ ಸಂಘದ ತಾಲೂಕಾಧ್ಯಕ್ಷ ವಿನೋದ ಪವಾರ ಮಾತನಾಡಿ, ರೈತರ ಜಮೀನುಗಳ ಪಹಣಿಯ ಹಕ್ಕುಗಳ ಕಾಲಂನಲ್ಲಿ ಕರ್ನಾಟಕ ವಕ್ಫ್ ಮಂಡಳಿ ಹೆಸರು ನಮೂದಿಸುವ ಮೂಲಕ ರೈತರನ್ನು ಒಕ್ಕಲೆಬ್ಬಿಸುವ ಹುನ್ನಾರ ನಡೆಯುತ್ತಿದೆ. ರೈತರಿಗೆ ಆಗುತ್ತಿರುವ ಅನ್ಯಾಯವನ್ನು ತಡೆಗಟ್ಟಲು ವಕ್ಫ್ ಮಂಡಳಿಯ 1995 ರ ಕಾಯ್ದೆಯನ್ನು ರದ್ದುಪಡಿಸಬೇಕು. ಇದು ಸಮಾನತೆ, ಏಕತೆ, ನ್ಯಾಯದ ತತ್ವಗಳಿಗೆ ನೇರ ಸಂಘರ್ಷಕ್ಕಿಡು ಮಾಡಿದಂತಾಗಿದೆ. ರೈತರ ಅನುಮತಿಯಿಲ್ಲದೇ ರೈತರ ಜಮೀನುಗಳ ಪಹಣಿಗಳಲ್ಲಿ ಕರ್ನಾಟಕ ವಕ್ಫ್ ಮಂಡಳಿಯ ಆಸ್ತಿಯೆಂದು ನಮೂದಿಸುತ್ತಿರುವದು ರೈತರಿಗೆ ಕೊಡಲಿ ಪೆಟ್ಟು ನೀಡಿದಂತದಾಗಿದೆ. ಇದನ್ನು ಸರ್ಕಾರ ಸರಿಪಡಿಸಿ ರೈತರಿಗೆ ನ್ಯಾಯ ಒದಗಿಸಬೇಕೆಂದು ಆಗ್ರಹಿಸಿದರು.

ಧರಣಿಯಲ್ಲಿ ಆನಂದ ಲಮಾಣಿ, ಶಿವರಾಜ ಲಮಾಣಿ, ಸಚೀನ ಚವ್ಹಾಣ, ಪಿಂಟು ಲಮಾಣ, ಮೀಟು ಜಾಧವ, ಶ್ರೀಕಾಂತ ರಾಠೋಡ, ಕಾಶೀನಾಥ ರಾಠೋಡ, ಸಾಗರ ಚವ್ಹಾಣ, ರಮೇಶ ರಾಠೋಡ, ಕೃಷ್ಣಾ ಚವ್ಹಾಣ, ಮೋಹನ ರಾಠೋಡ ಇತರರು ಇದ್ದರು.

**ಚೂರು-ಪಾರು**

## ವಕ್ಫ್: ತೇರದಾಳ ರೈತರಿಗೆ ಬಿಜೆಪಿ ಅವಧಿಯಲ್ಲಿನ ನೋಟಿಸ್

ರಬಕವಿ-ಬನಹಟ್ಟಿ,ನ4: ವಕ್ಫ್ ಆಸ್ತಿ ವಿಷಯವಾಗಿ ಈ ಹಿಂದಿನ ಬಿಜೆಪಿ ಆಡಳಿತಾವಧಿಯಲ್ಲಿ ತೇರದಾಳದ 420 ಕ್ಕೂ ಅಧಿಕ ರೈತರಿಗೆ ನೋಟಿಸ್ ನೀಡಲಾಗಿದೆ. ಇದನ್ನು ಮರೆತು ತಾವು ಮಾಡಿದ ತಪ್ಪಿಗೆ ತಾವೇ ಪ್ರತಿಭಟಿಸುತ್ತಿರುವದು ಮೂರ್ಖತನದ ಪರಮಾವಧಿಯೆಂದು ತೇರದಾಳ ಕಾಂಗ್ರೆಸ್ ಮುಖಂಡ ಸಿದ್ದು ಕೊಣ್ಣೂರ ಲೇವಡಿ ಮಾಡಿದರು.



ಇಂದು ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ತೇರದಾಳ ಕ್ಷೇತ್ರದಲ್ಲಿ ವಕ್ಫ್ ಆಸ್ತಿ ವಿವಾದ ಸೃಷ್ಟಿಸಿ ಪ್ರತಿಭಟನಾ ರ‍್ಯಾಲಿ ನಡೆಸುತ್ತಿದೆ. ತಮ್ಮ ಅವಧಿಯಲ್ಲಿಯೇ ರೈತರಿಗೆ ನೋಟಿಸ್ ಜಾರಿ ಮಾಡಿ ತಾವೇ ಪ್ರತಿಭಟಿಸುತ್ತಿರುವದು ಎಷ್ಟು ಸಮಂಜಸವೆಂದು ಕೊಣ್ಣೂರ ಪ್ರಶ್ನಿಸಿದರು.

ಈ ಹಿಂದೆ 2019 ರಲ್ಲಿ ಜೆಡಿಎಸ್-ಬಿಜೆಪಿ ಮೈತ್ರಿಕೂಟ ಸರ್ಕಾರವಿದ್ದಾಗ ಅಲ್ಲಲ್ಲಿ ನೋಟಿಸ್ ಜಾರಿ ಮಾಡಿದ್ದಾರೆ. ಇದನ್ನು ಮರೆತು ಕಾಂಗ್ರೆಸ್ ಮೇಲೆ ರಾಜಕೀಯ ಗೂಬೆ ಕೂಡ್ರಿಸುತ್ತಿರುವ ಬಿಜೆಪಿ ವಿನಾಕಾರಣ ಪ್ರತಿಭಟನೆಗಿಳಿಯುತ್ತಿರುವದು ಸರಿಯಲ್ಲವೆಂದರು.

## ಡಾ. ಅಂಬೇಡ್ಕರ್ ಪ್ರತಿಮೆ ನಿರ್ಮಾಣ ಕಾಮಗಾರಿಗೆ ಚಾಲನೆ



ಮುದ್ದೇಬಿಹಾಳ: ಡಾ ಬಿ.ಅರ್ ಅಂಬೇಡ್ಕರ್ ವಿಚಾರಗಳನ್ನು ಪೂಜೆಯಲ್ಲಿ ಇಡದೆ ಆಚರಣೆಯಲ್ಲಿ ಇಡಬೇಕು ಬಾಬಾಸಾಹೇಬ್ರು ಸರ್ವ ಜನಾಂಗಕ್ಕೆ ನಾಯಕರು ನಾವು ಎಲ್ಲಾರು ಸ್ವತಂತ್ರವಾಗಿ ಬದಕಬೇಕಾದ್ರೆ. ಮಹಾನ್ ನಾಯಕ ಡಾ ಬಾಬಾ ಸಾಹೇಬ್ ಅಂಬೇಡ್ಕರ್ ರವರ ಸಂವಿಧಾನ ಬರೆದು ಕೊಟ್ಟ ಮೇಲೆ ಯಾರೇ ದೌರ್ಜನ್ಯ ಮಾಡಿದರೆ ಕಾಯುವುದು ದೇವರು ಅಲ್ಲಾ ಅಂಬೇಡ್ಕರವರು ಕೊಟ್ಟ ಸಂವಿಧಾನ ಎಂದು ಶಿವಾನಂದ ವಾಲಿ ಹೇಳಿದರು. ತಾಲೂಕಿನ ಹಿರೇಮುರಾಳ ಗ್ರಾಮದ ಅಂಬೇಡ್ಕರ್ ಸರ್ಕಲ್ ಹತ್ತಿರ ಡಾ ಬಿ ಅರ್ ಅಂಬೇಡ್ಕರ್ ಪ್ರತಿಮೆ ಸ್ಥಾಪಿಸುವ ಕಾಮಗಾರಿಗೆ ಚಾಲನೆ ನೀಡಿದರು. ಅಂಬೇಡ್ಕರ್ ಸೇನೆ ತಾಲೂಕ ಅಧ್ಯಕ್ಷ ಪ್ರಕಾಶ ಚಲವಾದಿ, (ಸರೂರ), ಬಸವರಾಜ ಸರೂರ, ರೇವಣಸಿದ್ದಪ್ಪ ಮುರಾಳ, ಅಲ್ಲಿಸಾಬ್ ಸುರಪುರ ಎಲ್ಲರೂ ಜಂಟಿಯಾಗಿಡಾ ಬಿ ಅರ್ ಅಂಬೇಡ್ಕರ್ ವಿಚಾರಗಳನ್ನು ಅವರ ತತ್ವ ಆದರ್ಶಗಳನ್ನು ತಿಳಿವಳಿಕೆಯನ್ನು ನೀಡಿದರು.ಗ್ರಾಮದ ಅಂಬೇಡ್ಕರ್ ಸರ್ಕಲ್ ಹತ್ತಿರ ಪ್ರತಿಮೆ ಸ್ಥಾಪಿಸುವ ಕಾಮಗಾರಿಯನ್ನು ಗ್ರಾಮ ಪಂಚಾಯತಿ ಅಧ್ಯಕ್ಷ ದೇವೇಂದ್ರಪ್ಪ ಬೆಳ್ಳಿಕಟ್ಟಿ , ಗಿರೀಶಗೌಡ ಪಾಟೀಲ, ಬಸವಂತರಾಯ ನಾಗರತ್ತಿ ಹಾಗೂ ಗ್ರಾಮ ಪಂಚಾಯತಿ ಸದಸ್ಯರು ಚಾಲನೆ ನೀಡಿದರು. ಈ ವೇಳೆ ಯಮನಪ್ಪ ಚಲವಾದಿ, ಯಲ್ಲಪ್ಪ ಚಲವಾದಿ, ಬೈಲಪ್ಪ ಚಲವಾದಿ, ನಿಂಗಣ್ಣ ಜಲವಾದಿಗಿ, ಬಸವರಾಜ ಸರೂರ, ಪೀರಸಾಬ್ ಮುಲ್ಲಾ .ಮುದಪ್ಪಗೌಡ ಯಾಳವಾರ, ಅಪ್ಪಣ್ಣ ಧನ್ನೂರ, ಮಲ್ಲಣ್ಣ ಬಿಜ್ಜೂರ, ಶಿವಾನಂದ ವಾಲಿ, ರೇವಣಸಿದ್ದಪ್ಪ ಸರೂರ, ಈರಯ್ಯ ಹಿರೇಮಠ,ಅಪ್ಪು ಚಲವಾದಿ, ಶರಣು ಚಲವಾದಿ,ಪವಡೆಪ್ಪ ಚಲವಾದಿ, ರಮೇಶ್ ಚಲವಾದಿ,ದ್ಯಾವಪ್ಪ ಚಲವಾದಿ, ಸಂಜೀವಪ್ಪ ಚಲವಾದಿ,ಹಿರೇಮುರಾಳ ಗ್ರಾಮಸ್ಥರು,ಮಕ್ಕಳು ಸೇರಿದಂತೆ ಉಪಸ್ಥಿತರಿದ್ದರು.

# ವಕ್ಫ್ ಆಸ್ತಿ ವಿರೋಧಿಸಿ ಬಿಜೆಪಿ ಪ್ರತಿಭಟನೆ

## ಸಿ.ಎಂ. ಸಿದ್ದರಾಮಯ್ಯ ಸಚಿವ ಜಮೀರ್ ಅಹ್ಮದಖಾನ್ ರಾಜೀನಾಮೆಗೆ ಅಗ್ರಹ

ಬೆಳಗಾವಿ: ಶಾಂತಿ, ಸಾಮರಸ್ಯದ ನಾಡಾಗಿದ್ದ ರಾಜ್ಯವನ್ನು ಆಡಳಿತ ನಡೆಸುತ್ತಿರುವ ಕಾಂಗ್ರೆಸ್ ವಕ್ಫ್ ಮಂಡಳಿಯ ಮೂಲಕ ಅತ್ಯಂತ ಆತಂಕದ ಸ್ಥಿತಿಗೆ ತಳ್ಳುತ್ತಿದೆ. ಅದರಲ್ಲೂ ಕೇಂದ್ರದ ನರೇಂದ್ರ ಮೋದಿ ನೇತೃತ್ವದ ಸರಕಾರ ದೇಶದ ಜನತೆಯಹಿತದೃಷ್ಟಿಯಿಂದ ಹಾಗೂ ವಕ್ಫ್ ಮಂಡಳಿಯಲ್ಲಿ ಆಗುತ್ತಿದ್ದ ಅಕ್ರಮ ಗಮನದಲ್ಲಿಟ್ಟುಕೊಂಡು ವಕ್ಫ್ ಕಾಯ್ದೆಗೆ ತಿದ್ದುಪಡಿತರುವ ವಿಧೇಯಕ ಮಂಡಿಸಿದೆ. ಇದು ಜಂಟಿ ಪಾರ್ಲಿಮೆಂಟರಿ ಬೋರ್ಡ್‌ನ ಪರಿಶೀಲನೆಯಲ್ಲಿದೆ. ಈ ತಿದ್ದುಪಡಿಜಾರಿಯಾಗುವುದು ಬಹುತೇಕ ಖಚಿತವಾಗುತ್ತಿದ್ದಂತೆ ವಕ್ಫ್ ಬೋರ್ಡ್ ತನ್ನ ಕರಾಳ ಕೈಚಳಕವನ್ನು ಮಾಡುವ ಮೂಲಕಇಡೀ ದೇಶದಲ್ಲಿ ಸಾರ್ವಜನಿಕ ಆಸ್ತಿಯನ್ನು ಕಬಳಿಸುವ ಹುನ್ನಾರಕ್ಕೆ ಕೈಹಾಕಿದೆ. ಅದರಲ್ಲೂ ರಾಜ್ಯದಲ್ಲಿ ನಡೆಯುತ್ತಿರುವಇಂತಹ ಎಲ್ಲಾ ಕುಕೃತ್ಯಗಳಿಗೂ ಕಾಂಗ್ರೆಸ್ ಸರಕಾರ ಹಾಗೂ ಸಚಿವ ಜಮೀರ್ ಅಹಮದ್ ನೇರವಾಗಿ ಕುಮ್ಮಕ್ಕುಕೊಡುತ್ತಿರುವುದು ಇಡೀ ರಾಜ್ಯದ ಜನರ ಆತಂಕಕ್ಕೆ ಕಾರಣವಾಗಿದೆ.

ರಾಜ್ಯದ ವಿಜಯಪುರ ಜಿಲ್ಲೆ ಹೊನ್ನಾವಡದ ರೈತರ 1,500 ಎಕರೆ ಜಮೀನು ವಕ್ಫ್ ಆಸ್ತಿಯೆಂದು ಘೋಷಿಸಿ ತಹಸೀಲ್ದಾರರಿಂದ ಪುಷ್ಟಿಕರಿಸಿ ನೋಟೀಸ್ ನೀಡಲಾಗಿದೆ, ಬೆಂಗಳೂರಿನ ವಿಧಾನಸೌಧವೂ ಸೇರಿದಂತೆ ಹಲವಾರು ಪ್ರಮುಖ ಆಸ್ತಿಗಳು ವಕ್ಫ್ ಗೆಸೇರಿದ್ದು ಎಂದು ಮುಸ್ಲಿಂ ನಾಯಕರು ಹೇಳಿಕೆಯಿತ್ತಿದ್ದಾರೆ. ಹಾವೇರಿ ಜಿಲ್ಲೆಯಲ್ಲಿ 1649 ಆಸ್ತಿಗಳ ಹಕ್ಕಿಗಾಗಿ ವಕ್ಫ್ ಪ್ರತಿಪಾದಿಸುತ್ತಿದೆ.ಸವಣೂರು ತಾಲ್ಲೂಕು ಕಡಕೋಳ ಗ್ರಾಮಪಂಚಾಯಿತಿ ವ್ಯಾಪ್ತಿಯ ಹನುಮಂತ ದೇವಸ್ಥಾನದ ಅತಿಕ್ರಮಣಕ್ಕೆ ವಕ್ಫ್ ಬೋರ್ಡ್‌ಮುಂದಾಗಿದೆ. ಕೊಪ್ಪಳ ಜಿಲ್ಲೆಯ ಕುಕನೂರು ಪಟ್ಟಣ ಪಂಚಾಯಿತಿ ಕಾರ್ಯಾಲಯವೂ ವಕ್ಫ್ ಆಸ್ತಿ ಎಂದು ವಕ್ಫ್ ಹಕ್ಕುಮಂಡಿಸಿದೆ. ಸರಕಾರಿ ಅಧೀನದಲ್ಲಿರುವ ಆಸ್ತಿಗಳನ್ನೇ ತನ್ನದೆಂದು ವಕ್ಫ್ ಬೋರ್ಡ್ ಹೇಳುತ್ತಿದೆ. ಶ್ರೀರಂಗಪಟ್ಟಣ ತಾಲೂಕಿನಮಹದೇವಪುರ ಗ್ರಾಮದ ಚಿಕ್ಕಮ್ಮ ಚಿಕ್ಕದೇವಿ ದೇಗುಲಕ್ಕೆ ಸೇರಿದ 6 ಗುಂಟೆ ಜಮೀನು ವಕ್ಫ್ ಆಸ್ತಿ ಎಂದು ನಮೂದಾಗಿದೆ.ವಿಜಯಪುರ ಜಿಲ್ಲೆಯ 1500 ವರ್ಷ ಇತಿಹಾಸವಿರುವ ಸಿಂಧಗಿಯ ವಿರಕ್ತ ಮಠವೂ ವಕ್ಫ್ ಆಸ್ತಿ ಎಂದು ದಾಖಲೆಗಳನ್ನುಸೃಷ್ಟಿಸುತ್ತಿದ್ದಾರೆ. 2000 ವರ್ಷ ಇತಿಹಾಸವಿರುವ ಸೋಮನಾಥೇಶ್ವರ ದೇವಾಲಯವೂವಕ್ಫ್ ಆಸ್ತಿ ಎಂಬ ಹಕ್ಕು ಪ್ರತಿಪಾದನೆವಕ್ಫ್ ಮಂಡಳಿಯಿಂದ ಬರುತ್ತಿದೆ. ಕಲಬುರ್ಗಿ ಜಿಲ್ಲೆಯ ಚಿಂಚೋಳಿ ಮತ್ತು ಕಾಳಗಿತಾಲೂಕಿನ ಪೂರ್ವಜರಿಂದ ಬಂದಜಮೀನುಗಳನ್ನು ಅನುಭವಿಸುತ್ತಿದ್ದ ರೈತರಿಗೂ ವಕ್ಫ್ ಆಸ್ತಿ ಎಂದು ತಹಸೀಲ್ದಾರ್‌ನಿಂದ ನೋಟೀಸ್ ನೀಡಲಾಗಿದೆ. ಕರ್ನಾಟಕದವಿಜಯಪುರ ಜಿಲ್ಲೆ ಹೊನ್ನಾವಡದ ರೈತರ 1,500 ಎಕರೆ ಜಮೀನು ವಕ್ಫ್ ಆಸ್ತಿಯೆಂದು ಘೋಷಿಸಿ ತಹಸೀಲ್ದಾರರಿಂದಪುಷ್ಠಿಕರಿಸಿ ನೋಟೀಸ್ ನೀಡಿ ನಂತರ ಬಿಜೆಪಿಯ ಒತ್ತಾಯದಿಂದ ಹಿಂಪಡೆಯಲಾಗಿದೆ ಎಂದು ಮಾಜಿ ಸಚಿವ ಮುರುಗೇಶ ನಿರಾಣಿ ಹೇಳಿದರು.ಸೋಮವಾರ ರಾಜ್ಯ ಕಾಂಗ್ರೆಸ್ ಸರ್ಕಾರದ ವಿರುದ್ಧ ಬೆಳಗಾವಿ ನಗರದ ರಾಣಿ ಚೆನ್ನಮ್ಮ ಸರ್ಕಲ್ ದಿಂದ ಬೃಹತ್ ಪ್ರತಿಭಟನೆ ಮೆರವಣಿಗೆ ಮೂಲಕ ಜಿಲ್ಲಾಧಿಕಾರಿಗಳ ಕಚೇರಿಗೆ ತೆರಳಿ ಜಿಲ್ಲಾಧಿಕಾರಿ ಅವರಿಗೆ ಮನವಿ ಸಲ್ಲಿಸಿ ಬಿಜೆಪಿ ಮುಖಂಡರು ವಾಗ್ದಾಳಿ ನಡೆಸಿದರು.



ಬಿಜೆಪಿ ಜಿಲ್ಲಾಧ್ಯಕ್ಷ ಸುಭಾಷ ಪಾಟೀಲ ಮಾತನಾಡಿ, ವಕ್ಫ್ ಬೋರ್ಡ್‌ನಿಂದ ಆಗುತ್ತಿರುವ ಈ ರೀತಿಯ ಗೊಂದಲಗಳು ರಾಜ್ಯದಲ್ಲಿನ ಸಾಮರಸ್ಯಹದಗೆಡುವುದಕ್ಕೆ ಕಾರಣವಾಗಿದೆ. ಸರಕಾರದ ವಿವೇಚನೆಯಿಲ್ಲದೆ ಕೈಗೊಳ್ಳುತ್ತಿರುವ ನಿರ್ಧಾರಗಳಿಂದಾಗಿ ರಾಜ್ಯದ ಅನೇಕ ಆಸ್ತಿಗಳವ್ಯಾಜ್ಯ ಬೀದಿಗೆ ಬರುತ್ತಿದೆ. ಈಗಾಗಲೇ ಕಡಕೋಳದಲ್ಲಿ ಎರಡು ಕೋಮುಗಳ ನಡುವೆ ಸಂಘರ್ಷ ಪ್ರಾರಂಭವಾಗಿದೆ. ಇದುಇಡೀ ರಾಜ್ಯವನ್ನು ವ್ಯಾಪಿಸುವ ಸಾಧ್ಯತೆಯಿದೆ ಎಂದು ಹೇಳಿದರು.

ಮಾಜಿ ಶಾಸಕ ಸಂಜಯ್ ಪಾಟೀಲ ಹಾಗೂ ಮಹಾಂತೇಶ ಕವಟಗಿಮಠ ಮಾತನಾಡಿ ಇದೇ ತೆರನಾದ ನಿಲುವು ಮುಂದುವರೆಸಿದಲ್ಲಿ ರಾಜ್ಯದಲ್ಲಿ ಮುಂದಾಗುವ ಅನಾಹುತಗಳಿಗೆ ಕಾಂಗ್ರೆಸ್ ಸರಕಾರವೇ ನೇರವಾಗಿ ಹೊಣೆಯಾಗಬೇಕಾಗುತ್ತದೆ. ಮುಸ್ಲಿಂ ಓಲೈಕೆ ಹಾಗೂ ಹಿಂದೂ ವಿರೋಧಿ ನಿರ್ಧಾರಗಳನ್ನು ಕೈಗೊಳ್ಳುವ ತನ್ನ ಹಳೇ ಚಾಳಿಯನ್ನ ಕೈಬಿಡಬೇಕೆಂದು ಬಿಜೆಪಿ ಆಗ್ರಹಿಸುತ್ತದೆ.ಸಿದ್ದರಾಮಯ್ಯ ಅವರು ಅಧಿಕಾರಿಗಳ ಸಭೆ ನಡೆಸಿ ಪಹಣಿ ಪತ್ರದಲ್ಲಿ ವಕ್ಫ್ ಆಸ್ತಿ ಎಂಬುದಾಗಿ ನಮೂದು ಮಾಡದಂತೆತಾತ್ಕಾಲಿಕ ತಡೆ ಹಿಡಿದಿರುವುದು ಕೇವಲ ಚುನಾವಣೆಯ ತಂತ್ರಗಾರಿಕೆಯಾಗಿದೆ. ಬಿಜೆಪಿಯು ಈ ತಂತ್ರಗಾರಿಕೆಯನ್ನು ಒಪ್ಪುವುದಿಲ್ಲ.ಮುಂದಿನ ದಿನಗಳಲ್ಲಿ ರೈತರಿಗೆ ಇದು ಮರಣ ಶಾಸನವಾಗಿಯೇ ಮುಂದು ವರೆಯಲಿದೆ. ಮತ್ತದೇ ರೀತಿಯ ಕೃತ್ಯಗಳನ್ನು ಕಾಂಗ್ರೆಸ್ ತಕ್ಷಣ ಜಮೀರ್ ಅಹ್ಮದ್ ಅವರನ್ನು ಕೂಡಲೇ ಸಚಿವ ಸ್ಥಾನದಿಂದ ವಜಾ ಮಾಡಬೇಕು, ಸಿದ್ದರಾಮಯ್ಯ ಅವರು ರಾಜ್ಯದ ಜನರ ಕ್ಷಮೆ ಕೇಳಬೇಕು ಎಂದು ಹೇಳಿದರು.

ರಾಜ ಉಪಾಧ್ಯಕ್ಷರಾದ ಅನಿಲ್ ಬೆನಕೆ, ಮಹಾನಗರ ಜಿಲ್ಲಾಧ್ಯಕ್ಷರಾದ ಗೀತಾ ಸುತಾರ, ಚಿಕ್ಕೋಡಿ ಜಿಲ್ಲಾಧ್ಯಕ್ಷರಾದ ಸತೀಶ್ ಅಪ್ಪಾಜಿಗೋಳ, ಬಸವರಾಜ್ ಹುಂದ್ರಿ, ರಮೇಶ್ ದೇಶಪಾಂಡೆ, ಧನಂಜಯ ಜಾಧವ, ಯುವರಾಜ ಜಾಧವ,ಮುರುಗೇಂದ್ರಗೌಡ ಪಾಟೀಲ್, ಪ್ರಧಾನ ಕಾರ್ಯದರ್ಶಿ ಮಲ್ಲಿಕಾರ್ಜುನ್ ಮಾದಮ್ಮನವರ್, ಈರಯ್ಯ ಖೋತ, ರಾಜಶೇಖರ್ ಡೋಣಿ ಹಾಗೂ ಪದಾಧಿಕಾರಿಗಳು ಮತ್ತು ಕಾರ್ಯಕರ್ತರು ಉಪಸ್ಥಿತರಿದ್ದರು

# ರಾಜ್ಯ ಸರ್ಕಾರದ ನಡೆ ಖಂಡಿಸಿ ಪ್ರತಿಭಟನೆ

**ರಾಯಬಾಗ:** ರೈತರ ಪಹಣಿಯಲ್ಲಿ ವಕ್ಫ್ ಬೋರ್ಡ ಎಂದು ತಿದ್ದುಪಡಿ ಮಾಡಿ ರೈತರಿಗೆ ಅನ್ಯಾಯ ಮಾಡಿ, ವಕ್ಫ್ ಮಂಡಳಿ ಮೂಲಕ ರಾಜ್ಯವನ್ನು ಆತಂಕದ ಸ್ಥಿತಿಗೆ ತಳ್ಳುತ್ತಿರುವದನ್ನು ರಾಜ್ಯ ಸರ್ಕಾರ ನಡೆಯನ್ನು ಖಂಡಿಸಿ ಶಾಸಕ ಡಿ.ಎಮ್. ಐಹೊಳೆಯವರ ನೇತೃತ್ವದಲ್ಲಿ ಬಿಜೆಪಿ ಮುಖಂಡರು, ಕಾರ್ಯಕರ್ತರು ತಹಶೀಲ್ದಾರ ಸುರೇಶ ಮುಂಜೆ ಮೂಲಕ ರಾಜ್ಯಪಾಲರಿಗೆ ಸೋಮವಾರ ಮನವಿ ಸಲ್ಲಿಸಿದರು.

ಶಾಸಕ ಡಿ.ಎಂ.ಐಹೊಳೆ ಮಾತನಾಡಿ, ರೈತರ ಜಮೀನು, ಮಠ, ಮಂದಿರಗಳು, ದೇವಾಲಯಗಳು ವಕ್ಫ್ ಮಂಡಳಿಗೆ ಸೇರಿದ ಆಸ್ತಿಗಳೆಂದು ನಮೂದಾಗಿದೆ. ಇದು ಅಲ್ಪಸಂಖ್ಯಾತರನ್ನು ಓಲೈಕೆ ಮಾಡಿ ಕಾಂಗ್ರೆಸ್ಸ ಪಕ್ಷ ಮತ ಪಡೆಯುವ ಹುನ್ನಾರವಾಗಿದೆ. ತಮ್ಮ ಮತಕ್ಷೇತ್ರದಲ್ಲಿ ಕೆಲವು ಕಡೆಗಳಲ್ಲಿ ದೇವಸ್ಥಾನ ಜಮೀನುಗಳಿಗೆ, ದೇವಸ್ಥಾನಗಳಿಗೂ ಕೂಡಾ ವಕ್ಫ್ ಬೋರ್ಡ, ಸುನ್ನಿ ವಕ್ಫ್ ಬೋರ್ಡ ಎಂದು ಏಕಾಏಕಿ ನೋಟೀಸುಗಳು ಬರುತ್ತಿವೆ.

ಹೀಗಾಗಿ ರೈತರು, ಹಿಂದೂಗಳು, ಜನಸಾಮಾನ್ಯರು ಮುಂದಿನ ಜೀವನ ಹೇಗೆ ಎಂದು ಆತಂಕಕ್ಕೊಳಗಾಗಿದ್ದಾರೆ. ಆದ್ದರಿಂದ ರಾಜ್ಯ ಸರಕಾರ ತನ್ನ ನಿಲುವನ್ನು ಬದಲಿಸಿ ಈಗ ಬಂದಿರುವ ನೋಟೀಸಗಳನ್ನು ಹಿಂಪಡೆಯಬೇಕೆಂದು ಭ್ರಷ್ಟ ರಾಜ್ಯ ಸರಕಾರದ ವಿರುದ್ಧ ಬಿಜೆಪಿ ಪಕ್ಷದಿಂದ ಹೋರಾಟ ನಡೆಸಲಾಗುತ್ತಿದೆ ಎಂದರು.



**ಕಾಂಗ್ರೆಸ್ಸ ಸರಕಾರ ನಡೆಯನ್ನು ಖಂಡಿಸಿ ಪಟ್ಟಣದ ಅಭಾಜಿ ವೃತ್ತದ ಬಳಿ ಶಾಸಕ ಡಿ.ಎಮ್.ಐಹೊಳೆ ನೇತೃತ್ವದಲ್ಲಿ ಬಿಜೆಪಿ ಕಾರ್ಯಕರ್ತರು ಪ್ರತಿಭಟನೆ ನಡೆಸಿ ತಹಶೀಲ್ದಾರ ಸುರೇಶ ಮುಂಜೆ ಅವರಿಗೆ ಮನವಿ ಸಲ್ಲಿಸಿದರು.**

ಪ್ರತಿಭಟನೆಯಲ್ಲಿ ಬಿಜೆಪಿ ರಾಯಬಾಗ ಮಂಡಲ ಅಧ್ಯಕ್ಷ ಪೃಥ್ವಿರಾಜ ಜಾಧವ, ಕುಡಚಿ ಮಂಡಲ ಅಧ್ಯಕ್ಷ ಶ್ರೀಧರ ಮೂಡಲಗಿ, ಮಹೇಶ ಬಾತೆ, ಸದಾಶಿವ ಘೋರ್ಪಡೆ, ಅಣ್ಣಾಸಾಬ ಖೆಮಲಾಪುರೆ, ಬಸವರಾಜ ಸನದಿ, ಪ.ಪಂ.ಅಧ್ಯಕ್ಷ ಅಶೋಕ ಅಂಗಡಿ, ರಾಜಶೇಖರ ಖನದಾಳೆ, ಸಂಗಣ್ಣ ದತ್ತವಾಡೆ, ಅಂಕುಶ ಜಾಧವ ವಸಂತ ಕಾಂಬಳೆ ರಮೇಶ ಗಾಯಕವಾಡ ಹಾಗೂ ರಾಯಬಾಗ, ಕುಡಚಿ ಮತಕ್ಷೇತ್ರಗಳ ಕಾರ್ಯಕರ್ತರು ಪಾಲ್ಗೊಂಡಿದ್ದರು.

## ಚವನಭಾವಿಯಲ್ಲಿ ಕನ್ನಡ ಧ್ವಜಾರೋಹಣ

**ಮುದ್ದೇಬಿಹಾಳ:** ಕನ್ನಡ ರಾಜ್ಯೋತ್ಸವ ಅಂಗವಾಗಿ ತಾಲೂಕಿನ ಚವನಭಾವಿ ಗ್ರಾಮದಲ್ಲಿ ನಾರಾಯಣಗೌಡ ಬಣದ ಕರ್ನಾಟಕ ರಕ್ಷಣಾ ವೇದಿಕೆ ಗ್ರಾಮ ಘಟಕದಿಂದ ಭುವನೇಶ್ವರಿ ತಾಯಿ ಪೂಜೆ ಸಲ್ಲಿಸಿ, ಧ್ವಜಾರೋಹಣ ನೆರವೇರಿಸಿ ಕನ್ನಡ ರಾಜ್ಯೋತ್ಸವ ಆಚರಿಸಲಾಯಿತು.

ಈ ಸಂದರ್ಭದಲ್ಲಿ ನಾರಾಯಣ ಗೌಡ ಬಣದ ಕರ್ನಾಟಕ ರಕ್ಷಣಾ ವೇದಿಕೆ ಗ್ರಾಮ ಘಟಕದ ಪದಾಧಿಕಾರಿಗಳಾದ ಹುಸನಪ್ಪ ಗೋಗಿ, ಗಂಗಪ್ಪ ಬಿರಾದಾರ, ಮೌನೇಶ ಬಿರಾದಾರ, ನೀಲಪ್ಪ ಬಿರಾದಾರ, ಹುಲಗಪ್ಪ ಇಳಗೇರ, ರಾಚಯ್ಯ ಹಿರೇಮಠ ಶಿವಪ್ಪ ಮದರಿ, ಷರೀಫ್ ಮುಜಾವರ್, ಶಾಲೆಯ ಮುಖ್ಯ ಗುರುಗಳು ಎಸ್ ಎಂ ಜೋಗಿನ,ಶಿಕ್ಷಕರಾದ ಲೋಹಿತ ನಾಲತವಾಡ, ಗುರಸಂಗಪ್ಪ ಹಾದಿಮನಿ,ಮಾನಪ್ಪ ಲಮಾಣಿ, ಎಸ್ ಐ ಪಲ್ಲೇದ,ಅಕ್ಷತಾ ಗಾವಕರ,-ಎಸ್ ಎಸ್ ಸಿದ್ದರಡ್ಡಿ,ಸಂಗಮೇಶ ಹಿರೇಮಠ, ಗಣ್ಯರು, ಗ್ರಾಮಸ್ಥರು,ಮಕ್ಕಳು ಭಾಗವಹಿಸಿದ್ದರು.



# ನಾಟಕ- ಕಲಾವಿದರಿಗೆ ಜನರ ಪ್ರೋತ್ಸಾಹ ಅತ್ಯವಶ್ಯ

**ಬಸವನಬಾಗೇವಾಡಿ:** ಮೊದನಲಿನಿಂದಲೂ ನಾಟಕಗಳು ಗ್ರಾಮೀಣ ಜನರ ಮನರಂಜನೆ ಕೇಂದ್ರಗಳಾಗಿದ್ದವು. ವೈಜ್ಞಾನಿಕವಾಗಿ ಬೆಳವಣಿಗೆಯಾದಂತೆ ನಾಟಕಗಳು ಇತ್ತೀಚಿನ ದಿನಗಳಲ್ಲಿ ಕಡಿಮೆಯಾಗುತ್ತಿವೆ. ಕಲಾವಿದರ ಹಾಗು ಪ್ರೇಕ್ಷಕರ ಸಂಖ್ಯೆ ಕುಸಿಯುತ್ತಿರುವದು ಅತ್ಯಂತ ಶೋಚನಿಯ ಸಂಗತಿ ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷ ಹಾಸಿಂಪೀರ ವಾಲೀಕಾರ ಅಭಿಪ್ರಾಯ ವ್ಯಕ್ತಪಡಿಸಿದರು.

ತಾಲೂಕಿನ ಟಕ್ಕಳಕಿ ಗ್ರಾಮದಲ್ಲಿ ಕರಿಸಿದ್ದೇಶ್ವರ ಜಾತ್ರಾ ಮಹೋತ್ಸವದಂಗವಾಗಿ ಗ್ರಾಮದ ಕರಿಸಿದ್ದೇಶ್ವರ ನಾಟ್ಯ ಸಂಘದಡಿ ಹಮ್ಮಿಕೊಂಡಿದ್ದ ರೈತನ ಹೆಸರು ನಾಡಿನ ಹೆಸರು ಎಂಬ ಸಾಮಾಜಿಕ ನಾಟಕದ ಪ್ರದರ್ಶನ ಉದ್ಘಾಟಿಸಿ ಮಾತನಾಡಿದ ಅವರು, ಗ್ರಾಮೀಣ ಭಾಗದಲ್ಲಿ ನಡೆಯುವ ಜಾತ್ರೆ, ಉತ್ಸವ ಹಾಗೂ ಹಬ್ಬಗಳಲ್ಲಿ ನಾಟಕವನ್ನು ಸ್ಥಳೀಯ ಕಲಾವಿದರು ರಂಗಭೂಮಿ ಶಿಕ್ಷಕರಿಂದ ತರಬೇತಿ ಪಡೆದು ಪ್ರದಶ9ನ ಮಾಡುತ್ತಿದ್ದರು. ಸಿನೆಮಾ ಹಾಗು ಮೊಬೈಲ್ ಭರಾಟೆಯಲ್ಲಿ ನಾಟಕಗಳು ಮಾಯವಾಗುತ್ತಿವೆ ಕಳವಳಕಾರಿ ಸಂಗತಿಯಾಗಿದೆ ಎಂದರು.

ಮುಖಂಡ ಸಂಗಮೇಶ ಓಲೇಕಾರ ಮಾತನಾಡಿ, ಹಳ್ಳಿಗಳಲ್ಲಿ ಜಾತ್ರೆಗಳು ಯಶಸ್ವಿಗೆ ನಾಟಕಗಳ ಪ್ರದಶ9ನ ಅವಲಂಬಿತವಾಗಿದ್ದವು. ನಾಟಕಗಳಿಲ್ಲದೇ ಜಾತ್ರೆ ನಡೆಯುತ್ತಿರಲಿಲ್ಲ. ನಾಟಕಗಳು ಸಮಾಜದ ನ್ಯೂನತೆಗಳನ್ನು ಸರಿಪಡಿಸಿ ಸನ್ಮಾಗ9 ತೋರಿಸುತ್ತವೆ ಎಂದರು.



ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾ ಸಹ ಕಾಯ9ದಶಿ9 ರವಿ ಕಿತ್ತೂರ ಮಾತನಾಡಿ, ರಂಗಭೂಮಿ ಕಲಾವಿದರಿಗೆ ಪ್ರೋತ್ಸಾಹ ದೊರಕುತ್ತಿಲ್ಲ. ನಾಟಕಗಳನ್ನು ಅವಲಂಬಿಸಿ ಜೀವನ ಮಾಡುವದು ಕಷ್ಟಕರವಾಗಿದೆ ಎಂದರು

ವೇದಿಕೆಯಲ್ಲಿ ದುಂಡಯ್ಯ ಹಿರೇಮಠ, ಬ್ಲಾಕ ಕಾಂಗ್ರೆಸ್ ಅಧ್ಯಕ್ಷ ಸುರೇಶ ಹಾರಿವಾಳ, ಮುಖಂಡರಾದ ಪ್ರೇಮಕುಮಾರ ಮ್ಯಾಗೇರಿ .ರಾಜೇಸಾಬ ಶಿವನಗುತ್ತಿ, ಶಂಕರಗೌಡ ಬಿರಾದಾರ, ಶಪೀಕ ಹೊಕ್ರಾಣಿ, ಭೀಮಶಿ ಜಗ್ಗಲ, ರುದ್ರಗೌಡ ಪಾಟೀಲ, ಶರಣಪ್ಪ ಬಳ್ಳಾವೂರ, ಜೆ. ಸಿ. ವಂದಾಲ, ಚಂದ್ರಶೇಖರಗೌಡ ಪಾಟೀಲ, ತಿಪ್ಪಣ್ಣ ಜ್ಯೋತಿ , ಸುರೇಶ ಚಿಮ್ಮಲಗಿ, ಅರವಿಂದ ಗಂಗೂರ, ಎಸ್. ಜಿ. ಪಾಟೀಲ, ನೀಲಾ ಪಾಟೀಲ, ಶಂಕರಗೌಡ ಬಿರಾದಾರ, ಶ್ರೀಶೈಲ ಪೂಜಾರಿ, ಹಣಮಂತ ಟಕ್ಕಳಕಿ, ಗುರುಸಿದ್ದ ಪೂಜಾರಿ, ಕರೇಪ್ಪ ಬಂಜೋಡಿ, ಹಾಮೊ9ನಿಯಂ ಶಿಕ್ಷಕ ಸಾಯಬಣ್ಣ ಹಡಪದ ಇತರರು ಇದ್ದರು. ಪಾಂಡುಗೌಡ ಬಿರಾದಾರ ನಿರೂಪಿಸಿದರು.

## ದಲಿತರ ಗುಡಿಸಲಿಗೆ ಬೆಂಕಿ; ಕಾನೂನು ಕ್ರಮಕ್ಕೆ ಆಗ್ರಹ



**ರಾಮದುರ್ಗ:** ರಾಯಭಾಗ ತಾಲೂಕಿನ ಮುಗಳಕೋಡ ಗ್ರಾಮದ ಸರಕಾರಿ ಗೋಮಾಳು ಜಮೀನಿನಲ್ಲಿ ವಾಸವಿರುವ ದಲಿತರ ಗುಡಿಸಲುಗಳನ್ನು ಸುಟ್ಟು ಹಾಕಿರುವ ಸವರ್ಣೀಯರ ನೀತಿಯನ್ನು ಖಂಡಿಸಿ, ರಾಮದುರ್ಗ ತಾಲೂಕಿನ ವಿವಿಧ ಸಂಘಟನೆಗಳ ಮುಖಂಡರು ತಹಶೀಲ್ದಾರ ಮುಖಾಂತರ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ಪಟ್ಟಣದ ಮಿನಿ ವಿಧಾನಸೌಧದಲ್ಲಿ ಸೇರಿದ ವಿವಿಧ ಸಂಘಟನೆಗಳ ಹಾಗೂ ದಲಿತ ಮುಖಂಡರು, ಘಟನೆಯನ್ನು ತೀವ್ರವಾಗಿ ಖಂಡಿಸಿದರು.ಮಾತನಾಡಿದ ದಲಿತ ಮುಖಂಡ ಸುಭಾಸ್ ಘೋಡಕೆ, ದಲಿತರಿಗೆ ವಾಡ ಮಾಡಲು ಜಾಗವಿಲ್ಲದ ಕಾರಣ, ಹತ್ತಾರು ವರ್ಷಗಳಿಂದ ಗ್ರಾಮದ 12 ಗುಂಟೆ ಗೋಮಾಳು ಜಾಗೆಯಲ್ಲಿ ಗುಡಿಸಲು ಹಾಕಿಕೊಂಡು ತಮ್ಮ ಜೀವನ ನಡೆಸುತ್ತಿದ್ದರು. ಗೋಮಾಳು ಜಾಗೆ ಕು-ರಿತು ಎರಡು ಕುಟುಂಬಗಳ ಮಧ್ಯದ ದ್ವೇಷದಿಂದ ದಲಿತರ ಗುಡಿಸಲುಗಳಿಗೆ ಬೆಂಕಿ ಹಚ್ಚಿರುವುದು ಖಂಡನೀಯ.

ಎರಡು ಕುಟುಂಬಸ್ಥರು ಸೇರಿಕೊಂಡು ತಮ್ಮ ಸಮಸ್ಯೆಗಳನ್ನು ಇತ್ಯರ್ಥ ಮಾಡಿಕೊಳ್ಳುವುದನ್ನು ಬಿಟ್ಟು ದಲಿತರವಿರೋಧ ನೀತಿ ಅನುಸರಿಸುವುದು ಖಂಡನೀಯ. ಕೂಡಲೇ ಪೊಲೀಸ್ ಇಲಾಖೆಯ ಅಧಿಕಾರಿಗಳು ದಲಿತರಿಗೆ ನ್ಯಾಯ ಒದಗಿಸಬೇಕು ಎಂದು ಅವರು ಮನವಿ ಮೂಲಕ ಆಗ್ರಹಿಸಿದ್ದಾರೆ.ದಲಿತ ಮುಖಂಡ ಬಿ.ಆರ್. ದೊಡಮನಿ, ಕಾರ್ಮಿಕ ಮುಖಂಡರಾದ ಗೈಬು ಜೈನೆಖಾನ, ನಾಗಪ್ಪ ಸಂಗೊಳಿ, ಅಂಜುಮನ್ ಸಂಸ್ಥೆಯ ಮುಖಂಡ ಮಹ್ಮದಶಫಿ ಬೆಣ್ಣಿ, ತುಳಸಮ್ಮ ಮಾಳದಕರ, ರಾಚಮ್ಮ ರಾಮದುರ್ಗ, ಫಾರುಕ ಶೇಖ ಸೇರಿದಂತೆ ಇತರರಿದ್ದರು.

# ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿ ಜಿಲ್ಲಾ ಪ್ರವಾಸ ಕಾರ್ಯಕ್ರಮ

ಗದಗ : ಕರ್ನಾಟಕ ವಿಧಾನಮಂಡಲದ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿಯು ನವೆಂಬರ್ 14 ರಿಂದ 16 ರವರೆಗೆ ಬೆಳಗಾವಿ ವಿಭಾಗದಡಿಯಲ್ಲಿ ಬರುವ ಧಾರವಾಡ, ಗದಗ, ಬಾಗಲಕೋಟೆ, ವಿಜಯಪುರ ಹಾಗೂ ಬೆಳಗಾವಿ ಜಿಲ್ಲೆಗಳಲ್ಲಿ ಅಧ್ಯಯನ ಪ್ರವಾಸ ಕೈಗೊಂಡು ಆಯಾ ಜಿಲ್ಲೆಗಳಲ್ಲಿ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಸಮುದಾಯದವರ ಅಭಿವೃದ್ಧಿಗಾಗಿ ಹಮ್ಮಿಕೊಳ್ಳಲಾಗಿರುವ ವಿವಿಧ ಯೋಜನೆಗಳ/ ಕಾರ್ಯಕ್ರಮಗಳ ಪ್ರಗತಿ ಪರಿಶೀಲನಾ ಸಭೆ ನಡೆಸಲಿದೆ. ಸಮಿತಿಯ ಅಧ್ಯಕ್ಷರು ಸೇ-ರಿದಂತೆ ಸದಸ್ಯರುಗಳೂ ಸಹ ಅಧ್ಯಯನ ಪ್ರವಾಸದಲ್ಲಿರುತ್ತಾರೆ.

ಅನುಸೂಚಿತ ಜಾತಿ ಮತ್ತು ಪಂಗಡಗಳ ಕಲ್ಯಾಣ ಸಮಿತಿಯು ನವೆಂಬರ್ 14 ರಂದು ಬೆ 10.30 ಗಂಟೆಗೆ ಧಾರವಾಡ ಜಿಲ್ಲೆಯ ಜಿಲ್ಲಾಧಿಕಾ-ರಿಗಳ ಸಭಾಂಗಣದಲ್ಲಿ ಗದಗ ಜಿಲ್ಲೆಯಲ್ಲಿನ ಅನುಸೂಚಿತ ಜಾತಿ ಮತ್ತು ಪಂಗಡಗಳ ಅಭಿವೃದ್ಧಿಗಾಗಿ ಹಮ್ಮಿಕೊಳ್ಳಲಾಗಿರುವ ವಿವಿಧ ಯೋಜನೆಗಳ/ ಕಾರ್ಯಕ್ರಮಗಳ ಪ್ರಗತಿ ಪರಿಶೀಲನೆ ನಡೆಸಲಿದೆ. ಮಧ್ಯಾಹ್ನ 2.30 ಗಂಟೆಗೆ ಧಾರವಾಡ ಜಿಲ್ಲೆಯ ಪ್ರಗತಿ ಪರಿಶೀಲನೆ ನಡೆಸಿ ನಂತರ ಬಾಗಲಕೋಟೆಯಲ್ಲಿ ವಾಸ್ತವ್ಯ ಮಾಡುವರು.

ಪಿ.ಎಂ.ನರೇಂದ್ರಸ್ವಾಮಿಯವರು ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿಯ ಅಧ್ಯಕ್ಷರಾಗಿದ್ದು ಸದಸ್ಯರುಗಳ ಹೆಸರು ಈ ಕೆಳಗಿನಂತಿವೆ.

ರಮೇಶ ಲಕ್ಷ್ಮಣರಾವ್ ಜಾರಕಿಹೊಳಿ, ಡಾ.ಎಂ.ಚಂದ್ರಪ್ಪ, ದುರ್ಯೋಧನ ಐಹೊಳೆ, ಜಿ.ಹಂಪಯ್ಯ ನಾಯಕ್ ಬಲ್ಲಟಗಿ, ಎಸ್. ಎನ್. ಸುಬ್ಬಾರೆಡ್ಡಿ, ಬಸನಗೌಡ ತುರುವಿಹಾಳ್, ಅಬ್ಬಯ್ಯ ಪ್ರಸಾದ್, ಬಸವರಾಜ್ ಮತ್ತಿಮುಡ, ನೇಮಿರಾಜ್ ನಾಯ್ಕ್, ಎನ್. ಶ್ರೀನಿವಾಸಯ್ಯ, ಬಿ. ದೇವೇಂದ್ರಪ್ಪ, ಕೆ.ಸಿ.ವೀರೇಂದ್ರ ಪಪ್ಪಿ, ಕೃಷ್ಣಾ ನಾಯ್ಕ ಕೆ, ಕೆ. ಎಸ್.ಬಸವಂತಪ್ಪ, ಎನ್.ರವಿಕುಮಾರ್, ಡಾ.ಡಿ.ತಿಮ್ಮಯ್ಯ,ರಾಜೇಂದ್ರ ರಾಜಣ್ಣ, ಸಿ.ಎನ್. ಮಂಜೇಗೌಡ , ಶ್ರೀಮತಿ ಹೇಮಲತಾ ನಾಯಕ.

# ಕೊಪ್ಪಳ ನಗರಸಭೆಯ ಎರಡು ಸದಸ್ಯ ಸ್ಥಾನಗಳಿಗೆ ಉಪ ಚುನಾವಣೆ

ಕೊಪ್ಪಳ : ವಿವಿಧ ಕಾರಣಗಳಿಂದಾಗಿ, ತೆರವಾಗಿರುವ ಕೊಪ್ಪಳ ನಗರಸಭೆಯ ಎರಡು ಸದಸ್ಯ ಸ್ಥಾನಗಳಿಗೆ ಉಪ-ಚುನಾವಣೆ ನಡೆಸುವಂತೆ ಅಧಿಸೂಚನೆ ಮೂಲಕ ರಾಜ್ಯ ಚುನಾವಣಾ ಆಯೋಗವು, ಚುನಾವಣಾ ದಿನಾಂಕಗಳನ್ನು ನಿಗಧಿಪಡಿಸಿ, ಅಧಿಸೂಚನೆಯನ್ನು ಹೊರಡಿಸಿದ್ದು, ಕೊಪ್ಪಳ ನಗರಸಭೆಯ ಈ ಎರಡು ಸದಸ್ಯ ಸ್ಥಾನಗಳಿಗೆ ಚುನಾವಣಾ ವೇಳಾಪಟ್ಟಿಯು ಪ್ರಕಟವಾಗಿರುತ್ತದೆ.

ಚುನಾವಣಾ ವೇಳಾಪಟ್ಟಿ: ನವೆಂಬರ್ 11ರಂದು ನಾಮಪತ್ರಗಳನ್ನು ಸಲ್ಲಿಸಲು ಅವಕಾಶ, ನ.11ರಂದು ನಾಮಪತ್ರಗಳನ್ನು ಪರಿಶೀಲನೆ, ಉಮೇದುವಾ-ರಿಕೆಗಳನ್ನು ಹಿಂತೆಗೆದುಕೊಳ್ಳಲು ನ.14ರಂದು ಕೊನೆಯ ದಿನವಾಗಿದೆ. ಮತದಾನ ಅವಶ್ಯಕವಿದ್ದರೆ, ನ.23ರಂದು ಬೆಳಿಗ್ಗೆ 07 ಗಂಟೆಯಿಂದ ಸಾಯಂಕಾಲ 05.00 ಗಂಟೆಯವರೆಗೆ ಮತದಾ ನಡೆಯಲಿದೆ. ಮರುಮತದಾನ ಇದ್ದಲ್ಲಿ, ಮತದಾನವನ್ನು ನ.25ರಂದು ಬೆಳಿಗ್ಗೆ 07 ಗಂಟೆಯಿಂದ ಸಾಯಂಕಾಲ 05 ಗಂಟೆಯವರೆಗೆ ನಡೆಸಲಾಗುವುದು. ನ.26ರಂದು ಬೆಳಿಗ್ಗೆ 08 ಗಂಟೆಯಿಂದ ಕೊಪ್ಪಳ ತಾಲ್ಲೂಕಿನ ಕೇಂದ್ರ ಸ್ಥಳದಲ್ಲಿ ಮತ ಎಣಿಕೆ ನಡೆಯಲಿದೆ ಹಾಗೂ ಅಂದೇ ಚುನಾವಣೆ ಮುಕ್ತಾಯಗೊಳ್ಳಲಿದೆ.

*ಚುನಾವಣಾಧಿಕಾರಿಗಳು ಹಾಗೂ ಸಹಾಯಕ ಚುನಾವಣಾಧಿಕಾರಿಗಳ ನೇಮಕಾತಿ:* ವಿವಿಧ ಕಾರಣಗಳಿಂದಾಗಿ ತೆರವಾಗಿರುವ ಕೊಪ್ಪಳ ನಗರಸಭೆಯ 8ನೇ ಹಾಗೂ 22ನೇ ವಾರ್ಡಿನ ಸದಸ್ಯರ ಆಯ್ಕೆ ಚುನಾವಣೆಗಾಗಿ ಚುನಾವಣಾಧಿಕಾ-ರಿಯಾಗಿ ಕೊಪ್ಪಳ ಜಿಲ್ಲಾ ತರಬೇತಿ ಸಂಸ್ಥೆಯ ಪ್ರಾಚಾರ್ಯರಾದ ಕೃಷ್ಣಮೂರ್ತಿ ದೇಸಾಯಿ (ಮೊ.ಸಂ: 8762302963) ಹಾಗೂ ಸಹಾಯಕ ಚುನಾವಣಾಧಿಕಾರಿಯಾಗಿ ಕೊಪ್ಪಳ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಛೇರಿಯ ಅಧೀಕ್ಷಕ ಮಂಜುನಾಥ ಎನ್ (ಮೊ.ಸಂ: 9945868366) ಇವರನ್ನು ನೇಮಕಾತಿ ಮಾಡಲಾಗಿರುತ್ತದೆ.

ಚುನಾವಣಾಧಿಕಾರಿಗಳ ಕಛೇರಿ: ವಿವಿಧ ಕಾರಣಗಳಿಂದಾಗಿ ತೆರವಾಗಿರುವ ಕೊಪ್ಪಳ ನಗರಸಭೆಯ 8ನೇ ಹಾಗೂ 11ನೇ ವಾರ್ಡಿನ ಸದಸ್ಯರ ಆಯ್ಕೆ ಚುನಾವಣೆಗಾಗಿ, ಕೊಪ್ಪಳ ನಗರಸಭೆ ಕಾರ್ಯಾಲಯದ ಸಭಾಂಗಣದಲ್ಲಿ ಚುನಾವಣಾಧಿಕಾರಿಗಳ ಕಛೇರಿಯನ್ನು ಸ್ಥಾಪಿಸಲಾಗಿರುತ್ತದೆ.

ಚುನಾವನಾಧಿಕಾರಿಗಳ ಕಛೇರಿಯಲ್ಲಿ, ಬೆಳಿಗ್ಗೆ 11 ಗಂಟೆಯಿಂದ ಮಧ್ಯಾಹ್ನ 03 ಗಂಟೆಯವರೆಗೆ (ಸಾರ್ವತ್ರಿಕ ರಜೆ ದಿನವನ್ನು ಹೊರತುಪಡಿಸಿ) ನಾಮಪತ್ರಗಳನ್ನು ಪಡೆಯಬಹುದಾಗಿದೆ.

*ಮತದಾರರ ವಿವರ:* ವಿವಿಧ ಕಾರಣಗಳಿಂದಾಗಿ ತೆರವಾಗಿರುವ ಕೊಪ್ಪಳ ನಗರಸಭೆಯ 8ನೇ ಹಾಗೂ 11ನೇ ವಾರ್ಡಿನ ಸದಸ್ಯರ ಆಯ್ಕೆ ಚುನಾವಣೆಗಾಗಿ, ಅಂತಿಮ ಮತದಾರರ ಪಟ್ಟಿಯಂತೆ, 8ನೇ ವಾರ್ಡಿನಲ್ಲಿ 706 ಪುರುಷರು, 701 ಮಹಿಳೆಯರು ಸೇರಿ ಒಟ್ಟು 1407 ಮತದಾರರಿದ್ದಾರೆ. ಅದೇ ರೀತಿ 11ನೇ ವಾರ್ಡಿನಲ್ಲಿ 534 ಪುರುಷರು, 533 ಮಹಿಳೆಯರು ಸೇರಿ ಒಟ್ಟು 1087 ಮತದಾರರಿದ್ದಾರೆ.

*ಅಭ್ಯರ್ಥಿಯ ಚುನಾವಣಾ ವೆಚ್ಚದ ಮಿತಿ:* ಕರ್ನಾಟಕ ಪೌರಸಭೆಗಳ ಅಧಿನಿಯಮ, 1964 ರ ಪ್ರಕರಣ 16ಎ, 16ಬಿ, 16ಸಿ ರಂತೆ ನಗರಸಭೆ ಚುನಾವಣೆಗೆ ಸ್ಪರ್ಧಿಸುವ ಅಭ್ಯರ್ಥಿಗಳಿಗೆ ಚುನಾವಣಾ ವೆಚ್ಚಗಳ ಬಗ್ಗೆ ಲೆಕ್ಕಪತ್ರವನಿಟ್ಟು, ಅದನ್ನು ಚುನಾವಣಾಧಿಕಾರಿಗಳಿಗೆ ಸಲ್ಲಿಸಬೇಕಾಗಿರುತ್ತದೆ.

ಕರ್ನಾಟಕ ಪೌರಸಭೆಗಳ (ಕೌನ್ಸಿಲರುಗಳ ಚುನಾವಣೆ) ನಿಯಮಗಳು-1977 ರ ನಿಯಮ-22ಡಿ ರಲ್ಲಿ ನಗರಸಭೆಗಳಿಗೆ ಸಂಬಂಧಿಸಿದಂತೆ ರೂಪಾಯಿ 2.00 ಲಕ್ಷಗಳ ಚುನಾವಣಾ ವೆಚ್ಚದ ಗರಿಷ್ಠ ಮಿತಿಯಾಗಿರುತ್ತದೆ.

*ಮತಗಟ್ಟೆಗಳ ವಿವರ:* ವಿವಿಧ ಕಾರಣಗಳಿಂದಾಗಿ ತೆರವಾಗಿರುವ ಕೊಪ್ಪಳ ನಗರಸಭೆಯ 8ನೇ ವಾರ್ಡಿನ ಮತಗಟ್ಟೆ ಸಂಖ್ಯೆ 16-ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಕಟ್ಟಡ (ಪೂರ್ವಭಾಗದ ಕೊಠಡಿ) ಬ್ರಹ್ಮನವಾಡಿ, ಕೊಪ್ಪಳ ಹಾಗೂ 11ನೇ ವಾರ್ಡಿನ ಮತಗಟ್ಟೆ ಸಂಖ್ಯೆ 20-ಸರ್ಕಾರಿ ಕೇಂದ್ರ ಪ್ರಾಥಮಿಕ ಶಾಲೆ, (ಇಇ ಕಛೇರಿ ಪಿ.ಆರ್.ಇ.ಡಿ ವಿಭಾಗದ ಆವರಣ) ಪೂರ್ವಭಾಗ, ಕೊಪ್ಪಳ ಕಟ್ಟಡಗಳಲ್ಲಿ ಮತಗಟ್ಟೆಯನ್ನು ಸ್ಥಾಪಿಸಲಾಗಿರುತ್ತದೆ.

*ಭದ್ರತಾ ಕೊಠಡಿ ನಿರ್ಮಾಣ:* ಕೊಪ್ಪಳ ನಗರಸಭೆಯ 8ನೇ ಹಾಗೂ 11ನೇ ವಾರ್ಡಿನ ಸದಸ್ಯರ ಆಯ್ಕೆಗಾಗಿ ನವೆಂಬರ್ 23ರ ಮತದಾನ ಮುಕ್ತಾಯದ ನಂತರ ತಹಶೀಲ್ದಾರ ಕಛೇ-ರಿಯಲ್ಲಿ ಭದ್ರತಾ ಕೊಠಡಿಯನ್ನು ನಿರ್ಮಾಣ ಮಾಡಲಾಗಿರುತ್ತದೆ.

*ಮತ ಎಣಿಕೆ ಕಾರ್ಯ:* ಕೊಪ್ಪಳ ನಗರಸಭೆಯ 8ನೇ ಹಾಗೂ 11ನೇ ವಾರ್ಡಿನ ಸದಸ್ಯರ ಆಯ್ಕೆಗಾಗಿ ನ.23ರ ಮತದಾನ ಮುಕ್ತಾಯದ ನಂತರ ನ.26ರಂದು ಬೆಳಿಗ್ಗೆ 08 ಗಂಟೆಯಿಂದ ತಹಶೀಲ್ದಾರ ಕಛೇರಿಯ ಸಭಾಂಗಣದಲ್ಲಿ ಮತ ಎಣಿಕೆ ಕಾರ್ಯವು ಪ್ರಾರಂಭಗೊಳುತ್ತದೆ ಹಾಗೂ ರಾಜ್ಯ ಚುನಾವಣಾ ಆಯೋಗದ ನಿರ್ದೇಶನದಂತೆ ನ.26ರಂದು ಚುನಾವಣಾ ಪ್ರಕ್ರೀಯೆ ಮುಕ್ತಾಯಗೊಳ್ಳುತ್ತದೆ.

ಚುನಾವಣಾ ಅಭ್ಯರ್ಥಿಗಳು ಮಾದರಿ ನೀತಿ ಸಂಹಿತೆಯನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ನೀತಿ ಸಂಹಿತೆ ಉಲ್ಲಂಘನೆ ಪ್ರಕರಣಗಳು ಗಮನಕ್ಕೆ ಬಂದಾಗ ಆಯೋಗದ ಆದೇಶದಂತೆ ಕ್ರಮವಹಿಸಲಾಗುವುದು ಎಂದು ಕೊಪ್ಪಳ ನಗರಸಭೆ ವಾರ್ಡ ಸಂಖ್ಯೆ 8 ಮತ್ತು 11ರ ಚುನಾವಣಾಧಿಕಾರಿ ಕೃಷ್ಣಮೂರ್ತಿ ದೇಸಾಯಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

**ಚೂರು-ಪಾರು**

## ಅರ್ಜಿ ಸಲ್ಲಿಕೆ ಅವಧಿ ವಿಸ್ತರಣೆ

ಗದಗ : 2024-25 ನೇ ಸಾಲಿನ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಹಾಗೂ ಅಲೆಮಾರಿ/ ಅರೆ ಅಲೆಮಾರಿ ಪ್ರವರ್ಗ-1 ವಿದ್ಯಾರ್ಥಿಗಳಿಂದ ಅರ್ಹ ಪಿಯುಸಿ ಸಮಾನಾಂತರ, ಸಾಮಾನ್ಯ ಪದವಿ ಮತ್ತು ಸಂಯೋಜಿತ ಉಭಯ ಪದವಿ ಕೋರ್ಸುಗಳಿಗೆ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ ಶುಲ್ಕ, ವಿನಾಯತಿ, ವಿದ್ಯಾಸಿರಿ ? ಊಟ ಮತ್ತು ವಸತಿ ಸಹಾಯ ಯೋಜನೆ ಸೌಲಭ್ಯಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ಕೊನೆಯ ದಿನವನ್ನು ನವೆಂಬರ್ 10 ರವರೆಗೆ ವಿಸ್ತರಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಗದಗ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಅಧಿಕಾರಿಗಳ ಕಚೇ-ರಿಯನ್ನು ಸಂಪರ್ಕಿಸಬಹುದಾಗಿದೆ.

## ವೀರವನಿತೆ ಒನಕೆ ಓಬವ್ವ ಜಯಂತಿ ನಿಮಿತ್ಯ ಪೂರ್ವಭಾವಿ ಸಭೆ

ಗದಗ : ಸರ್ಕಾರದ ಆದೇಶದನ್ವಯ ನವೆಂಬರ್ 11 ರಂದು ಆಚರಿಸಲಾಗುವ ವೀರವನಿತ ಒನಕೆ ಓಬವ್ವ ಜಯಂತಿ ನಿಮಿತ್ಯ ನವೆಂಬರ್ 5 ರಂದು ಸಂಜೆ 4 ಗಂಟೆಗೆ ಅಪರ ಜಿಲ್ಲಾಧಿಕಾರಿಗಳು, ಗದಗ ಇವರ ಅಧ್ಯಕ್ಷತೆಯಲ್ಲಿ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಪೂರ್ವಭಾವಿ ಸಭೆಯನ್ನು ಕರೆಯಲಾಗಿದೆ. ಸಭೆಗೆ ಹಾಜರಾಗಿ ಸಲಹೆ/ ಅಭಿಪ್ರಾಯ ನೀಡಬೇಕೆಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಕೊಪ್ಪಳ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳ ಖಾಲಿ ಸ್ಥಾನಗಳಿಗೆ ಉಪ ಚುನಾವಣೆ: ಅಧಿಸೂಚನೆ ಪ್ರಕಟ

ಕೊಪ್ಪಳ : ಖಾಲಿಯಾಗಿರುವ ಕೊಪ್ಪಳ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳ ಸ್ಥಾನಗಳ ತುಂಬಲು ಉಪ ಚುನಾವಣೆಗಾಗಿ ಕೊಪ್ಪಳ ಜಿಲ್ಲಾಧಿಕಾರಿ ನಲಿನ್ ಅತುಲ್ ಅವರು ಚುನಾವಣಾ ಅಧಿಸೂಚನೆಯನ್ನು ಹೊರಡಿಸಿದ್ದಾರೆ.

ಕರ್ನಾಟಕ ಮುನಿಸಿಪಾಲಿಟಿಗಳ ಕೌನ್ಸಿಲರುಗಳ ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ಸ್ಥಾಪಿತವಾದ ಕೊಪ್ಪಳ ನಗರಸಭೆ ಕೌನ್ಸಿಲರುಗಳ ರಾಜೀನಾಮೆಯಿಂದಾಗಿ 08 ಮತ್ತು 11ನೇ ವಾರ್ಡಿನ ಸ್ಥಾನಗಳು ಹಾಗೂ ಕಾರಟಗಿ ಪುರಸಭೆಯ ಕೌನ್ಸಿಲರ ಮರಣದಿಂದಾಗಿ 21ನೇ ವಾರ್ಡಿನ ಸ್ಥಾನವು ಖಾಲಿಯಾಗಿರುವುದರಿಂದ ಈ ಖಾಲಿ ಸ್ಥಾನಗಳನ್ನು ತುಂಬಲು ಚುನಾವಣೆಗಳನ್ನು ನಡೆಸಬೇಕಾಗಿರುವುದರಿಂದ, 1977 ಕರ್ನಾಟಕ ಮುನಿಸಿಪಾಲಿಟಿಗಳ ಕೌನ್ಸಿಲರುಗಳ (ಚುನಾವಣೆ) ನಿಯಮಗಳ 8ನೇ ನಿಯಮದ ಅನುಸಾರವಾಗಿ ಚುನಾವಣೆಯ ವೇಳಾಪಟ್ಟಿಯನ್ನು ಈ ಮೂಲಕ ನಿಗದಿಪಡಿಸಲಾಗಿದೆ. ಚುನಾವಣಾ ವೇಳಾಪಟ್ಟಿ: ವಿವಿಧ ಕಾರಣಗಳಿಂದಾಗಿ, ತೆರವಾಗಿರುವ ಕಾರಟಗಿ ಪುರಸಭೆಯ ಒಂದು ಹಾಗೂ ಕೊಪ್ಪಳ ನಗರಸಭೆಯ ಎರಡು ಸದಸ್ಯ ಸ್ಥಾನಗಳ ಉಪ ಚುನಾವಣೆಗಾಗಿ ನವೆಂಬರ್ 04ರಂದು ಅಧಿಸೂಚನೆ ಪ್ರಕಟಿಸಲಾಗಿದ್ದು, ನಾಮಪತ್ರಗಳನ್ನು ಸಲ್ಲಿಸಲು ನ.11 ಕೊನೆಯ ದಿನವಾಗಿದೆ. ನ.12ಕ್ಕೆ ನಾಮಪತ್ರಗಳ ಪರಿಶೀಲನೆ, ಉಮೇದುವಾರಿಕೆಯನ್ನು ಹಿಂತೆಗೆದುಕೊಳ್ಳಲು ನ.14 ಕೊನೆಯ ದಿನವಾಗಿದೆ. ಮತದಾನ ಅವಶ್ಯವಿದ್ದರೆ ನ.23ರಂದು ಮತದಾನ ನಡೆಸಲಾಗುವುದು ಹಾಗೂ ನ.26ಕ್ಕೆ ಚುನಾವಣೆಯ ಮುಕ್ತಾಯಗೊಳ್ಳಲಿದೆ.

ಮೀಸಲಾತಿ ವಿವರ: ಕೊಪ್ಪಳ ನಗರಸಭೆಯ ವಾರ್ಡ ಸಂಖ್ಯೆ 8ರ ಸದಸ್ಯ ಸ್ಥಾನಕ್ಕೆ ಹಿಂದುಳಿದ ವರ್ಗ (ಎ) ಮಹಿಳೆ, ವಾರ್ಡ ಸಂಖ್ಯೆ 11ರ ಸದಸ್ಯ ಸ್ಥಾನಕ್ಕೆ ಹಿಂದುಳಿದ ವರ್ಗ (ಎ) ಮತ್ತು ಕಾರಟಗಿ ಪುರಸಭೆಯ ವಾರ್ಡ ಸಂಖ್ಯೆ 21ರ ಸದಸ್ಯ ಸ್ಥಾನವು ಪರಿಶಿಷ್ಟ ಜಾತಿಗೆ ಮೀಸಲಿರಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

## ಬೆಳೆ ಹಾನಿ ಸಮೀಕ್ಷೆಯಲ್ಲಿ ಅರ್ಹ ರೈತರು ಬಿಟ್ಟು ಹೋಗದಂತೆ - ಅನರ್ಹರು ಸೇರ್ಪಡೆ ಆಗದಂತೆ ಎಚ್ಚರಿಕೆ ವಹಿಸಿ; ರೈತರ ಪಟ್ಟಿಯನ್ನು ಸಾರ್ವಜನಿಕರಿಗೆ ಪ್ರಚುರಪಡಿಸಿ: ಜಿಲ್ಲಾಧಿಕಾರಿ ಸೂಚನೆ

ಧಾರವಾಡ : ಅಕ್ಟೋಬರ ಮಾಹೆಯಲ್ಲಿ ಸುರಿದ ಅಕಾಲಿಕ, ನಿರಂತರ, ದಟ್ಟ ಮಳೆಯಿಂದಾಗಿ ಆಗಿರುವ ಬೆಳೆ ಹಾನಿಯ ಸಮೀಕ್ಷೆಯಲ್ಲಿ ಅನರ್ಹರು ಸೇರ್ಪಡೆ ಆಗದಂತೆ ಅಧಿಕಾರಿ, ಸಿಬ್ಬಂದಿಗಳು ಎಚ್ಚರಿಕೆ ವಹಿಸಬೇಕು ಮತ್ತು ಅರ್ಹ ಯಾವ ಒಬ್ಬ ರೈತರ ಜಮೀನುಗಳು ಬೆಳೆ ಹಾನಿ ಸಮೀಕ್ಷೆಯಿಂದ ಹೊರಗುಳಿಯದಂತೆ ಕಾಳಜಿವಹಿಸಬೇಕೆಂದು ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಅಧ್ಯಕ್ಷರು ಆಗಿರುವ ಜಿಲ್ಲಾಧಿಕಾರಿ ದಿವ್ಯ ಪ್ರಭು ಅವರು ಅಧಿಕಾರಿಗಳಿಗೆ ಸೂಚಿಸಿದರು.



ಅವರು ಇಂದು ಸಂಜೆ ಕಚೇರಿಯ ನೂತನ ಸಭಾಂಗಣದಲ್ಲಿ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಮಾಸಿಕ ಸಭೆ ಜರುಗಿಸಿ, ಅಧ್ಯಕ್ಷತೆ ವಹಿಸಿ, ಮಾತನಾಡಿದರು.

ಬೆಳೆ ಹಾನಿ ಸಮೀಕ್ಷಾ ವರದಿಯನ್ನು ನಾಳೆಯೊಳಗೆ ಆನ್‌ಲೈನ್ ಮೂಲಕ ವೆಬ್‌ಸೈಟ್‌ನಲ್ಲಿ ಪ್ರಕಟಿಸಬೇಕು. ಮತ್ತು ಪ್ರಕಟಿ-ತ ಸಮೀಕ್ಷಾ ವರದಿಯ ಪ್ರತಿಯನ್ನು ಆಯಾ ತಾಲೂಕಿನ ತಹಶಿಲ್ದಾರ ಕಚೇರಿ, ಸಹಾಯಕ ಕೃಷಿ ನಿರ್ದೇಶಕರ ಕಚೇರಿ, ತೋಟಗಾ-ರಿಕೆ ಇಲಾಖೆ ಕಚೇರಿ, ರೈತ ಸಂಪರ್ಕ ಕೇಂದ್ರಗಳಲ್ಲಿ ಕಡ್ಡಾಯವಾಗಿ ಪ್ರದರ್ಶಿಸಬೇಕು. ಗ್ರಾಮ ಪಂಚಾಯತ ಮಟ್ಟದಲ್ಲಿ ಪಂಚಾಯತ ಅಭಿವೃದ್ಧಿ ಅಧಿಕಾರಿಗಳು ಡಂಗುರ ಸಾರುವ ಮೂಲಕ ರೈತ ಕುಟುಂಬಗಳಿಗೆ ಬೆಳೆ ಹಾನಿ ಸಮೀಕ್ಷೆ ಕೈಗೊಂಡಿರುವ ಕುರಿತು ಮತ್ತು ಬೆಳೆ ಹಾನಿ ಆಗಿರುವ ರೈತರ ಹೆಸರು, ವಿವರ ಇರುವ ಬಗ್ಗೆ ಪರಿಶೀಲಿಸಿ, ಆಕ್ಷೇಪಣೆಗಳಿದ್ದಲ್ಲಿ ಸಲ್ಲಿಸಲು ಮಾಹಿತಿ ನೀಡಬೇಕು. ಗ್ರಾಮ ಪಂಚಾಯತಗಳ ಸೂಚನಾ ಫಲಕದಲ್ಲಿ ಆಯಾ ಗ್ರಾಮಗಳ ಬೆಳೆ ಹಾನಿ ಸಮೀಕ್ಷಾ ವರದಿಯ ಪ್ರತಿಯನ್ನು ಪ್ರಚುರ ಪಡಿಸಬೇಕೆಂದು ಅವರು ಅಧಿಕಾ-ರಿಗಳಿಗೆ ಹೇಳಿದರು.

ವರದಿ ಪ್ರಕಟಿಸಿದ 7 ದಿನದಲ್ಲಿ ಆಕ್ಷೇಪಣೆ ಸಲ್ಲಿಸಲು ಅವಕಾಶ: ಬೆಳೆ ಹಾನಿ ಸಮೀಕ್ಷಾ ವರದಿಯಲ್ಲಿ ರೈತರ ಜಮೀನು, ಬೆಳೆ ವಿವರ ಬಿಟ್ಟು ಹೋಗಿದ್ದಲ್ಲಿ, ವಿವರ ಸರಿ ಇರದಿದ್ದಲ್ಲಿ ಅಥವಾ ಪ್ರಕಟಿತ ವರದಿಯಲ್ಲಿನ ಅಂಶಗಳ ಬಗ್ಗೆ ತಕರಾರುಗಳಿದ್ದಲ್ಲಿ ಸಂಬಂಧಿಸಿದ ರೈತರು ಸಮೀಕ್ಷಾ ವರದಿ ಪ್ರಕಟಿಸಿದ 7 ದಿನದೊಳಗೆ ತಮ್ಮ ತಾಲೂಕಿನ ತಹಶಿಲ್ದಾರ ಕಚೇರಿಯಲ್ಲಿ ಆಕ್ಷೇಪಣೆ ಸಲ್ಲಿಸಬೇಕು.

ಇದನ್ನು ಪರಿಶೀಲಿಸಿ, ಕೃಷಿ ಇಲಾಖೆ ಅಧಿಕಾರಿಗಳು, ತಹಶಿಲ್ದಾರರು ಕ್ರಮವಹಿಸಿ, ಅಂತಿಮ ಸಮೀಕ್ಷಾ ವರದಿಯನ್ನು ಜಿಲ್ಲಾಧಿಕಾ-ರಿಗಳ ಕಚೇರಿಗೆ ಸಲ್ಲಿಸಬೇಕೆಂದು ಜಿಲ್ಲಾಧಿಕಾ-ರಿಗಳು ತಿಳಿಸಿದರು.

ಅಕ್ಟೋಬರ 1 ರಿಂದ ನವೆಂಬರ 4 ವರೆಗೆ ಜಿಲ್ಲೆಯಲ್ಲಿ ವಾಡಿಕೆ ಮಳೆ 111.02 ಮೀ.ಮೀ ಬದಲಿಗೆ 221.09 ಮೀ.ಮೀ ಮಳೆ ಆಗಿದೆ. ಅಕ್ಟೋಬರ ಮಾಹೆಯಲ್ಲಿ ಮಳೆಯಿಂದಾಗಿ ಎರಡು ಮಾನವ ಜೀವ ಹಾನಿ ಆಗಿದ್ದು, ನಿಯಮಾನುಸಾರ ತಲಾ ರೂ. 5 ಲಕ್ಷದಂತೆ ಒಟ್ಟು ರೂ. 10 ಲಕ್ಷಗಳ ಪರಿಹಾರ ವಿತರಿಸಲಾಗಿದೆ. ಮತ್ತು 6 ದೊಡ್ಡ ಜನುವಾರುಗಳ ಜೀವ ಹಾನಿಯಾಗಿದ್ದು, ರೂ. 2.22 ಲಕ್ಷ ಪರಿಹಾರ ಹಾಗೂ ಮೂರು ಸಣ್ಣ ಜಾನುವಾರುಗಳ ಜೀವ ಹಾನಿ ಆಗಿದ್ದು, ರೂ. 12 ಸಾವಿರ ಪರಿಹಾರ ವಿತರಿಸಲಾಗಿದೆ ಎಂದು ಅವರು ಹೇಳಿದರು.

ನಿರಂತರ ಮಳೆಯಿಂದಾಗಿ ಅಕ್ಟೋಬರ ತಿಂಗಳಿನಲ್ಲಿ ವಿವಿಧ ತಾಲೂಕುಗಳು ಸೇರಿದಂತೆ ಮೂರು ಮನೆಗಳು ಪೂರ್ಣ ಹಾನಿಯಾಗಿವೆ. ಮತ್ತು 482 ಮನೆಗಳು ಭಾಗಶಃ ಹಾನಿಯಾಗಿವೆ. ಈ ಪೈಕಿ 453 ಮನೆಗಳಿಗೆ ಪರಿಹಾರ ವಿತರಿಸಲು ಕ್ರಮಕೈಗೊಳ್ಳಲಾಗಿದೆ ಮತ್ತು ಬಾಕಿ ಉಳಿದಿರುವ ಪ್ರಕರಣಗಳ ಜಂಟಿ ಸಮೀಕ್ಷೆ ಪ್ರಗತಿಯಲ್ಲಿದೆ. ಮನೆಗಳಿಗೆ ನೀರು ನುಗ್ಗಿರುವ 264 ಪ್ರಕರಣಗಳಿಗೆ ರೂ. 12.18 ಲಕ್ಷ ಪರಿಹಾರವನ್ನು ವಿತರಿಸಲು ಕ್ರಮಕೈಗೊಳ್ಳಲಾಗಿದೆ ಎಂದು ಜಿಲ್ಲಾಧಿಕಾರಿಗಳು ತಿಳಿಸಿದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಗೀತಾ ಸಿ.ಡಿ., ಜಿಲ್ಲಾ ಪಂಚಾಯತ ಉಪಕಾರ್ಯದರ್ಶಿ ಬಿ.ಎಸ್.ಮುಗನೂರಮಠ, ಉಪವಿಭಾಗಾಧಿಕಾರಿ ಶಾಲಂ ಹುಸೇನ್, ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಅಜೀಜ್ ದೇಸಾಯಿ, ಜಿಲ್ಲಾ ಆರೋಗ್ಯಾಧಿಕಾರಿ ಡಾ. ಶಶಿ ಪಾಟೀಲ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಉಪನಿರ್ದೇಶಕಿ ಎಚ್.ಎಚ್. ಕುಕನೂರ, ಎಲ್ಲ ತಾಲೂಕುಗಳ ತಹಶೀಲ್ದಾರರು, ತಾಲೂಕಾ ಪಂಚಾಯತ ಇಓ ಗಳು, ಶಾಲಾ ಶಿಕ್ಷಣ ಇಲಾಖೆ, ಲೋಕೋಪಯೋಗಿ ಇಲಾಖೆ, ಪಂಚಾಯತ ರಾಜ್ ಇಂಜಿನೀಯರಿಂಗ್ ಇಲಾಖೆ, ಗ್ರಾಮೀಣ ಕುಡಿಯುವ ನೀರು ಸರಬರಾಜು ಇಲಾಖೆ, ಹೆಸ್ಕಾಂ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತ-ರಿದ್ದರು.

## ಕರ್ನಾಟಕ ಜಾನಪದ ಅಕಾಡೆಮಿ ಪ್ರಶಸ್ತಿ ಪುರಸ್ಕೃತರಾಗಿ ಈರಯ್ಯ ಮೋಗೆರ



ಕಾರವಾರ - 2023 ನೇ ಸಾಲಿನ ಕರ್ನಾಟಕ ಜಾನಪದ ಅಕಾಡೆಮಿ ಪ್ರಶಸ್ತಿ ಪುರಸ್ಕೃತರಾಗಿ ಕಾರಿನ್ ಮನೆ ಕುಣಿತ ಮತ್ತು ಹೌಂದೇರಾಯನ ಕುಣಿತ ಕಲಾವಿದರಾದ ಭಟ್ಕಳದ ಈರಯ್ಯ ಮೋಗೆರ ಅವರು ಆಯ್ಕೆಯಾಗಿದ್ದಾರೆ ಎಂದು ಕರ್ನಾಟಕ ಜಾನಪದ ಅಕಾಡೆಮಿಯ ರಿಜಿಸ್ಟ್ರಾರ್ ಪ್ರಕಟಣೆ ತಿಳಿಸಿದೆ.

## ಅಪರಿಚಿತ ವ್ಯಕ್ತಿಯ ಮೃತದೇಹ ಪತ್ತೆ ಗುರುತು ಪತ್ತೆಗೆ ಮನವಿ

ಕೊಪ್ಪಳ : ಕುಷ್ಟಗಿ ಪಟ್ಟಣದ ಎನ್.ಎಚ್ ಕ್ರಾಸ್ ಬಳಿ ಇರುವ ಪುನೀತ ರಾಜಕುಮಾರ ಸರ್ಕಲ್ ಹತ್ತಿರ ಅಕ್ಟೋಬರ್ 28ರಂದು ಅಪರಿಚಿತ ವ್ಯಕ್ತಿಯ ಶವ ಪತ್ತೆಯಾಗಿದ್ದು, ಈ ಕುರಿತು ಕುಷ್ಟಗಿ ಪೊಲೀಸ್ ಠಾಣೆಯ ಯು.ಡಿ.ಆರ್ ನಂ:38/2024 ಕಲಂ: 194 ಬಿ.ಎನ್.ಎಸ್.ಎಸ್ ಅಡಿಯಲ್ಲಿ ಪ್ರಕರಣ ದಾಖಲಾಗಿದೆ.

ಮೃತ ವ್ಯಕ್ತಿಯು ಅಂದಾಜು 55-60 ವರ್ಷದವರಾಗಿದ್ದು, ಸುಮಾರು 5 ಅಡಿ ಎತ್ತರ, ಕೋಲು ಮುಖ, ಕಪ್ಪು ಮೈಬಣ್ಣ, ಮೈ ಮೇಲೆ ನೀಲಿ ಬಣ್ಣದ ತುಂಬು ತೋಳಿನ ಶರ್ಟ್ ಹಾಗೂ ಕಪ್ಪು ಬಣ್ಣದ ಪ್ಯಾಂಟ್ ಧರಿಸಿರುತ್ತಾನೆ.

ಈ ಚಹರೆಯ ವ್ಯಕ್ತಿಯ ಕುರಿತು ಯಾರಿಗಾದರೂ ಮಾಹಿತಿ ದೊರೆತಲ್ಲಿ ಕುಷ್ಟಗಿ ಪೊಲೀಸ್ ಠಾಣೆಯ ಪಿ.ಎಸ್.ಐ ಮೊ.ಸಂ:9480803757 ದೂ.ಸಂ:08536-267033 ಕುಷ್ಟಗಿ ಸಿಪಿಐ ಮೊ.ಸಂ:9480803732 ದೂ.ಸಂ:08536-267033 ಗಂಗಾವತಿ ಡಿಎಸ್‌ಪಿ ಮೊ.ಸಂ:9480803721, ದೂ.ಸಂ: 08533-230853, ಎಸ್.ಪಿ. ಕೊಪ್ಪಳ: 08539-230111ಗೆ ಸಂಪರ್ಕಿಸಿ ಮಾಹಿತಿ ನೀಡುವಂತೆ ಕುಷ್ಟಗಿ ಪೊಲೀಸ್ ಠಾಣೆ ಪ್ರಕಟಣೆ ಕೋರಿದೆ.

# ನೂಜ್ ಗ್ರಾಮದಲ್ಲಿ ಉದ್ಯೋಗ ಖಾತರಿ ನಡಿಗೆ ಸಬಲತೆಯಡೆಗೆ ಅಭಿಯಾನ

ಕಾರವಾರ - ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ಗ್ರಾಮೀಣ ಕುಟುಂಬಗಳು ಸ್ವ ಇಚ್ಛೆಯಿಂದ ಅಕುಶಲ ಕೆಲಸಕ್ಕಾಗಿ ಅಥವಾ ಸ್ವಂತ ಅಥವಾ ಸಮುದಾಯ ಕಾಮಗಾರಿಗಳಿಗೆ ಬೇಡಿಕೆ ಅರ್ಜಿ ಸಲ್ಲಿಸುವ ಮೂಲಕ ಜನ-ರಿಂದಲೇ ಪ್ರಾರಂಭವಾಗಿ, ಗ್ರಾಮೀಣ ಪ್ರದೇಶದಲ್ಲಿ ಮೂಲಸೌಕರ್ಯ ಅಭಿವೃದ್ಧಿಗೆ ಮಹತ್ವ ನೀಡುವುದರಿಂದ ಜನರಿಗಾಗಿ ರೂಪಿಸಲ್ಪಟ್ಟು, ಗ್ರಾಮೀಣ ಪ್ರದೇಶದ ಜನರಿಗೆ ಉದ್ಯೋಗ ಖಾತ-ರಿಯನ್ನು ಒದಗಿಸುವ ಮೂಲಕ ಜನ-ರಿಗೋಸ್ಕರವೇ ಇರುವ ಯೋಜನೆಯಾಗಿ ಹೊರಹೊಮ್ಮಿರುವುದು ಮಹಾತ್ಮ ಗಾಂಧಿ ನರೇಗಾ ಯೋಜನೆ. ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಐಇಸಿ ಸಂಯೋಜಕ ಕಿರಣ ಜೋತೆಪ್ಪನವರ ಹೇಳಿದರು.

ಅವರು ಮಂಗಳವಾರ ಭಟ್ಕಳ ತಾಲೂಕಿನ ಬೆಳಕೆ ಗ್ರಾಮ ಪಂಚಾಯತ್ ವ್ಯಾಪ್ತಿಯ ನೂಜ್ ಗ್ರಾಮದಲ್ಲಿ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಲೋಕೇಶ್ವರ್ ಕೆ. ಗೊಂಡ ಅವರ ನೇತೃತ್ವದಲ್ಲಿ ನಡೆದ 'ಉದ್ಯೋಗ ಖಾತ್ರಿ ನಡಿಗೆ ಸಬಲತೆಯಡೆಗೆ' ಅಭಿಯಾನ ಮತ್ತು ಬೂದು ನೀರು ನಿರ್ವಹಣೆ ಕುರಿತು ಜಾಗೃತಿ ಕಾರ್ಯಕ್ರಮದಲ್ಲಿ ಭಾಗವಹಿಸಿ, ಅವರು ಮಾತನಾಡಿದರು.

ಗೊಂಡ ಬುಡಕಟ್ಟು ಸಮುದಾಯದವರು ಹೆಚ್ಚಾಗಿ ವಾಸಿಸುವ ನೂಜ್ ಗ್ರಾಮದಲ್ಲಿ ಮನೆ ಮನೆಗೆ ಭೇಟಿ ನೀಡಿ, ಬೂದು ನೀರನ್ನು ವ್ಯವಸ್ಥಿತವಾಗಿ ನಿರ್ವಹಿಸದೆ ಮನೆ ಅಕ್ಕಪಕ್ಕದಲ್ಲಿಯೆ ಹರಿಸುವುದರಿಂದ ಆಗುವ ದುಷ್ಪರಿಣಾಮಗಳ ಕುರಿತು ತಿಳಿಸಿ, ಬೂದು ನೀರಿನ ವೈಜ್ಞಾನಿಕ ನಿರ್ವಹಣೆ ಮಾಡುವ ಉದ್ದೇಶದಿಂದ ಮನರೇಗಾ ಯೋಜನೆಯಡಿ ಬಚ್ಚಲು ಗುಂಡಿ ನಿರ್ಮಿಸಿಕೊಳ್ಳಲು ಜನರ ಮನವೊಲಿಸಲಾಯಿತು. ಮತ್ತು ಈ ವರ್ಷದ ಕ್ರಿಯಾಯೋಜನೆಯಲ್ಲಿ ನೂಜ್ ಗ್ರಾಮದಲ್ಲಿ ಕನಿಷ್ಠ 150 ಬಚ್ಚಲು ಗುಂಡಿ ನಿರ್ಮಿಸಲು ಗುರಿ ಹೊಂದಲಾಗಿದ್ದು, ಅದನ್ನು ಈಡೇರಿಸಲು ಜನರ ಸಹಕಾರ ಅತ್ಯಗತ್ಯ ಎಂದರು.

ಇದೇ ವೇಳೆ ಸಾರ್ವಜನಿಕರಿಗೆ ಮನರೇಗಾ ಯೋಜನೆಯಡಿ ಗ್ರಾಮೀಣ ಪ್ರದೇಶದ ಜನರಿಗೆ ಲಭ್ಯವಿರುವ ಉದ್ಯೋಗ ಅವಕಾಶ, ಕೂಲಿ ಮೊತ್ತ, ವೈಯಕ್ತಿಕ ಕಾಮಗಾರಿಗಳು ಸೇರಿದಂತೆ ಹಲವು ಉಪಯುಕ್ತ ಮಾಹಿತಿ ನೀಡಿ, 2025-26ನೇ ಸಾಲಿನ ಕಾರ್ಮಿಕರ ಆಯವ್ಯಯ ತಯಾರಿಸಲು ವೈಯಕ್ತಿಕ ಮತ್ತು ಸಮುದಾಯ ಬೇಡಿಕೆಗಳನ್ನು ಸದರಿ ಅಭಿಯಾನದಲ್ಲಿ ಸಲ್ಲಿಸಲು ಕೋರಲಾಯಿತು.

ಈ ಸಂದರ್ಭದಲ್ಲಿ ಮುಟ್ಟಳ್ಳಿ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿ ರಾಜೇಶ್ವರಿ, ಬೆಳಕೆ ಗ್ರಾಪಂ ಕಾರ್ಯದರ್ಶಿ ವಿದ್ಯಾ ಮಠದ, ಪಂಚಾಯತ್ ಸಿಬ್ಬಂದಿ ಕವಿತಾ ನಾಯ್ಕ, ಮಮತಾ ನಾಯ್ಕ್, ದತ್ತ ನಾಯ್ಕ, ಬಿಎಫ್‌ಟಿ ಅಂಜಲಿ ಸೇರಿದಂತೆ ಇನ್ನಿತರೆ ಪ್ರಮುಖರು ಉಪಸ್ಥಿತರಿದ್ದರು.

## ರಾಜ್ಯೋತ್ಸವ : ಸಾರ್ವಜನಿಕ ಧ್ವಜಾರೋಹಣ ನೆರವೇರಿಸಿದ ಸಚಿವ ಎಚ್.ಕೆ.ಪಾಟೀಲ

# ಉದ್ಯೋಗಕ್ಕಾಗಿ ಅವಕಾಶ ಸೃಷ್ಟಿ ಮಾಡುವುದು ನಮ್ಮ ಗುರಿ


ಗದಗ : ಕೈಗಾರಿಕೆಗಳತ್ತ ನಮ್ಮ ಚಿತ್ತ ಕೇಂದ್ರಿಕರಣವಾಗಬೇಕಾಗಿದೆ. ಆಗ ಮಾತ್ರ ಉದ್ಯೋಗ ಅರಸಿಕೊಂಡು ವಲಸೆ ಹೋಗುವುದನ್ನು ತಪ್ಪಿಸಬಹುದಾಗಿದೆ. ಮಹಿಳೆಯರ ಉದ್ಯೋಗಕ್ಕಾಗಿಯೂ ಜಿಲ್ಲೆಯಲ್ಲಿ ವಿಶೇಷ ಪ್ರಯತ್ನಗಳಾಗಬೇಕಾಗಿದೆ. ಇರುವ ನೆಲೆಯಲ್ಲಿಯೇ ಉದ್ಯೋಗಕ್ಕಾಗಿ ಅವಕಾಶ ಸೃಷ್ಟಿ ಮಾಡುವುದು ನಮ್ಮ ಗುರಿ ಎಂದು ಸಚಿವ ಎಚ್.ಕೆ.ಪಾಟೀಲ ಅವರು ನುಡಿದರು.

ನಗರದ ಕೆ.ಎಚ್. ಪಾಟೀಲ ಜಿಲ್ಲಾ ಕ್ರೀಡಾಂಗಣದಲ್ಲಿ ಶುಕ್ರವಾರ ಜಿಲ್ಲಾಡಳಿತದಿಂದ ಏರ್ಪಡಿಸಲಾದ ಕನ್ನಡ ರಾಜ್ಯೋತ್ಸವದ ಸಾರ್ವಜನಿಕ ಧ್ವಜಾರೋಹಣ ನೆರವೇರಿಸಿ ಅವರು ಮಾತನಾಡಿದರು. ಮೂಲಭೂತ ಸೌಲಭ್ಯಗಳ ಸೃಷ್ಟಿ ನಮ್ಮ ಸವಾಲು. ಅವುಗಳಲ್ಲಿ ಮನೆಗಳ ನಿರ್ಮಾಣ ಗದಗ ಜಿಲ್ಲೆ ವ್ಯವಹಾರ, ವಾಣಿಜ್ಯ, ಸಂಸ್ಕೃತಿ, ವಸ್ತು ಪ್ರದರ್ಶನಗಳ ಕೇಂದ್ರ ಸ್ಥಾನವನ್ನಾಗಿ ನಿರ್ಮಾಣ ಮಾಡುವುದು ಸೇರಿದಂತೆ ರೈತರ ಆದಾಯವನ್ನು ಇಮ್ಮಡಿ-ಮುಮ್ಮಡಿಯಾಗಿಸಿ ರೈತರನ್ನು ಶೋಷಣೆಯಿಂದ ಮುಕ್ತರನ್ನಾಗಿಸಿ ವೈಜ್ಞಾನಿಕ ಬದಲಾವಣೆಗೆ ಹೆಜ್ಜೆಯನ್ನಿರಿಸಿಬೇಕಾಗಿದೆ ಎಂದು ತಿಳಿಸಿದರು.

ಮಹಿಳೆಯರಿಗೆ ಅವರ ಸುತ್ತಲಿನ ಜಗತ್ತನ್ನು ಪರಿಚಯಿಸಿದ 'ಶಕ್ತಿಯೋಜನೆ', ಹಸಿವು ಮುಕ್ತ ಕರ್ನಾಟಕ ಮಾಡುವ ದೃಢ ಸಂಕಲ್ಪದೊಂದಿಗೆ ಅನುಷ್ಠಾನಕ್ಕೆ ಬಂದ 'ಅನ್ನಭಾಗ್ಯ ಯೋಜನೆ', ಉಚಿತ ಬೆಳಕು ಸುಸ್ಥಿರ ಬದುಕು, ಸರ್ವರನ್ನು ಒಳಗೊಂಡ ಆರ್ಥಿಕ ಮತ್ತು ಸಾಮಾಜಿ-ಕ ಪ್ರಗತಿಪರ ಅಭಿವೃದ್ಧಿಯ ಸಂಕೇತವಾದ 'ಗೃಹಜ್ಯೋತಿ ಯೋಜನೆ', ದೇಶದಲ್ಲಿಯೇ ಅತಿ ದೊಡ್ಡ ಆರ್ಥಿಕ ಭದ್ರತಾ ಯೋಜನೆಯಾದ ಮಹಿಳೆಯರ ಆರ್ಥಿಕ ಸ್ವಾವಲಂಬನೆಗೆ ಕಾರಣವಾದ 'ಗೃಹಲಕ್ಷ್ಮೀ ಯೋಜನೆ', ಪದವಿ ಹಾಗೂ ಡಿಪ್ಲೋಮಾ ವಿದ್ಯಾಭ್ಯಾಸ ಪೂರ್ಣಗೊಳಿಸಿ ಉದ್ಯೋಗದ ಹುಡುಕಾಟದಲ್ಲಿ ತೊಡಗಿರುವ ಯುವ ಜನರಿಗೆ ಗರಿಷ್ಟ ಎರಡು ವರ್ಷಗಳವರೆಗೆ ನಿರುದ್ಯೋಗ ಭದ್ರತೆ ಒದಗಿಸುವ'ಯುವನಿಧಿ ಯೋಜನೆ' ಗಳು ರಾಜ್ಯದಲ್ಲಿ ಪ್ರತಿಶತ 99 ರಷ್ಟು ಫಲಾನುಭವಿಗಳಿಗೆ ತಲುಪಿದ್ದು ನಮ್ಮೆಲ್ಲರಿಗೆ ನೆಮ್ಮದಿ ಮೂಡಿಸಿದೆ. ರಾಜ್ಯದಲ್ಲಿ ಇಂದು 1 ಕೋಟಿಗೂ ಅಧಿಕ ಬಡತನ ರೇಖೆಗಿಂತ ಕೆಳಗಿರುವ ಜನರನ್ನು ಮೇಲೆತ್ತುವ ಕಾರ್ಯದಲ್ಲಿ ರಾಜ್ಯ ಸರ್ಕಾರ ಯಶಸ್ವಿಯಾಗಿದೆ ಎಂಬುದು ಅಭಿಮಾನದ ಸಂಗತಿ ಎಂದರು

ರಾಜ್ಯದಲ್ಲಿ ಬಡವರನ್ನು ಮೇಲ್ಮಟ್ಟಕ್ಕೇರಿಸುವ ಮೂಲಕ ಕ್ರಾಂತಿಕಾರಕ ಕೆಲಸ ಮಾಡಿದ ಹೆಗ್ಗಳಿಕೆ ಸಿಎಂ ಸಿದ್ದರಾಮಯ್ಯ ನೇತೃತ್ವದ ಸರ್ಕಾರದ್ದು. ಪಂಚ ಗ್ಯಾರಂಟಿಗಳನ್ನು ಅನುಷ್ಠಾನಗೊಳಿಸಲು ಸರ್ಕಾರ ನಿರಂತರ ಶ್ರಮಿಸುವದರ ಮೂಲಕ ನುಡಿದಂತೆ ನಡೆದಿದ್ದೇವೆ. ಬಡವರ ಕಲ್ಯಾಣ ಕೆಲಸಗಳಿಗೆ ನಮ್ಮ ಸರ್ಕಾರ ಸದಾಕಾಲ ಕಂಕಣ ಬದ್ಧವಾಗಿದೆ ಎಂದು ನುಡಿದರು.

ಗದಗ ಜಿಲ್ಲೆಯ ಭೀಷ್ಮ ಕೆರೆ ಪ್ರವಾಸಿ ತಾಣದಲ್ಲಿ ರೂ. 62 ಲಕ್ಷಗಳ ಅಂದಾಜು ವೆಚ್ಚದಲ್ಲಿ ವರ್ಗ ಎ ಮಾದರಿಯ 'ಪ್ರವಾಸಿ



ಸ್ನೇಹಿ ಸಂಕೀರ್ಣ' ನಿರ್ಮಿಸಲು ಅನುದಾನ ಬಿಡುಗಡೆ ಮಾಡಲಾಗಿದೆ. ಗದಗ ತಾಲ್ಲೂಕಿನ ಸೊರಟೂರು ವಲಯದ ಕಪ್ಪತ್ತಗುಡ್ಡದ ಅರಣ್ಯ ಪ್ರದೇಶದಲ್ಲಿ ಅಂದಾಜು ರೂ. 850 ಲಕ್ಷಗಳಲ್ಲಿ 'ಜಂಗಲ್ ಲಾಡ್ಜಸ್ ಮತ್ತು ರೆಸಾರ್ಟ್' ನಿರ್ಮಿಸಲು ಭೂಮಿ ಪೂಜೆ ಮಾಡಲಾಗಿದೆ. ಗದಗ ಶಹರದಲ್ಲಿ ತ್ರೀ ಸ್ಟಾರ್ ಹೋಟೆಲ್ ಕಾಮಗಾರಿಗೆ 9 ಕೋಟಿ, ಕ್ಯಾಟ-ರಿಂಗ್ ಹಾಸ್ಪಿಟ್ಯಾಲಿಟಿ ಮತ್ತು ಹೋಟೆಲ್ ಮ್ಯಾನೇಜ್‌ಮೆಂಟ್ ಸಂಸ್ಥೆ ನಿರ್ಮಾಣ-ಕ್ಕೆ 8 ಕೋಟಿ, ಮಹಾಲಿಂಗಪುರ ಗ್ರಾಮದ ಕಪ್ಪತಗುಡ್ಡದಲ್ಲಿ ಪರಿಸರ ಪ್ರವಾಸೋದ್ಯಮ ಶಿಬಿರಕ್ಕೆ 7 ಕೋಟಿ, ಲಕ್ಕುಂಡಿ ಗ್ರಾಮದ 13 ದೇವಸ್ಥಾನದ ಪುನರುಜ್ಜೀವನ ಕಾಮಗಾ-ರಿಗೆ 5 ಕೋಟಿ, ಬಿಂಕದಕಟ್ಟಿಯ ಮೃಗಾಲಯ ನೈಟ್ ಸಫಾರಿಗೆ 4 ಕೋಟಿ, ತಿರಂಗಾ ಪಾರ್ಕ ಪ್ರದರ್ಶನ ಕಾಮಗಾರಿಗೆ 3 ಕೋಟಿ, ಭೀಷ್ಮ ಕೆರೆ ಮತ್ತು ಮೃಗಾಲಯದಲ್ಲಿ ಪುಟಾಣಿ ರೈಲು ಕಾಮಗಾರಿಗೆ 3 ಕೋಟಿ, ಕೊಣ್ಣೂರ ಸಮುದಾಯ ಭವನ ನಿರ್ಮಾಣಕ್ಕೆ 1 ಕೋಟಿ, ಜಿಗಳೂರು ಕೆರೆ ಹತ್ತಿರ ಪ್ರವಾಸಿ ಉದ್ಯಾನವನ ನಿರ್ಮಾಣಕ್ಕೆ 50 ಲಕ್ಷ ರೂ ಸೇರಿದಂತೆ ವಿವಿಧ ಒಟ್ಟು 24 ಕಾಮಗಾರಿಗಳಿಗೆ 50.85 ಕೋಟಿ ರೂ. ಅನುದಾನ ಮಂಜೂರಾಗಿದ್ದು, ಕಾಮಗಾರಿಗಳು ವಿವಿಧ ಹಂತದ ಪ್ರಗತಿಯಲ್ಲಿವೆ ಎಂದರು. ಮುಖ್ಯಮಂತ್ರಿಗಳ ವಿಶೇಷ ಅನುದಾನ ಯೋಜನೆಯಡಿ ಗದಗ ನರಗುಂದ ಮತಕ್ಷೇತ್ರಕ್ಕೆ 53 ಕಾಮಗಾರಿಗಳಿಗೆ 11.55 ಕೋಟಿ ಅನುದಾನ ಮಂಜೂರಾಗಿದೆ. ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಿಂದ 7 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಜಿಲ್ಲಾ ಕ್ರೀಡಾಂಗಣ ಹಾಗೂ ಒಳಾಂಗಣ ಕ್ರೀಡಾಂಗಣ ಅಭಿವೃದ್ಧಿ ಕಾಮಗಾರಿಗಳಿಗಾಗಿ ಅನುದಾನ ಬಿಡುಗಡೆ ಮಾಡಲಾಗಿದ್ದು ಕಾಮಗಾರಿ ಪೂರ್ಣಗೊಳ್ಳುವ ಹಂತದಲ್ಲಿವೆ. ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ ರಾಜ್ ವಿಶ್ವವಿದ್ಯಾಲಯದ ಆವರಣದಲ್ಲಿರುವ ಸಬರಮತಿ ಆಶ್ರಮದ ಪಕ್ಕದಲ್ಲಿ ಯುವಕರಲ್ಲಿ ಚೈತನ್ಯ ಮತ್ತು ಸ್ಫೂರ್ತಿ ತುಂಬುವ ಆಕಾಂಕ್ಷೆಯಿಂದ ಮುವತ್ತರೊಂಬತ್ತುವರೆ 39 ಅಡಿ ಎತ್ತರದ ವಿವೇಕಾನಂದರ ಕಂಚಿನ ಪ್ರತಿಮೆ ಸ್ಥಾಪನೆ ಮಾಡಲಾಗಿದೆ ಎಂದರು.

ಗದಗ ತಾಲೂಕಿನ ಕಾರವಾರ ಕೈಗಾ ಇಳಕಲ್ ರಾಜ್ಯ ಹೆದ್ದಾರಿ 6ಕ್ಕೆ ಹೊಂದಿಕೊಂಡಿರುವ ನಾಗಾವಿ ಕ್ರಾಸ್‌ದಿಂದ ಮುಳಗುಂದ ರಸ್ತೆ 25 ಕೋಟಿ ರೂ. ಗಳಲ್ಲಿ, ನರಗುಂದ ತಾಲೂಕಿನ ಬೀಡಿ ಬೆಳವಣಿಕಿ ರಾಜ್ಯ ಹೆದ್ದಾರಿ 56, ಬೆಳವಣಿಕಿ ಕ್ರಾಸ್‌ದಿಂದ ಜಿಲ್ಲಾ ಗಡಿಯವರೆಗೆ 10 ಕೋಟಿ, ರೋಣ ತಾಲೂಕಿನ ಮುನವಳ್ಳಿ ಕೋಟುಮಚಗಿ ರಾಜ್ಯ ಹೆದ್ದಾರಿ 83ರಲ್ಲಿ ರೋಣ ಪಟ್ಟಣ ಪರಿಮಿತಿಯಿಂದ ಹೊಳೆಆಲೂರ ರಸ್ತೆಯವರೆಗೆ ರೂ. 20 ಕೋಟಿ, ಶಿರಹಟ್ಟಿ ತಾಲೂಕಿನ ಕಲ್ಕಲಾ ಶಿಗ್ಗಾಂವ ರಾಷ್ಟ್ರೀಯ ಹೆದ್ದಾರಿ ಹುಲ್ಲೂರ ಕ್ರಾಸ್‌ದಿಂದ ಸೂರಣಗಿ ಗ್ರಾಮದವರೆಗೆ 10 ಕೋಟಿ ರೂ. ಅನುದಾನ ಬಿಡುಗಡೆಯಾಗಿದ್ದು ಕಾಮಗಾ-ರಿಗಳು ಪ್ರಗತಿಯಲ್ಲಿವೆ ಎಂದು ತಿಳಿಸಿದರು.

ಜಿಮ್ ಕಾಮಗಾರಿಗಳು ನೂತನ ಡಯಾಲಿಸಿಸ್ ಘಟಕ ಉದ್ಘಾಟನೆ ಮಾಡಲಾಗಿದೆ. 20 ಕೋಟಿ ರೂಪಾಯಿಗಳ 50 ಹಾಸಿಗೆಗಳ ತೀವ್ರ ನಿಗಾ ಘಟಕಕ್ಕೆ ಹಾಗೂ ಜಿಲ್ಲಾ ಸಮಗ್ರ ಸಾರ್ವಜನಿಕ ಆರೋಗ್ಯ ಪ್ರಯೋಗಾಲಯಕ್ಕೆ ಭೂಮಿ ಪೂಜೆ ನೆರವೇ-ರಿಸಲಾಗಿದೆ ಎಂದರು.

ಗಾಂಧೀ ಭಾರತ : ಬೆಳಗಾವಿಯ ಕಾಂಗ್ರೆಸ್ ಅಧಿವೇಶನಕ್ಕೆ ನೂರರ ಸಂಭ್ರಮ ಸಲುವಾಗಿ ಬೆಳಗಾವಿಯಲ್ಲಿ 1924ರಲ್ಲಿ ಮಹಾತ್ಮಾ ಗಾಂಧೀಜಿ ಅವರ ಅಧ್ಯಕ್ಷತೆಯಲ್ಲಿ ಕಾಂಗ್ರೆಸ್ ಅಧಿವೇಶನ ಜರುಗಿತ್ತು. ಮಹಾತ್ಮಾ ಗಾಂಧೀಜಿ ಅವರು ಅಧ್ಯಕ್ಷತೆ ವಹಿಸಿದ ಏಕೈಕ ಅಧಿವೇಶನ ಇದಾಗಿದೆ. ನೂರರ ಸಂಭ್ರಮದ ಸಂದರ್ಭದಲ್ಲಿ ಅದರ ನೆನಪನ್ನು ಮರುಸ್ಥಾಪಿಸಲು ಕರ್ನಾಟಕ ಸರ್ಕಾರ 'ಗಾಂಧೀ ಭಾರತ' ಹೆಸರಡಿಯಲ್ಲಿ ರಾಜ್ಯದಾದ್ಯಂತ ವೈವಿಧ್ಯಮಯ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ ಎಂದು ತಿಳಿಸಿದರು.

ಜನತಾ ದರ್ಶನ : ಜಿಲ್ಲೆಯ ಸಾರ್ವಜನಿಕರ ಸಮಸ್ಯೆಗಳಿಗೆ ಸ್ಪಂದಿಸಲು ಗದಗ ಜಿಲ್ಲೆಯಲ್ಲಿ ಮುಂಡರಗಿ ತಾಲ್ಲೂಕನ್ನೊಳಗೊಂಡು ಈಗಾಗಲೇ 3 ಬಾರಿ ಜನತಾ ದರ್ಶನ ಕಾರ್ಯಕ್ರಮ ಹಮ್ಮಿಕೊಂಡು ಹಲವಾರು ಸಮಸ್ಯೆಗಳಿಗೆ ಸ್ಥಳದಲ್ಲಿಯೇ ಪರಿಹಾರಗಳನ್ನು ಘೋಷಿಸಿ ಸಾರ್ವಜನಿಕರ ಅಹವಾಲುಗಳಿಗೆ ಸೂಕ್ತ ಸ್ಪಂದನೆ ದೊರಕುವಂತೆ ಮಾಡಲಾಗಿದೆ. ಸಮಸ್ಯೆಗಳನ್ನು ಹೊತ್ತು ತಂದ ಸಾರ್ವಜನಿಕರ ಸಮಸ್ಯೆಗಳಿಗೆ ಹಾರಿಕೆ ಉತ್ತರ ನೀಡದೆ, ತಾರ್ಕಿಕ ಅಂತ್ಯ (ಲಾಜಿಕಲ್ ಎಂಡ್) ಕೊಟ್ಟು ಒಟ್ಟು 2154 ಅರ್ಜಿಗಳಲ್ಲಿ ಕೇವಲ 04 ಅರ್ಜಿಗಳನ್ನು ಹೊರತುಪಡಿಸಿ ಉಳಿದಂತೆ ಎಲ್ಲ ಅಹವಾಲುಗಳಿಗೆ ಪರಿಹಾರ ನೀಡಲಾಗಿದೆ ಎಂದು ಸಚಿವ ಎಚ್.ಕೆ.ಪಾಟೀಲ ಅವರು ಹೇಳಿದರು.

ಸಮಾರಂಭದಲ್ಲಿ ವಿಧಾನ ಪರಿಷತ್ ಸದಸ್ಯ ಎಸ್.ವಿ.ಸಂಕನೂರ,ನಗರಾಬಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಅಕಬರಸಾಬ ಬಬರ್ಜಿ, ಜಿಲ್ಲಾಧಿಕಾರಿ ಗೋವಿಂದರೆಡ್ಡಿ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಭರತ್ ಎಸ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಎಸ್.ನೇಮಗೌಡ, ಉಪ ಅರಣ್ಯ ಸಂರಕ್ಷಣಾಧಿಕಾರಿ ಲೇಖರಾಜ್ ಮೀನಾ, ಅಪರ ಜಿಲ್ಲಾಧಿಕಾರಿ ಅನ್ನಪೂರ್ಣ ಎಂ, ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾ-ರಿಗಳು, ಜನಪ್ರತಿನಿಧಿಗಳು, ಗಣ್ಯರುಗಳು, ಸಾರ್ವಜನಿಕರು, ಅಪಾರ ಸಂಖ್ಯೆಯಲ್ಲಿ ಶಾಲಾ ವಿಧ್ಯಾರ್ಥಿಗಳು ಉಪಸ್ಥಿತರಿದ್ದರು.

# ದೇಹದಲ್ಲಿನ ಇನ್‌ಫೆಕ್ಷನ್‌ನ್ನು ನೈಸರ್ಗಿಕವಾಗಿ ನಿವಾರಿಸುವ ಆಂಟಿಬಯೋಟಿಕ್‌ಗಳಿವು



ಬ್ಯಾಕ್ಟೀರಿಯಾದಿಂದ ಉಂಟಾಗಿರುವ ಸೋಂಕನ್ನು ನಿವಾರಿಸಲು ಸಹಾಯ ಮಾಡಬಲ್ಲ ನಮ್ಮ ಅಡುಗೆಮನೆಯಲ್ಲೇ ಇರುವ ಈ ಆಯುರ್ವೇದಿಕ್ ಮಸಾಲೆಗಳನ್ನು ದಿನನಿತ್ಯ ಬಳಸುವುದು ಆರೋಗ್ಯಕ್ಕೆ ಬಹಳ ಒಳ್ಳೆಯದು.

ನಮ್ಮ ಅಡುಗೆ ಮನೆಯಲ್ಲಿರುವ ಹಲವಾರು ಮಸಾಲೆಗಳು ಸಾಕಷ್ಟು ಆಯುರ್ವೇದಿಕ್ ಗುಣಗಳನ್ನು ಹೊಂದಿದೆ. ವಿವಿಧ ಪರಿಸರ ಸಮಸ್ಯೆಗಳ ಹೊರತಾಗಿಯೂ, ತರಕಾರಿಗಳು, ಹಣ್ಣುಗಳು, ಗಿಡಮೂಲಿಕೆಗಳು, ಸಸ್ಯದ ಸಾರಗಳು, ಸಾರಭೂತ ತೈಲಗಳು ಯಾವಾಗಲೂ ಬ್ಯಾಕ್ಟೀರಿಯಾದ ವಿರುದ್ಧ ಹೋರಾಡುವ ಸಾಮರ್ಥ್ಯವನ್ನು ಉಳಿಸಿಕೊಂಡಿವೆ. ಈ ಸಸ್ಯ-ಆಧಾರಿತ ಉತ್ಪನ್ನಗಳು ನೈಸರ್ಗಿಕವಾಗಿ ನಮ್ಮ ದೇಹದಲ್ಲಿರುವ ಬ್ಯಾಕ್ಟೀರಿಯಾಗಳು ಹಾಗೂ ಸೋಂಕನ್ನು ನಿವಾರಿಸಲು ಸಹಾಯ ಮಾಡುತ್ತದೆ.

**ಅರಿಶಿನ**

ಅರಿಶಿನವು ಬ್ಯಾಕ್ಟೀರಿಯಾ ವಿರೋಧಿ ಗುಣಗಳನ್ನು ಹೊಂದಿದ್ದು ಉತ್ತಮ ಆಂಟಿಬಯೋಟಿಕ್ ಆಗಿ ಕೆಲಸ ಮಾಡುತ್ತದೆ. ಸಾವಿರಾರು ವರ್ಷಗಳಿಂದ, ಅರಿಶಿನವನ್ನು ಅದರ ಆಂಟಿಮೈಕ್ರೊಬಿಯಲ್ ಮತ್ತು ಬ್ಯಾಕ್ಟೀರಿಯಾ ವಿರೋಧಿ ಗುಣಲಕ್ಷಣಗಳಿಗಾಗಿ ಸಾಂಪ್ರದಾಯಿಕ ಆಯುರ್ವೇದ ಔಷಧದಲ್ಲಿ ಬಳಸಲಾಗುತ್ತದೆ. ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆ. ಆದ್ದರಿಂದ ಇದನ್ನು ದೈನಂದಿನ ಆಹಾರದ ಭಾಗವಾಗಿಸುವುದು ಒಳ್ಳೆಯದು.ಇದನ್ನು ಹಾಲಿನೊಂದಿಗೆ ಬೆರೆಸಿ ಕುಡಿಯಬಹುದು, ಅಥವಾ ಅರಿಶಿನದ ಟೀ ಮಾಡಿ ಕುಡಿಯಬಹುದು. ಹಾಗೆಯೇ ಗಾಯಗಳು, ಹುಣ್ಣುಗಳಿಗೆ ಹಚ್ಚಬಹುದು.

**ಜೇನು**

ಜೇನುತುಪ್ಪವು ಅದರ ಗುಣಪಡಿಸುವ ಗುಣಲಕ್ಷಣಗಳಿಗೆ ಹೆಸರುವಾಸಿಯಾಗಿದೆ. ಜೇನುತುಪ್ಪದಲ್ಲಿ ಹೈಡ್ರೋಜನ್ ಪೆರಾಕ್ಸೈಡ್ ಇರುವಿಕೆಯು ಪ್ರಬಲವಾದ ಬ್ಯಾಕ್ಟೀರಿಯಾ ವಿರೋಧಿ ಗುಣಗಳನ್ನು ಪ್ರದರ್ಶಿಸುತ್ತದೆ. ಇದರ ಜೊತೆಗೆ, ಹೆಚ್ಚಿನ ಸಕ್ಕರೆ ಅಂಶವು ಬ್ಯಾಕ್ಟೀರಿಯಾದ ಬೆಳವಣಿಗೆಯನ್ನು ತಡೆಯುತ್ತದೆ. ಜೇನುತುಪ್ಪವು ಶಿಲೀನಲ್ಲಿ ಕಡಿಮೆಯಿರುವುದರಿಂದ ಬ್ಯಾಕ್ಟೀರಿಯಾದಿಂದ ತೇವಾಂಶವನ್ನು ತೆಗೆದುಹಾಕುತ್ತದೆ, ಇದರಿಂದಾಗಿ ಅದು ನಿರ್ಜಲೀಕರಣಗೊಳ್ಳುತ್ತದೆ ಮತ್ತು ಸಾಯುತ್ತದೆ. ವಾಸಿಯಾಗುವ ಪ್ರಕ್ರಿಯೆಯನ್ನು ಸುಲಭಗೊಳಿಸಲು ಸೋಂಕಿತ ಭಾಗಗಳು ಅಥವಾ ಗಾಯಗಳ ಮೇಲೆ ಸ್ಥಳೀಯವಾಗಿ ಜೇನುತುಪ್ಪವನ್ನು ಹಚ್ಚಿರಿ.

ಗಾಯಗಳು, ಸುಟ್ಟಗಾಯಗಳು, ಹುಣ್ಣುಗಳಿಗೆ ಚಿಕಿತ್ಸೆ ನೀಡಲು ಜೇನುತುಪ್ಪ ಉತ್ತಮವಾಗಿದೆ. ಜೇನುತುಪ್ಪವು 60 ಕ್ಕೂ ಹೆಚ್ಚು ರೀತಿಯ ಬ್ಯಾಕ್ಟೀರಿಯಾಗಳನ್ನು ತಡೆಯುತ್ತದೆ ಎಂದು ಅಧ್ಯಯನವು ತೋರಿಸಿದೆ. ಉತ್ತಮ ಭಾಗವೆಂದರೆ ನೀವು ಅದರ ಕಾರ್ಯವನ್ನು ಪ್ರಚೋದಿಸಲು ಸ್ಥಳೀಯವಾಗಿ ಮತ್ತು ಆಂತರಿಕವಾಗಿ ಜೇನುತುಪ್ಪವನ್ನು ಬಳಸಬಹುದು.

**ಕರಿಮೆಣಸು**

ಕಾಳುಮೆಣಸಿನಲ್ಲಿರುವ ಕ್ಯಾಪ್ಸೈಸಿನ್‌ನ ಸಮೃದ್ಧತೆಯು ಸಂಭಾವ್ಯ ನೈಸರ್ಗಿಕ ಪ್ರತಿಜೀವಕವಾಗಿ ಕಾರ್ಯನಿರ್ವಹಿಸುತ್ತದೆ ಮತ್ತು ಆಹಾರ ವಿಷ ಮತ್ತು ಇತರ ಜಠರಗರುಳಿನ ಸೋಂಕುಗಳನ್ನು ಗುಣಪಡಿಸುವಲ್ಲಿ ಬಹಳ ಪರಿಣಾಮಕಾರಿಯಾಗಿದೆ. ಇದು ಚಯಾಪಚಯವನ್ನು ಹೆಚ್ಚಿಸುತ್ತದೆ ಮತ್ತು ದೇಹದ ಉಷ್ಣತೆಯನ್ನು ಹೆಚ್ಚಿಸುತ್ತದೆ ಆ ಮೂಲಕ ವೈರಲ್ ಮತ್ತು ಬ್ಯಾಕ್ಟೀರಿಯಾದ ಸೋಂಕಿನ ವಿರುದ್ಧ ಹೋರಾಡಲು ಸಹಾಯ ಮಾಡುತ್ತದೆ.

**ಲವಂಗ**

ಲವಂಗವು ಪರಿಣಾಮಕಾರಿ ಪ್ರತಿಜೀವಕವಾಗಿ ಕಾರ್ಯನಿರ್ವಹಿಸುತ್ತದೆ. ಉರಿಯೂತವನ್ನು ಕಡಿಮೆ ಮಾಡುತ್ತದೆ ಮತ್ತು ನೋವನ್ನು ನಿವಾರಿಸುತ್ತದೆ. ಹಲ್ಲಿನ ಸಮಸ್ಯೆಗಳು ಸೇರಿದಂತೆ ಸೋಂಕುಗಳನ್ನು ತಡೆಗಟ್ಟಲು ಇವುಗಳ ನಿಯಮಿತ ಸೇವನೆಯು ಸೂಕ್ತ ಮಾರ್ಗವಾಗಿದೆ. ಆಹಾರ ವಿಷ, ಬಾಯಿಯ ಸೋಂಕುಗಳಿಗೆ ಚಿಕಿತ್ಸೆ ನೀಡಲು ಇದು ಉತ್ತಮವಾಗಿ ಕಾರ್ಯನಿರ್ವಹಿಸುತ್ತದೆ ಮತ್ತು ಗಾಯಗಳನ್ನು ಗುಣಪಡಿಸಲು ಸಹಕಾರಿಯಾಗಿದೆ.

**ಬೆಳ್ಳುಳ್ಳಿ ಸಾರ**

ಬೆಳ್ಳುಳ್ಳಿಯು ಪ್ರಬಲವಾದ ಬ್ಯಾಕ್ಟೀರಿಯಾ ವಿರೋಧಿ ಗುಣಗಳನ್ನು ಹೊಂದಿದೆ ಅದು ಬ್ಯಾಕ್ಟೀರಿಯಾದ ವಿರುದ್ಧ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತದೆ ಮತ್ತು ಶಿಲೀಂಧ್ರಗಳ ಸೋಂಕನ್ನು ತಡೆಯುತ್ತದೆ. ಬೆಳ್ಳುಳ್ಳಿಯಲ್ಲಿರುವ ಅಲಿಯಮ್ ಸಂಯುಕ್ತವು ಗ್ರಾಂ-ಪಾಸಿಟಿವ್ ಮತ್ತು ಗ್ರಾಂ-ಋಣಾತ್ಮಕ ಬ್ಯಾಕ್ಟೀರಿಯಾಗಳನ್ನು ಕೊಲ್ಲುತ್ತದೆ ಮತ್ತು ಅತಿಸಾರವನ್ನು ಉಂಟುಮಾಡುವ ಕರುಳಿನ ಸೋಂಕುಗಳ ಚಿಕಿತ್ಸೆಯಲ್ಲಿ ಪರಿಣಾಮಕಾರಿಯಾಗಿದೆ ಎಂದು ಪುರಾವೆಗಳು ಸಾಬೀತುಪಡಿಸುತ್ತವೆ. ವಿವಿಧ ಸೋಂಕುಗಳನ್ನು ಎದುರಿಸಲು ವೈದ್ಯರು ಪ್ರತಿದಿನ ಎರಡು ಬೆಳ್ಳುಳ್ಳಿಯ ಬೀಜಗಳನ್ನು ತಿನ್ನಲು ಶಿಫಾರಸು ಮಾಡುತ್ತಾರೆ.ಆದರೆ ರಕ್ತ ತೆಳುವಾಗಿಸುವ ಔಷಧಗಳನ್ನು ಸೇವಿಸುವ ಜನರು ವೈದ್ಯರ ಸಲಹೆ ಪಡೆಯುವುದು ಉತ್ತಮ.

ಬೆಳ್ಳುಳ್ಳಿಯನ್ನು ಸೇವಿಸುವುದು ಸುರಕ್ಷಿತವಾಗಿದೆ, ಆದರೆ ಅತಿಯಾದ ಬಳಕೆಯು ಆಂತರಿಕ ರಕ್ತಸ್ರಾವಕ್ಕೆ ಕಾರಣವಾಗಬಹುದು. ಒಂದು ದಿನದಲ್ಲಿ ಸುಮಾರು ಎರಡು ಎಸಳು ಬೆಳ್ಳುಳ್ಳಿ ಸೇವಿಸಿ ಅಥವಾ ಆಲಿವ್ ಎಣ್ಣೆಯಲ್ಲಿ ನೆನೆಸಿ ನಂತರ ಅದನ್ನು ತೆಗೆದುಕೊಳ್ಳಿ.

**ಶುಂಠಿ**

ಶುಂಠಿಯನ್ನು ನೈಸರ್ಗಿಕ ಪ್ರತಿಜೀವಕ ಎಂದು ಗುರುತಿಸಲಾಗುತ್ತದೆ. ಅದರ ಆಂಟಿಮೈಕ್ರೊಬಿಯಲ್ ಚಟುವಟಿಕೆಯ ಜೊತೆಗೆ ಶುಂಠಿಯು ಉತ್ಕರ್ಷಣ ನಿರೋಧಕ, ಉರಿಯೂತದ ಮತ್ತು ಹೆಪ್ಪುರೋಧಕ ಗುಣಲಕ್ಷಣಗಳನ್ನು ಹೊಂದಿದೆ. ಶುಂಠಿಯು ಜೀರ್ಣಕಾರಿ ಬೆಂಕಿಯನ್ನು ಹುಟ್ಟುಹಾಕುವುದಲ್ಲದೆ, ಇದು ಹಸಿವನ್ನು ಹೆಚ್ಚಿಸುತ್ತದೆ, ಉದ್ದೇಶಿತ ದೇಹದ ಅಂಗಾಂಶಗಳಿಗೆ ಪೋಷಕಾಂಶಗಳ ಸಂಯೋಜನೆ ಮತ್ತು ಸಾಗಣೆಯನ್ನು ಸುಧಾರಿಸುತ್ತದೆ. ಶುಂಠಿಯು ಪ್ರತಿದಿನ ಬಳಸಬಹುದಾದ ಅತ್ಯುತ್ತಮ ಮಸಾಲೆಯಾಗಿದೆ.

ಇದನ್ನು ನೀವು ಅಡುಗೆಯಲ್ಲೂ ಬಳಸಬಹುದು, ಶುಂಠಿ ಚಹಾ ಮಾಡಿಯೂ ಕುಡಿಯಬಹುದು.



# ಕಟ್ಟಿಕೊಂಡ ಹೃದಯದ ಅಪಧಮನಿಗಳಿಗೆ ಬೆಸ್ಟ್ ಈ ಕಪ್ಪು ಕಲರ್ ಸೂಪರ್ ಫುಡ್ಸ್!

ನಮ್ಮ ಹೃದಯದ ಆರೋಗ್ಯವನ್ನು ಕಾಪಾಡಿಕೊಳ್ಳುವ ಟೆಕ್ನಿಕ್ ನಮ್ಮಲ್ಲಿಯೇ ಇದೆ. ನಾವು ತಿನ್ನುವ ಯಾವ ಆಹಾರಗಳು ಹೃದಯಕ್ಕೆ ಸೂಕ್ತ ಎನ್ನುವುದನ್ನು ತಿಳಿದುಕೊಂಡರೆ ಸಾಕು. ನೋಡಲು ಕಪ್ಪು ಬಣ್ಣದಲ್ಲಿ ಕಾಣುವ ಕೆಲವು ಆಹಾರ ಪದಾರ್ಥಗಳು ಹೃದಯದ ಆರೋಗ್ಯವನ್ನು ರಕ್ಷಣೆ ಮಾಡುತ್ತವೆ ಮತ್ತು ಹೃದಯ ರಕ್ತನಾಳದ ಆರೋಗ್ಯವನ್ನು ಕಾಪಾಡುತ್ತವೆ ಎನ್ನುವ ಮಾತಿದೆ.

ಮನುಷ್ಯನಿಗೆ ಒಂದು ವೇಳೆ ರಕ್ತನಾಳಗಳಲ್ಲಿ ಕೊಲೆಸ್ಟ್ರಾಲ್ ಸೇರಿಕೊಂಡರೆ ಅದರಿಂದ ಹೃದಯದ ಕಾರ್ಯ ಚಟುವಟಿಕೆ ಕ್ರಮೇಣವಾಗಿ ಕಡಿಮೆಯಾಗುತ್ತಾ ಬರುತ್ತದೆ. ಏಕೆಂದರೆ ಕೊಲೆಸ್ಟ್ರಾಲ್ ಅಥವಾ ಪ್ಲೇಕ್ ಹೃದಯಕ್ಕೆ ಅಷ್ಟು ಒಳ್ಳೆಯದಲ್ಲ. ಇದು ರಕ್ತನಾಳಗಳಲ್ಲಿ ರಕ್ತ ಹರಿಯುವ ಸಾಧ್ಯತೆಯನ್ನು ಕಡಿಮೆ ಮಾಡುತ್ತದೆ ಅಥವಾ ಸಂಪೂರ್ಣವಾಗಿ ನಿಂತು ಹೋಗುವ ಹಾಗೆ ಮಾಡುತ್ತದೆ. ಇದರಿಂದ ಹೃದಯಘಾತ ಅಥವಾ ಹೃದಯಕ್ಕೆ ಸಂಬಂಧಪಟ್ಟ ಸಮಸ್ಯೆಗಳು ಕಾಣಿಸಲು ಶುರುವಾಗುತ್ತವೆ. ಹೃದಯದ ಆರೋಗ್ಯವನ್ನು ರಕ್ಷಣೆ ಮಾಡಿಕೊಳ್ಳಲು ನಾವು ನಮ್ಮ ಆಹಾರ ಪದ್ಧತಿಯಲ್ಲಿ ಬದಲಾವಣೆ ತಂದುಕೊಳ್ಳುವುದು ತುಂಬಾ ಅವಶ್ಯಕ. ಪ್ರಸ್ತುತ ಈ ಲೇಖನದಲ್ಲಿ ಹೃದಯಕ್ಕೆ ಸಹಕಾರಿಯಾದ ಕೆಲವು ಕಪ್ಪು ಬಣ್ಣದ ಆಹಾರ ಪದಾರ್ಥಗಳ ಬಗ್ಗೆ ತಿಳಿಯಲು ಹೊರಟಿದ್ದೇವೆ. ಇವುಗಳನ್ನು ತಿನ್ನುವುದರಿಂದ ಕೊಲೆಸ್ಟ್ರಾಲ್ ಕಡಿಮೆಯಾಗುತ್ತದೆ ಮತ್ತು ಹೃದಯದ ಅಪಧಮನಿಗಳಲ್ಲಿ ಪ್ಲೇಕ್ ನಿರ್ಮಾಣವಾಗುವುದು ತಪ್ಪುತ್ತದೆ.

**ಬ್ಲಾಕ್ ಬೀನ್ಸ್**

ಲ್ಯಾಟಿನ್ ಅಮೆರಿಕನ್ ಮೀಲ್ಸ್ ನಲ್ಲಿ ಸಾಮಾನ್ಯವಾಗಿ ಬಳಕೆ ಆಗುವ ಬ್ಲಾಕ್ ಬೀನ್ಸ್ ತನ್ನಲ್ಲಿ ಹೆಚ್ಚಿನ ಪ್ರಮಾಣದ ನಾರಿನ ಅಂಶವನ್ನು ಒಳಗೊಂಡಿದ್ದು, ಕೊಲೆಸ್ಟ್ರಾಲ್ ಕಡಿಮೆ ಮಾಡುವಲ್ಲಿ ಮತ್ತು ಹೃದಯದ ಆರೋಗ್ಯವನ್ನು ರಕ್ಷಣೆ ಮಾಡುವುದರಲ್ಲಿ ಸಾಕಷ್ಟು ನೆರವಾಗುತ್ತದೆ. ಇದರಲ್ಲಿರುವ ಆಂಟಿ ಆಕ್ಸಿಡೆಂಟ್ ಅಂಶಗಳು ನಮ್ಮ ದೇಹದ ಉರಿಯುತ ವನ್ನು ಕಡಿಮೆ ಮಾಡುವ ಜೊತೆಗೆ ಹೃದಯದ ಅಪಧಮನಿಗಳಲ್ಲಿ ಕಟ್ಟಿ ಕೊಂಡಂತೆ ಆಗುವುದನ್ನು ತಡೆಯುತ್ತವೆ. ನೀವು ತಯಾರಿಸುವ ಸಲಾಡ್, ಸೂಪ್ ಇನ್ನಿತರ ಡಿಶ್ ಗಳಲ್ಲಿ ಇವುಗಳನ್ನು ಬಳಸಿ ಹೃದಯದ ಆರೋಗ್ಯವನ್ನು ವೃದ್ಧಿಸಿಕೊಳ್ಳಬಹುದು.

**ಕಪ್ಪು ಬೆಳ್ಳುಳ್ಳಿ**

ಇದು ಆಂಟಿ ಆಕ್ಸಿಡೆಂಟ್ ಪ್ರಮಾಣಗಳನ್ನು ಹೇರಳವಾಗಿ ಹೊಂದಿದ್ದು, ನಮ್ಮ ದೇಹದ ಆಕ್ಸಿಡೇಟೀವ್ ಒತ್ತಡವನ್ನು ಕಡಿಮೆ ಮಾಡುವ ಜೊತೆಗೆ ರಕ್ತದ ಒತ್ತಡವನ್ನು ನಿಯಂತ್ರಣ ಮಾಡುತ್ತದೆ ಮತ್ತು ದೇಹದಲ್ಲಿ ಒಳ್ಳೆಯ ಕೊಲೆಸ್ಟ್ರಾಲ್ ಪ್ರಮಾಣ ನಿರ್ವಹಣೆ ಆಗುವಂತೆ ನೋಡಿಕೊಳ್ಳುತ್ತದೆ. ಇದು ನಮ್ಮ ಹೃದಯ ಸ್ನೇಹಿ ಆಹಾರ ಪದ್ಧತಿಯಲ್ಲಿ ಒಂದಾಗಬಹುದಾದ ಆಹಾರವಾಗಿದೆ. ಕಪ್ಪು ಬೆಳ್ಳುಳಿಯನ್ನು ಕೂಡ ನೀವು ಅನೇಕ ಅಡುಗೆಗಳಲ್ಲಿ ಡ್ರೆಸ್ಸಿಂಗ್, ಮ್ಯಾರಿನೇಡ್ ಇತ್ಯಾದಿಗಳಲ್ಲಿ ಟಾಪಿಂಗ್ ಆಗಿ ಬಳಸಬಹುದು.


**ಬ್ಲಾಕ್ಬೆರ್ರಿ**

ಅತ್ಯಂತ ರುಚಿಕರವಾದ ಮತ್ತು ಹೃದಯಕ್ಕೆ ಅಷ್ಟೇ ಆರೋಗ್ಯಕರವಾದ ಸ್ನಾಕ್ಸ್ ಇದಾಗಿದೆ. ಇದರಲ್ಲಿ ವಿಟಮಿನ್ ಸಿ, ವಿಟಮಿನ್ ಕೆ, ನಾರು ಮತ್ತು ಆಂಟಿ ಆಕ್ಸಿಡೆಂಟ್ ಅಂಶಗಳು ಅಪಾರ ಪ್ರಮಾಣದಲ್ಲಿವೆ. ನಮ್ಮ ದೇಹದ ಉರಿಯುತವನ್ನು ಕಡಿಮೆ ಮಾಡುವ ಜೊತೆಗೆ ರಕ್ತನಾಳಗಳ ಆರೋಗ್ಯವನ್ನು ಕಾಪಾಡುವುದರಲ್ಲಿ ಇವು ಸಾಕಷ್ಟು ನೆರವಿಗೆ ಬರುತ್ತವೆ. ನಿಯಮತವಾಗಿ ಬ್ಲಾಕ್ಬೆರಿ ಸೇವನೆ ಮಾಡುವುದರಿಂದ ಹೃದಯದ ಕಾಯಿಲೆ ದೂರವಾಗುತ್ತದೆ ಮತ್ತು ನಮ್ಮ ಹೃದಯದ ಅಪಧಮನಿಗಳು ಸ್ವಚ್ಛವಾ ಗುತ್ತವೆ. ಇವುಗಳನ್ನು ಸ್ಮೂತಿ ಮಾಡಿಕೊಂಡು ಫ್ರೆಶ್ ಆಗಿ ಸೇವಿಸಬಹುದು ಅಥವಾ ಮೊಸರು ಇಲ್ಲವೆಂದರೆ ಓಟ್ ಮೀಲ್ ಗಳಲ್ಲಿ ಕೂಡ ಬಳಸ ಬಹುದು.

**ಕಪ್ಪು ಚಿಯಾ ಬೀಜಗಳು**

ಕಪ್ಪು ಚಿಯಾ ಬೀಜಗಳು ಅಪಾರ ಪೌಷ್ಟಿಕಾಂಶಗಳನ್ನು ಒಳಗೊಂಡಿದ್ದು, ಒಮೆಗಾ 3 ಫ್ಯಾಟಿ ಆಮ್ಲಗಳ ಪ್ರಮಾಣ ಇವುಗಳಲ್ಲಿ ಹೇರಳವಾಗಿ ಕಂಡುಬರುತ್ತದೆ. ಮುಖ್ಯವಾಗಿ ನಮ್ಮ ಉರಿಯುತವನ್ನು ನಿಯಂತ್ರಣ ಮಾಡುವ ಜೊತೆಗೆ ಹೃದಯದ ಆರೋಗ್ಯವನ್ನು ವೃದ್ಧಿಸುವ ಕೆಲಸ ಮಾಡುತ್ತವೆ. ಇವುಗಳಲ್ಲಿರುವ ನಾರಿನ





ಅಂಶ ನಮ್ಮ ಕೊಲೆಸ್ಟ್ರಾಲ್ ನಿಯಂತ್ರಣದಲ್ಲಿ ಸಾಕಷ್ಟು ಸಹಾಯ ಮಾಡುತ್ತದೆ. ಹೀಗಾಗಿ ಕಪ್ಪು ಚಿಯಾ ಬೀಜಗಳನ್ನು ನಿಮ್ಮ ಸ್ಮೂತಿ, ಓಟ್ ಮೀಲ್ ಅಥವಾ ಬೇಯಿಸಿದ ಆಹಾರ ಪದಾರ್ಥಗಳಲ್ಲಿ ಪೌಷ್ಟಿಕಾಂಶಗಳನ್ನು ವೃದ್ಧಿಸಲು ಮತ್ತು ಹೃದಯ ರಕ್ತನಾಳಗಳ ಆರೋಗ್ಯವನ್ನು ಕಾಪಾಡಿಕೊಳ್ಳಲು ಬಳಸಬಹುದಾಗಿದೆ.

**ಕಪ್ಪು ಎಳ್ಳು**

ನಮ್ಮ ಭಾರತ ಸೇರಿದಂತೆ ಹಲವು ಏಷ್ಯಾ ಖಂಡದ ದೇಶಗಳು ಕಪ್ಪು ಎಳ್ಳು ಬಳಕೆ ಮಾಡುತ್ತಾರೆ. ಇವುಗಳಲ್ಲಿರುವ



ಮೆಗ್ನೀಷಿಯಂ, ಕ್ಯಾಲ್ಸಿಯಂ ನಮ್ಮ ಹೃದಯಕ್ಕೆ ಹಲವಾರು ಆರೋಗ್ಯ ಪ್ರಯೋಜನಗಳನ್ನು ಒದಗಿಸುವುದರ ಜೊತೆಗೆ ರಕ್ತದ ಒತ್ತಡವನ್ನು ನಿರ್ವಹಣೆ ಮಾಡುತ್ತವೆ. ಆಂಟಿ ಆಕ್ಸಿಡೆಂಟ್ ಅಂಶಗಳನ್ನು ಒಳಗೊಂಡಿರುವ ಕಪ್ಪು ಎಳ್ಳು ನಮ್ಮ ಉರಿಯುತವನ್ನು ಕಡಿಮೆ ಮಾಡುವುದರ ಜೊತೆಗೆ ಹೃದಯದ ಆರೋಗ್ಯವನ್ನು ವೃದ್ಧಿಸುತ್ತದೆ. ನೀವು ತಯಾರಿಸುವ ಸಲಾಡ್, ಸ್ಟಿರ್ ಫ್ರೈ ಅಥವಾ ಬೇಯಿಸಿದ ಆಹಾರ ಪದಾರ್ಥಗಳಲ್ಲಿ ಹೆಚ್ಚು ಪೌಷ್ಟಿಕಾಂಶಕ್ಕಾಗಿ ಕಪ್ಪುಎಳ್ಳು ಬಳಸಬಹುದು.

**ಕಪ್ಪು ಆಲೀವ್**

ಸಲಾಡ್ ಮತ್ತು ಪಿಜ್ಜಾ ಗಳಲ್ಲಿ ಹೆಚ್ಚಾಗಿ ಬಳಕೆ ಮಾಡುವ ಕಪ್ಪು ಆಲೀವ್ ಹೃದಯಕ್ಕೆ ತುಂಬಾ ಒಳ್ಳೆಯದು ಎಂದು ಹೇಳುತ್ತಾರೆ. ಇದು ನಮ್ಮ ರಕ್ತದಲ್ಲಿನ ಕೆಟ್ಟ ಕೊಲೆಸ್ಟ್ರಾಲನ್ನು ಕಡಿಮೆ ಮಾಡುವುದರ ಜೊತೆಗೆ ಇದರಲ್ಲಿರುವ ಆಂಟಿ ಅಂಶಗಳು ಹೃದಯದ ಭಾಗದಲ್ಲಿ ಮತ್ತು ಹೃದಯದ ಅಪಧಮನಿಗಳಲ್ಲಿ ಪ್ಲೇಕ್ ಉಂಟಾಗದಂತೆ ನೋಡಿಕೊಂಡು ಹೃದಯದ ಆರೋಗ್ಯವನ್ನು ವೃದ್ಧಿಸುತ್ತದೆ.

**ಬ್ಲಾಕ್ ಟೀ**

ಇತ್ತೀಚಿನ ದಿನಗಳಲ್ಲಿ ಜನರು ಸಾಧಾರಣ ಚಹಾ ಕುಡಿಯುವುದಕ್ಕಿಂತ ಬ್ಲಾಕ್ ಟೀ ಕುಡಿಯುವ ಆಯ್ಕೆ ಮಾಡಿಕೊಳ್ಳುತ್ತಿದ್ದಾರೆ. ಏಕೆಂದರೆ ಇದು ಹೃದಯಕ್ಕೆ ಬಹಳ ಒಳ್ಳೆಯದು ಮತ್ತು ಹೃದಯ ರಕ್ತ ನಾಳಗಳ ಕಾರ್ಯ ಚಟುವಟಿಕೆ ಯನ್ನು ಹೆಚ್ಚಿಸುತ್ತದೆ ಮತ್ತು ಕೊಲೆಸ್ಟ್ರಾಲ್ ಕಡಿಮೆ ಮಾಡುತ್ತದೆ ಎನ್ನುವ ಕಾರಣಕ್ಕೆ. ನಿಯಮಿತವಾಗಿ ಬ್ಲಾಕ್ ಟೀ ಸೇವನೆ ಮಾಡುವುದರಿಂದ ಹೃದಯದ ತೊಂದರೆ ಕಡಿಮೆ ಆಗುತ್ತದೆ ಮತ್ತು ನಮ್ಮ ದೇಹಕ್ಕೆ ನಿರ್ಜಲೀ ಕರಣ ಆಗದಂತೆ ಕೂಡ ಇದು ನೋಡಿಕೊಳ್ಳುತ್ತದೆ.

**ಕೊನೆ ಮಾತು**

ಮೇಲೆ ಹೇಳಿದ ಹಲವು ಸೂಪರ್ ಫುಡ್ಸ್ ನಮ್ಮ ಹೃದಯದ ಸಮಸ್ಯೆಯನ್ನು ನಿರ್ವಹಣೆ ಮಾಡುವುದರಲ್ಲಿ ಮತ್ತು ಹೃದಯದ ಅಪಧಮನಿಗಳಲ್ಲಿ ಪ್ಲೇಕ್ ಉಂಟಾಗುವುದನ್ನು ತಡೆಯುವುದರಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತವೆ. ಹೀಗಾಗಿ ನೀವು ಇವುಗಳನ್ನು ನಿಮ್ಮ ಆಹಾರ ಪದ್ಧತಿಯಲ್ಲಿ ಸೇರಿಸಿಕೊಳ್ಳ ಬಹುದು. ಆದರೆ ಹೊಸದಾಗಿ ನಿಮ್ಮ ಆಹಾರ ಪದ್ಧತಿಯಲ್ಲಿ ಇಂತಹ ಬದಲಾವಣೆಯನ್ನು ತಂದುಕೊಳ್ಳುವ ಮುಂಚೆ ಒಮ್ಮೆ ನಿಮ್ಮ ವೈದ್ಯರನ್ನು ಭೇಟಿ ಮಾಡಿ ಸಮಾಲೋಚಿಸಿ ಸೂಕ್ತ ಮಾಹಿತಿ ಪಡೆದುಕೊಳ್ಳಿ.



# ಮಕ್ಕಳು ಕುಡಿಯೋ ಹಾಲಿಗೆ ಇವುಗಳನ್ನು ಬೆರೆಸಿಕೊಡಿ ಅವರ ಆರೋಗ್ಯಕ್ಕೆ ತುಂಬಾ ಒಳ್ಳೆಯದು



ಪ್ರತಿದಿನ ಮಕ್ಕಳಿಗೆ ಹಾಲನ್ನು ಕುಡಿಯಲು ಕೊಡುವುದರಿಂದ ಹಲ್ಲುಗಳು ಮತ್ತು ಮೂಳೆಗಳಿಗೆ ಕ್ಯಾಲ್ಸಿಯಂ ಸಿಗುತ್ತದೆ. ಬೇರೆ ಬೇರೆ ಪೌಷ್ಟಿಕಾಂಶಗಳನ್ನು ಒಳಗೊಂಡಿರುವ ಅರಿಶಿನ, ತುಳಸಿ ಇತ್ಯಾದಿ ಆಹಾರ ಪದಾರ್ಥಗಳನ್ನು ಹಾಲಿನ ಜೊತೆ ಸೇರಿಸಿ ಕೊಡುವುದರಿಂದ ಮಕ್ಕಳ ಆರೋಗ್ಯ ವೃದ್ಧಿಯ ಜೊತೆಗೆ ಸಮಗ್ರ ದೈಹಿಕ ಬೆಳವಣಿಗೆ ಕೂಡ ಆಗುತ್ತದೆ.

ಮಕ್ಕಳು ಕುಡಿಯೋ ಹಾಲಿಗೆ ಇವುಗಳನ್ನು ಬೆರೆಸಿಕೊಡಿ, ಅವರ ಆರೋಗ್ಯಕ್ಕೆ ತುಂಬಾ ಒಳ್ಳೆಯದು

ಬೆಳೆಯುವ ಮಕ್ಕಳಿಗೆ ಪೌಷ್ಟಿಕಾಂಶ ಭರಿತ ಆಹಾರಗಳನ್ನು ನೀಡುವುದು ಸಕಲ ರೀತಿಯಲ್ಲೂ ಒಳ್ಳೆಯದು. ಯಾವುದೇ ಆಹಾರ ಅಥವಾ ಪಾನೀಯ ಆರೋಗ್ಯಕರವಾಗಿದ್ದರೆ, ಮಕ್ಕಳು ರೋಗ ರುಜಿನಗಳಿಂದ ಪಾರಾಗುತ್ತಾರೆ ಮತ್ತು ತಮ್ಮನ್ನು ತಾವು ಸೋಂಕುಗಳಿಂದ ಕಾಪಾಡಿಕೊಳ್ಳುತ್ತಾರೆ. ವಿಶೇಷವಾಗಿ ಚಳಿಗಾಲ ಹಾಗೂ ಮಳೆಗಾಲ ಬಂದಂತಹ ಸಂದರ್ಭದಲ್ಲಿ ಮಕ್ಕಳಿಗೆ ಆರೋಗ್ಯ ಕೈ ಕೊಡಬಾರದು. ಮಕ್ಕಳ ಆರೋಗ್ಯ ಕಾಪಾಡುವ ಹೊಣೆ ಪೋಷಕರದ್ದು. ಪ್ರತಿದಿನ ಒಂದು ಲೋಟ ಹಾಲನ್ನು ಮಕ್ಕಳಿಗೆ ಕುಡಿಯಲು ಕೊಡಬೇಕು. ಹಾಲಿನ ಜೊತೆ ಇನ್ನೂ ಕೆಲವು ವಿಶೇಷವಾದ ಆಹಾರ ಪದಾರ್ಥಗಳನ್ನು ಸೇರಿಸಬೇಕು. ಇದರಿಂದ ಮಗುವಿನ ಸಮಗ್ರ



ದೈಹಿಕ ಆರೋಗ್ಯ ಸುಧಾರಣೆಯಾಗುತ್ತದೆ ಮತ್ತು ಯಾವುದೇ ಬಗೆಯ ಆರೋಗ್ಯ ಸಮಸ್ಯೆಗಳು ಮಕ್ಕಳನ್ನು ಕಾಡುವುದಿಲ್ಲ. ಈ ಲೇಖನದಲ್ಲಿ ಪ್ರತಿದಿನ ಮಕ್ಕಳಿಗೆ ಕುಡಿಯಲು ಹಾಲನ್ನು ಕೊಡಬೇಕಾದ ಸಮಯದಲ್ಲಿ ಬೇರೆ ಯಾವ ಆರೋಗ್ಯಕರ ಪದಾರ್ಥಗಳನ್ನು ಸೇರಿಸಬಹುದು ಎಂಬ ಬಗ್ಗೆ ತಿಳಿಸಿಕೊಡಲಾಗಿದೆ.

**ಅರಿಶಿನ**

ರಾತ್ರಿ ಮಲಗುವ ಮುಂಚೆ ಹಾಲಿಗೆ ಅರಿಶಿನ ಹಾಕಿ ಕುಡಿಯುವುದು ನಾವೆಲ್ಲರೂ ಹಿಂದಿನಿಂದ ಅನುಸರಿಸಿಕೊಂಡು ಬಂದ ಪದ್ಧತಿ. ಮಕ್ಕಳಿಗೂ ಕೂಡ ಇದನ್ನೇ ಅಭ್ಯಾಸ ಮಾಡಬೇಕು.

ಅರಿಶಿನ ಹಾಕಿದ ಹಾಲು ಮಕ್ಕಳಿಗೆ ಇಷ್ಟವಾಗುತ್ತದೆ ಮತ್ತು ಹಾಲಿನ ರುಚಿ ಕೂಡ ಹೆಚ್ಚಿಸುತ್ತದೆ. ಬೆಳೆಯುವ ಮಕ್ಕಳಿಗೆ ಅರಿಶಿನ ಪೌಷ್ಟಿಕಾಂಶಗಳನ್ನು ಒದಗಿಸುತ್ತದೆ.

ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸುವುದರ ಜೊತೆಗೆ ಅರಿಶಿನ ಒಂದು ಆಂಟಿ ಇಂಫ್ಲಮೆಟರಿ ಮತ್ತು ಅಲರ್ಜಿ ವಿರೋಧಿಯಾಗಿದೆ. ಇದರಲ್ಲಿರುವ ಆಂಟಿ ಆಕ್ಸಿಡೆಂಟ್ ಅಂಶಗಳು ಮಕ್ಕಳ ರೋಗ ನಿರೋಧಕ ಶಕ್ತಿಗೆ ಬಲ ಕೊಡುವುದರ ಜೊತೆಗೆ ಯಾವುದೇ ತರಹದ ಸೋಂಕುಗಳು ಕಂಡು ಬರದ ಹಾಗೆ ನೋಡಿಕೊಳ್ಳುತ್ತವೆ.

ಅಸ್ತಮಾ ಹಾಗೂ ಉಸಿರಾಟ ಸಮಸ್ಯೆಯಿಂದ ಬಳಲುತ್ತಿರುವ ಮಕ್ಕಳಿಗೆ ಅರಿಶಿನ ಸಾಕಷ್ಟು ಪ್ರಯೋಜನಕಾರಿ.

**ಜೇನುತುಪ್ಪ**

ಅದ್ಭುತ ಆರೋಗ್ಯ ಪ್ರಯೋಜನಗಳನ್ನು ಒದಗಿಸುವ ಜೇನುತುಪ್ಪ, ಮಕ್ಕಳ ಹಾಲಿನಲ್ಲಿ ಬೆರೆತರೆ ಸಿಗುವ ಪೌಷ್ಟಿಕಾಂಶಗಳನ್ನು ದುಪ್ಪಟ್ಟು ಮಾಡುತ್ತದೆ. ಅನೇಕ ಶತಮಾನಗಳ ಹಿಂದಿನಿಂದ ಜನರು ಜೇನುತುಪ್ಪವನ್ನು ಸೇವನೆ ಮಾಡಿಕೊಂಡು ಬಂದಿದ್ದಾರೆ.

ಮಕ್ಕಳಿಗೆ ಹಾಲಿನಲ್ಲಿ ಜೇನುತುಪ್ಪ ಮಿಕ್ಸ್ ಮಾಡಿ ಕುಡಿಯಲು ಕೊಡುವು ದರಿಂದ ಅವರ ದೇಹದ ತಾಪಮಾನವನ್ನು ನಿರ್ವಹಣೆ ಮಾಡುವುದರ ಜೊತೆಗೆ ಆರೋಗ್ಯವನ್ನು ಕಾಪಾಡಬಹುದು. ಇದರಲ್ಲಿ ವಿಟಮಿನ್ ಹಾಗೂ ಖನಿಜಾಂಶಗಳು ಸಾಕಷ್ಟು ಪ್ರಮಾಣದಲ್ಲಿದ್ದು, ಮಳೆಗಾಲ ಹಾಗೂ ಚಳಿಗಾಲದಲ್ಲಿ ಮಕ್ಕಳು ಹುಷಾರು ತಪ್ಪುವ ಸಾಧ್ಯತೆಯಿಂದ ರಕ್ಷಣೆ ಮಾಡುತ್ತದೆ.

**ಶುಂಠಿ**

ಶುಂಠಿ ಅರಿಶಿಣ ಮತ್ತು ಏಲಕ್ಕಿ ಜೊತೆ ಚೆನ್ನಾಗಿ ಹೊಂದಿಕೊಳ್ಳುತ್ತದೆ ಎಂದು ಹೇಳಲಾಗಿದೆ. ಶುಂಠಿಯಲ್ಲಿ ಅನೇಕ ಆರೋಗ್ಯ ಪ್ರಯೋಜನಗಳು ಸಿಗುತ್ತವೆ. ಮಕ್ಕಳ ದೈಹಿಕ ಹಾಗೂ ಮಾನಸಿಕ ಆರೋಗ್ಯಕ್ಕೆ ಶುಂಠಿ ತನ್ನದೇ ಆದ ಪ್ರಭಾವ ಒದಗಿಸುತ್ತದೆ. ಮಕ್ಕಳಿಗೆ ಹಾಲನ್ನು ಕುಡಿಯಲು ಕೊಡಬೇಕಾದ ಸಂದರ್ಭದಲ್ಲಿ ಹಸಿ ಶುಂಠಿಯನ್ನು ಅಥವಾ ಶುಂಠಿ ಪೌಡರ್ ಮಿಕ್ಸ್ ಮಾಡಿ ಕೊಡುವುದು ಒಳ್ಳೆಯದು.

ಶುಂಠಿ ಮಕ್ಕಳ ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸುವುದರ ಜೊತೆಗೆ ತನ್ನ ಆಂಟಿ ಇಂಫ್ಲಮೆಟರಿ ಮತ್ತು ಆಂಟಿ ಆಕ್ಸಿಡೆಂಟ್ ಗುಣಲಕ್ಷಣಗಳಿಂದ ಮಕ್ಕಳಿಗೆ ಉಂಟಾಗುವ ನೆಗಡಿ ಶೀತ ಮತ್ತು ಕೆಮ್ಮಿನ ತೊಂದರೆಗಳನ್ನು ಹೋಗಲಾಡಿಸುತ್ತದೆ. ಮಕ್ಕಳಿಗೆ ಒಣಶುಂಠಿಯನ್ನು ಕೊಡುವ ಸಂದರ್ಭದಲ್ಲಿ ಅದು ಹೆಚ್ಚು ಮಸಾಲೆಯುಕ್ತವಾಗಿರುವುದರಿಂದ ಸ್ವಲ್ಪ ಎಚ್ಚರದಿಂದಿರಿ.


**ತುಳಸಿ ಎಲೆಗಳು**

ಹಲವಾರು ಔಷಧಿಯ ಪ್ರಯೋಜನಗಳನ್ನು ಒಳಗೊಂಡಿರುವ ತುಳಸಿ ಎಲೆಗಳನ್ನು ಹಾಲಿನಲ್ಲಿ ಮಿಕ್ಸ್ ಮಾಡಿ ಮಕ್ಕಳಿಗೆ ಕೊಡುವುದರಿಂದ ಹಾಲಿನ ಗುಣಮಟ್ಟ ಮತ್ತು ಪೌಷ್ಟಿಕಾಂಶದ ಮಟ್ಟ ಹೆಚ್ಚಾಗುತ್ತದೆ. ಕುದಿಯುತ್ತಿರುವ ಹಾಲಿಗೆ ತುಳಸಿ ಎಲೆಗಳನ್ನು ಮಿಕ್ಸ್ ಮಾಡಿ ಮಕ್ಕಳಿಗೆ ಕುಡಿಯಲು ಕೊಡಿ. ಇದು ಮಕ್ಕಳನ್ನು ಕೆಮ್ಮು, ನೆಗಡಿ ಮತ್ತು ಜ್ವರ ಸಮಸ್ಯೆಯಿಂದ ಜೊತೆಗೆ ಉಸಿರಾಟ ತೊಂದರೆಯಿಂದ ರಕ್ಷಣೆ ನೀಡುತ್ತದೆ.

**ಬಾದಾಮಿ ಪೌಡರ್**

ಬಾದಾಮಿ ಬೀಜಗಳಲ್ಲಿ ಪೌಷ್ಟಿಕಾಂಶಗಳು ಹೆಚ್ಚಾಗಿರುತ್ತವೆ. ಮತ್ತು ಮಕ್ಕಳಿಗೆ ಅವಶ್ಯಕವಾದ ಆಹಾರ ಪದಾರ್ಥ ಇದಾಗಿದೆ. ಮುಖ್ಯವಾಗಿ ಮಕ್ಕಳಿಗೆ ವಿಟಮಿನ್ ಈ ಇದರಲ್ಲಿ ಹೆಚ್ಚು ಸಿಗುತ್ತದೆ.

ಮಕ್ಕಳ ಚರ್ಮದ ಆರೋಗ್ಯಕ್ಕೆ ಬಾದಾಮಿ ಬೀಜಗಳು ಬಹಳ ಚಮತ್ಕಾರಿಯಾಗಿ ಕೆಲಸ ಮಾಡುತ್ತದೆ. ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸುವ ಜೊತೆಗೆ ಮಕ್ಕಳ ಬುದ್ಧಿವಂತಿಕೆಯನ್ನು ಕೂಡ ಅಭಿವೃದ್ಧಿಪಡಿಸುತ್ತದೆ. ಸಾಧ್ಯವಾದಷ್ಟು ಮನೆಯಲ್ಲಿ ತಯಾರು ಮಾಡಿದ ಬಾದಾಮಿ ಪೌಡರ್ ಹಾಲಿನಲ್ಲಿ ಮಿಕ್ಸ್ ಮಾಡಿ ಮಕ್ಕಳಿಗೆ ಕೊಡಿ.



# ಸಾಹಿತ್ಯ ಸಮ್ಮೇಳನ ಯಶಸ್ವಿಗೆ ಶ್ರಮಿಸಿದ್ದಕ್ಕೆ ಅಭಿನಂದನೆ



**ತಾಳಿಕೋಟೆ:** ಜಾತ್ಯತೀತ ಹಾಗು ಪಕ್ಷಾತೀತವಾಗಿ ತಾಳಿಕೋಟೆ ಪ್ರಥಮ ಸಾಹಿತ್ಯ ಕನ್ನಡ ಸಮ್ಮೇಳನ ಅರ್ಥಪೂರ್ಣವಾಗಿ ತಾಳಿಕೋಟೆ ತಾಲೂಕಿನ ಕನ್ನಡ ಅಭಿಮಾನಿಗಳು. ಸಾಹಿತಿಗಳು. ಶಿಕ್ಷಕರು. ವಿದ್ಯಾರ್ಥಿಗಳು ಹಾಗು ಕನ್ನಡಪರ ಸಂಘಟನೆಗಳು ಹಗಲಿರುಳು ಶ್ರಮಿಸಿದ ಪರಿಣಾಮ ಕನ್ನಡ ಸಾಹಿತ್ಯ ಸಮ್ಮೇಳನ ಯಶಸ್ವಿಯಾಗಲು ಕಾರಣವಾಗಿದೆ ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷ ಹಾಸಿಂಪೀರ ವಾಲಿಕಾರ ಅವರು ಹೇಳಿದರು.

ಪಟ್ಟಣದ ಶ್ರೀ ಸಂಗಮೇಶ್ವರ ಸಭಾಭವನದಲ್ಲಿ ತಾಲೂಕಾ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಜರುಗಿದ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿದ ಅವರು ಶಾಸಕ ಸಿ.ಎಸ್. ನಾಡಗೌಡ, ರಾಜುಗೌಡ ಪಾಟೀಲ, ಹಣಮಂತ ನಿರಾಣಿ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ್ದು ಶ್ಲಾಘನೀಯ. ಹಿರಿಯ ಸಾಹಿತಿ ಡಾ: ಗುರುಪಾದಪ್ಪ ಘೀವಾರಿ ಸರ್ವಾಧ್ಯಕ್ಷರಾಗಿದ್ದ ತಾಳಿಕೋಟೆ ಕನ್ನಡ ಸಾಹಿತ್ಯ ಸಮ್ಮೇಳನಕಕ್ಕೆ ಮತ್ತಷ್ಟು ಗೌರವ ಬಂದಿದೆ. ಮಾಧ್ಯಮದವರಿಗೆ ಹಾಗೂ ಸಮ್ಮೇಳನ ಯಶಸ್ವಿಗೊಳಿಸಲು ಶ್ರಮಿಸಿದ ಎಲ್ಲರಿಗೂ ಅಭಿನಂದನೆ ಸಲ್ಲಿಸಿದರು.

ತಾಳಿಕೋಟೆ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ರೇವಣಸಿದ್ದಪ್ಪ ಕೊಪ್ಪದ ಮಾತನಾಡಿ ತಾಳಿಕೋಟೆ ತಾಲೂಕಾ ಪ್ರಥಮ ಕನ್ನಡ ಸಮ್ಮೇಳನ ಯಶಸ್ವಿಗೊಳಿಸಿದ ಕೀರ್ತಿ ಸಮಸ್ತ ತಾಳಿಕೋಟೆ ತಾಲೂಕಿನ ನಾಗರಿಕರಿಗೆ ಸಲ್ಲುತ್ತದೆ. ತನು ಮನ ದನದಿಂದ ತಾವೆಲ್ಲರೂ ಸ್ಪಂದಿಸಿ ಸಮ್ಮೇಳನ ಯಶಸ್ವಿಗೊಳಿಸಿದ್ದೀರಿ ಎಂದರು.

ಅಶ್ವಿನಿ ಜೋಗೂರ ಅವರು ಮಾತನಾಡಿ ಮಹಿಳಾ ಸಂಘಟನೆಗಳು ಬೆಂಬಲ ನೀಡಿ ಹಗಲಿರಳು ಜನಸಾಮಾನ್ಯರಲ್ಲಿ ಕನ್ನಡ ಹಬ್ಬವನ್ನು ಪರಿಣಾಮಕಾರಿಯಾಗಿ ದುಡಿದು ಸಮ್ಮೇಳನ ಅರ್ಥಪೂರ್ಣವಾಗುವಂತೆ ಸಾಮೂಹಿಕ ಶ್ರಮವೇ ಕಾರಣ ಎಂದರು.

ಆರ್.ಬಿ.ದಾನಿ, ಆರ್.ಬಿ ದಮ್ಮೂರಮಠ, ಹಣಮಂತರಾಯ ಬಾಗೇವಾಡಿ, ಮಹಿಬೂಬ ಚೋರಗಸ್ತಿ, ಚನ್ನಬಸಯ್ಯಾ ಹಿರೇಮಠ, ಕಿರಣ ಪಾಟೀಲ, ಜೈಭೀಮ ಮುತ್ತಗಿ ಮಾತನಾಡಿದರು.

ಇದೇ ಸಂದರ್ಭದಲ್ಲಿ ತಾಳಿಕೋಟೆ ತಾಲೂಕಾ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಜವಾಬ್ದಾರಿಯಿಂದ ಕೆಲಸ ನಿರ್ವಹಿಸಿದ ಹಾಗೂ ದಾನಿಗಳಿಗೆ ಪರಿಷತ್ತಿನಿಂದ ಗೌರವಿಸಲಾಯಿತು. ಮುಖಂಡರುಗಳಾದ ಜಗದೀಶ ಬೀಳೆಬಾವಿ, ಡಾ ನಜೀರ ಕೋಳ್ಯಾಳ, ಆರ್.ವಿ ಜಾಲವಾದಿ, ಎಮ್.ಎ ಬಾಗೇವಾಡಿ, ಆರ್.ಬಿ ಪೋಲೀಸಪಾಟೀಲ, ಎಮ್.ಆರ್ ಕುಲಕರ್ಣಿ, ಬಿ.ಟಿ ಸಜ್ಜನ, ಆರ್.ಎಸ್ ವಾಲಿಕಾರ, ಪ್ರಕಾಶ ಪಾಟೀಲ, ಸಂಗನಗೌಡ ಪಾಟೀಲ, ಸಾತಪ್ಪ ಗೊಂಗಡಿ, ಸಾಹೇಬಗೌಡ ಬಿರಾದಾರ, ನಾಗಪ್ಪಾ ಚಿನಗುಡಿ, ಎಸ್.ವಿ ಜಾಮಗೊಂಡಿ, ರಾವುತ ಪೂಜಾರಿ, ಎಸ್.ವಿ ಬೆನಕಟ್ಟಿ, ಶ್ರೀಮತಿ ಹುನಗುಂದ, ಪಾರೂಕ ಘಟನೂರ., ಅಶೋಕ ಕಟ್ಟಿ, ಮಲ್ಲಿಕಾರ್ಜುನ ಹಿಪ್ಪರಗಿ, ಎಮ್ ಎಚ್ ಚೌಧರಿ, ಎಂ.ಎಚ್ ಹಂದ್ರಾಳ, ಜಾನಕಿ ಪತ್ತಾರ, ಸುವರ್ಣ ಗದಗಿನಮಠ ಉಪಸ್ಥಿತರಿದ್ದರು.

# ಶಾಲೆ ಅಭಿವೃದ್ಧಿಗೆ 20 ಲಕ್ಷ ರೂ. ಅನುದಾನ: ಶಾಸಕ ಬಾಲಚಂದ್ರ ಭರವಸೆ



ಗೋಕಾಕ: ಮೆಳವಂಕಿ ಗ್ರಾಮದ ಹಳೆ ವಿದ್ಯಾರ್ಥಿಗಳ ಬೇಡಿಕೆಯಂತೆ ತಮ್ಮ ಶಾಸಕರ ನಿಧಿಯಿಂದ 20ಲಕ್ಷ ರೂ ಗಳನ್ನು ನೀಡುವುದಾಗಿ ಅರಭಾವಿ ಶಾಸಕ ಮತ್ತು ಬೆಮ್ಯುಲ್ ಅಧ್ಯಕ್ಷ ಬಾಲಚಂದ್ರ ಜಾರಕಿಹೊಳಿ ಅವರು ವಾಗ್ದಾನ ಮಾಡಿದರು.

ತಾಲ್ಲೂಕಿನ ಮೆಳವಂಕಿಯಲ್ಲಿ ಇಚೆಗೆ ನಡೆದ ಸಿದ್ದಾರೂಢ ಮಠದ ಪಿ.ಎಂ.ಶ್ರೀ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಹಳೆಯ ವಿದ್ಯಾರ್ಥಿಗಳ ಸಂಘ ಉದ್ಘಾಟಿಸಿ ಮಾತನಾಡಿದ ಅವರು, ತಾವು ಕಲಿತ ಶಾಲೆಯಲ್ಲಿ ವಿದ್ಯಾರ್ಥಿಗಳ ಸಂಘವನ್ನು ಹುಟ್ಟು ಹಾಕಿರುವದಕ್ಕೆ ಅವರು ಮೆಚ್ಚುಗೆ ವ್ಯಕ್ತಪಡಿಸಿದರು.

ಮೆಳವಂಕಿಯಲ್ಲಿ ಸರ್ಕಾರಿ ಪ್ರಾಥಮಿಕ ಶಾಲೆಯ ಎಲ್ಲ ಹಳೆಯ ವಿದ್ಯಾರ್ಥಿಗಳು ಕೂಡಿಕೊಂಡು ಸಂಘವನ್ನು ಸ್ಥಾಪಿಸಿರುವ ಕಾರ್ಯವೂ ಸಹ ಗ್ರಾಮಸ್ಥರ ಪ್ರಶಂಸೆಗೆ ಪಾತ್ರವಾಗಿದೆ. ಸಮಾಜಮುಖಿ ಕಾರ್ಯಗಳು ಮತ್ತು ಶೈಕ್ಷಣಿಕ ಚಟುವಟಿಕೆಗಳು ನಿರಂತರವಾಗಿ ನಡೆಯಬೇಕು. ಇದಕ್ಕಾಗಿ ನಾನೂ ಕೂಡ ಎಲ್ಲ ರೀತಿಯ ಸಹಕಾರ ನೀಡುತ್ತೇನೆ. ಹಳೆಯ ವಿದ್ಯಾರ್ಥಿಗಳ ಸ್ಥಿರ ನಿಧಿಗಾಗಿ 10ಲಕ್ಷ ರೂ, ಡಿಜಿಟಲ್ ಗ್ರಂಥಾಲಯಕ್ಕಾಗಿ 5ಲಕ್ಷ ರೂ. ಮತ್ತು ಶೌಚಾಲಯ ನಿರ್ಮಾಣಕ್ಕೆ 5ಲಕ್ಷ ಸೇರಿ 20ಲಕ್ಷ ನೀಡುತ್ತೇನೆಂದು ಭರವಸೆ ನೀಡಿದರು.

ಶಿಕ್ಷಣವೊಂದೇ ಸಮಾಜದ ಬದಲಾವಣೆಗೆ ಪ್ರಬಲ ಅಸ್ತ್ರವಾಗಿದ್ದು, ಗ್ರಾಮೀಣ ಭಾಗದ ವಿದ್ಯಾರ್ಥಿಗಳು ತಾವು ಕಲಿತ ಶಾಲೆಗೆ, ಗ್ರಾಮಕ್ಕೆ ಉತ್ತಮ ಹೆಸರನ್ನು ತರುವಷ್ಟರ ಮಟ್ಟಿಗೆ ಸಾಧನೆ ಮಾಡಬೇಕು. ಅಂದಾಗ ಮಾತ್ರ ಹೆತ್ತವರ ಕಂಡ ಕನಸುಗಳು ನನಸಾಗಲು ಸಾಧ್ಯವಾಗುತ್ತವೆ.ಕಳೆದ 20ವರ್ಷಗಳಿಂದ ಅರಭಾವಿ ಕ್ಷೇತ್ರದಲ್ಲಿ ಶಿಕ್ಷಣ ರಂಗಕ್ಕೆ ಪ್ರಥಮ ಆದ್ಯತೆ ನೀಡುವ ಮೂಲಕ ಶಿಕ್ಷಣದ ಅಮೂಲಾಗ್ರ ಬದಲಾವಣೆಗಾಗಿ ಶ್ರಮಿಸುತ್ತಿದ್ದೇನೆ. ನಮ್ಮ ಭಾಗದ ವಿದ್ಯಾರ್ಥಿಗಳು ಶಿಕ್ಷಣದಿಂದ ವಂಚಿತರಾಗಬಾರದೆನ್ನುವ ಉದ್ದೇಶದಿಂದ ಸರ್ಕಾರಿ ಶಾಲೆಗಳನ್ನು ಅಭಿವೃದ್ಧಿಪಡಿಸಿ, ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ದೊರೆಯಲು ಎಲ್ಲ ರೀತಿಯ ಪ್ರಯತ್ನಗಳನ್ನು ಮಾಡುತ್ತಿದ್ದೇನೆ. ಗ್ರಾಮಾಂತರ ಪ್ರದೇಶದ ವಿದ್ಯಾರ್ಥಿಗಳು ನಗರ ಪ್ರದೇಶದವರಿಗೆ ಪೈಪೋಟಿ ನೀಡಬೇಕು. ವಿದ್ಯಾರ್ಥಿಗಳು ಎಲ್ಲೆಡೆ ಮಿಂಚಬೇಕು ಎಂಬ ಆಶಯ ನಮ್ಮದಾಗಿದೆ. ಈ ಮೊದಲು ಅಡಿಬಟ್ಟಿಯಿಂದ ಉದಗಟ್ಟಿತನಕ ಹೋಗುವ (ದಂಡಿನ ಮಾರ್ಗ) ರಸ್ತೆಯು ಭಯಾನಕವಾಗಿರುತ್ತಿತ್ತು. ಈ ಭಾಗದಲ್ಲೂ ಜನರು ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡುತ್ತಿರುವದರಿಂದ ಕಲಾರಕೊಪ್ಪ ಗ್ರಾಮದಲ್ಲಿ 6 ಜನರು ಪಿಎಸ್ಐಗಳಾಗಿ ಸೇವೆ ಸಲ್ಲಿಸುತ್ತಿರುವುದು ಸಮಾಜದಲ್ಲಿ ಬದಲಾವಣೆಗೆ ಸಾಕ್ಷಿಯಾಗಿದೆ ಎಂದು ಹೇಳಿದರು. ಬಳಿಕ ಶಾಸಕರು 70ಲಕ್ಷ ರೂ. ವೆಚ್ಚದಲ್ಲಿ ನೂತನವಾಗಿ ನಿರ್ಮಿಸಿರುವ ಸರ್ಕಾರಿ ಪ್ರೌಢಶಾಲೆಯ 4ಕೊಠಡಿ,25ಲಕ್ಷ ವೆಚ್ಚದಲ್ಲಿ ನಿರ್ಮಿಸಿರುವ ಪ್ರಾಥಮಿಕ ಕೃಷಿ ಪತ್ತಿನ ಸಂಘದ ನೂತನ ಕಟ್ಟಡ ಉದ್ಘಾಟಿಸಿದರು.

ಯುವ ಮುಖಂಡ ಸರ್ವೋತ್ತಮ ಜಾರಕಿಹೊಳಿ, ಜಿಲ್ಲಾ ಸಹಕಾರ ಯುನಿಯನ್ ಅಧ್ಯಕ್ಷ ಬಿ.ಡಿ.ಪಾಟೀಲ, ಪಿಕಾರ್ಡ ಬ್ಯಾಂಕ್ ನಿರ್ದೇಶಕ ಸಿದ್ದಪ್ಪ ಹಂಜಿ, ಮುಖಂಡರಾದ ಮಹಾದೇವಪ್ಪ ಪತ್ತಾರ, ಪಿಕೆಪಿ-ಎಸ್ ಅಧ್ಯಕ್ಷ ಭೀಮಶೆಪ್ಪ ಭೂಮನ್ನವರ, ಗ್ರಾ.ಪಂ. ಉಪಾಧ್ಯಕ್ಷ ಮಾರುತಿ ಕರೆಪ್ಪನ್ನವರ, ಅಡಿವೆಪ್ಪ ಓನಕಿ, ಅಲ್ಲಪ್ಪ ಕಂಕಣವಾಡಿ, ಭೀಮಶೆಪ್ಪ ಚಿಪ್ಪಲಕಟ್ಟಿ, ಬಸವರಾಜ ಹತ್ತರವಾಟ, ರಮೇಶ ಬೀರನಗಡ್ಡಿ, ಸಣ್ಣ ದೊಡ್ಡಪ್ಪ ಕರೆಪ್ಪಗೋಳ, ಸತ್ತೆಪ್ಪ ಬಬಲಿ, ಯಲ್ಲಪ್ಪ ಕಡಕೋಳ, ನಾಗಪ್ಪ ಮಂಗಿ, ಸರ್ಕಾರಿ ಪ್ರಾಥಮಿಕ ಶಾಲೆಯ ಪ್ರಧಾನ ಶಿಕ್ಷಕ ಈರಣ್ಣ ಕಡಕೋಳ, ಗ್ರಾಪಂ ಸದಸ್ಯರು, ಪಿಕೆಪಿಎಸ್ ಸದಸ್ಯರು ಇದ್ದರು.

## ಚೂರು-ಪಾರು

### ಕನ್ನಡಾಂಬೆ ವೃತ್ತ ಉದ್ಘಾಟನೆ



**ಮುದ್ದೇಬಿಹಾಳ:** ಪಟ್ಟಣದ ದಾನೇಶ್ವರಿ ಕನ್ನಡ ಪೆಟ್ರೋಲ್ ಪಂಪ್ ಹತ್ತಿರ ವಿಜಯಪುರ ರಸ್ತೆಯಲ್ಲಿ ನೂತನವಾಗಿ ನಿರ್ಮಿಸಲಾಗಿರುವ ಕನ್ನಡಾಂಬೆ ವೃತ್ತವನ್ನು ರಾಜ್ಯೋತ್ಸವದಂದು ಕರ್ನಾಟಕ ರಕ್ಷಣಾ ವೇದಿಕೆ ಯುವ ಸೇನೆ ಜಿಲ್ಲಾಧ್ಯಕ್ಷ ಮಂಜುನಾಥ ಕೊಪ್ಪ ಕರ್ನಾಟಕ ನವ ನಿರ್ಮಾಣ ಸೇನೆ ತಾಲೂಕು ಘಟಕದ ಅಧ್ಯಕ್ಷ ರಾಜೂಗೌಡ ತುಂಬಗಿ ಅವರು ಭುವನೇಶ್ವರಿ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಬಾವುಟ ಆರೋಹಣಗೊಳಿಸುವ ಮೂಲಕ ಉದ್ಘಾಟಿಸಿದರು.ಈ ಸಂದರ್ಭದಲ್ಲಿ ವಿವಿಧ ಕನ್ನಡಪರ ಸಂಘಟನೆಗಳ ಪದಾಕಾರಿಗಳಾದ ಗಂಗಾಧರ ಸಾಲಿಮಠ ಸಂಗಯ್ಯ ಸಾರಂಗಮಠ, ವೀರೇಶ ಗುರುಮಠ, ಸಂಗನಗೌಡ ಪಾಟೀಲ, ಪ್ರಶಾಂತ ಕಾಳೆ, ಬಸನಗೌಡ ಪಾಟೀಲ, ಪ್ರಶಾಂತ ಚಲವಾದಿ,ಹುಸೇನ್ ಮುಲ್ಲಾ, ಪರಶುರಾಮ ಸಿಂಧೆ, ಮಹಿಬೂಬ ಹಡಲಗೇರಿ, ರುದ್ರು ಮುರಾಳ, ಸೇರಿದಂತೆ ಉಪಸ್ಥಿತರಿದ್ದರು.

### ಸಮಾಜ ಸೇವಾ ರತ್ನ ಪ್ರಶಸ್ತಿ ಪ್ರದಾನ



**ಮುದ್ದೇಬಿಹಾಳ. ಸಮಾಜ ಸೇವೆ ಹಾಗೂ ರಾಜಕೀಯ ರಂಗದಲ್ಲಿ ತೊಡಗಿಸಿಕೊಂಡಿರುವ ವೀರಶೈವ ಲಿಂಗಾಯಿತ ಸಂಘಟನಾ ವೇದಿಕೆಯ ಕಿತ್ತೂರು ಕರ್ನಾಟಕ ಭಾಗದ ಅಧ್ಯಕ್ಷ ಕಾಶಿಬಾಯಿ ರಾಂಪುರ್ ಅವರಿಗೆ ಮಿಣಜಗಿ ಗುರುಪಾದೇಶ್ವರ ಸೇವಾ ಸಮಿತಿಯ ರಾಜ್ಯಮಟ್ಟದ ಸೇವಾರತ್ನ ಪ್ರಶಸ್ತಿ ಪ್ರಧಾನ ಮಾಡಲಾಗಿದೆ.ತಾಲೂಕಿನ ಮಿಣಜಗಿ ಗ್ರಾಮದಲ್ಲಿ ಗುರುಪಾದೇಶ್ವರ ಸ್ವಾಮಿಗಳ ಸಮ್ಮುಖದಲ್ಲಿ ನಡೆದ ಕಾರ್ಯಕ್ರಮದಲ್ಲಿ ಸೇವಾ ಸಮಿತಿಯ ಅಧ್ಯಕ್ಷ ಡಾ. ಸೋಮಶೇಖರಯ್ಯ ಹಿರೇಮಠ ಸೇರಿದಂತೆ ಗಣ್ಯರು ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಿದರು.**



ಯರಗಟ್ಟಿ: ಭಾರತೀಯ ಸೇನೆಯಲ್ಲಿ 17 ವರ್ಷಗಳ ಸೇವೆ ನಂತರ ನಿವೃತ್ತರಾಗಿ ಗ್ರಾಮಕ್ಕೆ ಮರಳಿದ ಬೂದಿಗೊಪ್ಪ ಗ್ರಾಮದ ಪಕ್ಕೆಪ್ಪ ಯರಗಣವಿ ಅವರನ್ನು ಪಟ್ಟಣದ ಮಾಜಿ ಸೈನಿಕರ ಸಮನ್ವಯ ಸಮಿತಿಯಿಂದ ಸಂಗೋಳ್ಳಿ ರಾಯಣ್ಣ ವೃತ್ತದಲ್ಲಿ ಅದ್ದೂರಿಯಾಗಿ ಸ್ವಾಗತಿಸಿದರು.ಈ ವೇಳೆ ಅಧ್ಯಕ್ಷ ಕುಮಾರ ಹಿರೇಮಠ, ಎನ್.ಆರ್.ಮೆಟಗುಡ್ಡ, ಎಸ್.ಎಸ್.ಬಾಳಿಕಾಯಿ, ಬಸಪ್ಪ ಮಲ್ಲಾಪುರ, ಫಕೀರಪ್ಪ ಬಾಗಿಲದ, ಬಸವರಾಜ ಪಟ್ಟಣಶೆಟ್ಟಿ, ಯಲ್ಲಪ್ಪ ಬಡೆನ್ನವರ, ಬೀರಪ್ಪ ಚಿಲಮೂರ ಇತರರಿದ್ದರು.

# ಪ್ರಾಣಿ ಸಂಗ್ರಾಹಲಯಕ್ಕೆ ಸಂಸದೆ ಪ್ರಿಯಂಕಾ ಜಾರಕಿಹೊಳಿ ಭೇಟಿ

## ಪ್ರಾಣಿಗಳ ಪಾಲನೆ,ಪೋಷಣೆ, ಸಂಗ್ರಾಹಲಯದ ಅಭಿವೃದ್ಧಿ ಕುರಿತು ಅಧಿಕಾರಿಗಳ ಜತೆ ಚರ್ಚೆ



**ಬೆಳಗಾವಿ:** ತಾಲೂಕಿನ ಭೂತ ರಾಮನ ಹಟ್ಟಿಯ ಕಿತ್ತೂರು ರಾಣಿ ಚನ್ನಮ್ಮ ಮಿನಿ ಪ್ರಾಣಿ ಸಂಗ್ರಹಾಲಯಕ್ಕೆ ಸಂಸದೆ ಪ್ರಿಯಂಕಾ ಜಾರಕಿಹೊಳಿ ಅವರು ಭೇಟಿ ನೀಡಿ, ಪ್ರಾಣಿಗಳನ್ನು ವೀಕ್ಷಿಸಿ, ಪರಿಶೀಲನೆ ನಡೆಸಿದರು.

ಬಳಿಕ, ಪ್ರಾಣಿಗಳ ಪಾಲನೆ- ಪೋಷಣೆ ಹಾಗೂ ಸಂಗ್ರಾಹಲಯದ ಅಭಿವೃದ್ಧಿ ಕುರಿತು ಅಧಿಕಾರಿಗಳೊಂದಿಗೆ ಚರ್ಚಿಸಿದರು.ಆರಂಭವಾದಿಂದ ಇಲ್ಲಿವರೆಗೂ ಕ್ಷೇತ್ರದ ಶಾಸಕರ ಪ್ರಯತ್ನದಿಂದ ಪ್ರಾಣಿ ಸಂಗ್ರಾಹಲಯ ಬಹಳಷ್ಟು ಅಭಿವೃದ್ಧಿಯಾಗಿದೆ. ಸದ್ಯ ಕರಡಿ, ನವಿಲು, ಜಿಂಕೆ, ಆಮೆ, ಕೃಷ್ಣಮೃಗ, ಹುಲಿ, ಸಿಂಹ ಸೇರಿದಂತೆ ಕೆಲ ಪ್ರಾಣಿ-ಪಕ್ಷಿಗಳು ಇವೆ. ಇನ್ನಷ್ಟು ಪ್ರಾಣಿಗಳನ್ನು ಹೆಚ್ಚಿಸಲು ಕೇಂದ್ರ-ರಾಜ್ಯ ಸರ್ಕಾರ ಅನುಮತಿ ಪಡೆದು ಮೃಗಾಲಯ ಇನ್ನಷ್ಟೂ ಬದಲಾವಣೆ ಮಾಡಲಾಗುವುದು ಎಂದು ಭೂತರಾಮನಟ್ಟಿ ವಯಲ ಅರಣ್ಯ ಅಧಿಕಾರಿ ಪವನ ಕರನಿಂಗ ಅವರು ಸಂಸದೆ ಪ್ರಿಯಂಕಾ ಜಾರಕಿಹೊಳಿ ಅವರಿಗೆ ತಿಳಿಸಿದರು.

ಸತೀಶ ಜಾರಕಿಹೊಳಿ ಅವರು ಅರಣ್ಯ ಇಲಾಖೆ ಸಚಿವರಾಗಿದ್ದಾಗ ಪ್ರಾಣಿ ಸಂಗ್ರಾಹಲಯಕ್ಕೆ ಬಹಳಷ್ಟು ಒತ್ತು ನೀಡಿದ್ದರು, ಅವರ, ಬಳಿಕ ಯಾವುದೇ ಸಚಿವರು ಇಲ್ಲಿನ ಉತ್ತೇಜನಕ್ಕೆ ಕ್ರಮ ಕೈಗೊಂಡಿಲ್ಲ. ಮತ್ತೆ ಇಲ್ಲಿನ ಅಭಿವೃದ್ಧಿಗಾಗಿ ಜಿಲ್ಲಾ ಸಚಿವರು ಕ್ಯಾಂಟಿನ್ , ಊಟ ವ್ಯವಸ್ಥೆ ಕಲ್ಪಿಸಲು ಮುಂದಾಗಿದ್ದಾರೆ. ಕಾಮಗಾರಿಯೂ ಕೂಡ ಪ್ರಗತಿಯಲ್ಲಿದೆ ಎಂದು ಹೇಳಿದರು.

ವರ್ಷವಿಡಿ ಲಕ್ಷಾಂತರ ಪ್ರಾಣಿ ಪ್ರಿಯರು ಆಗಮಿಸುತ್ತಾರೆ. ಶನಿವಾರ-ಭಾನುವಾರ ಹಾಗೂ ರಜೆ ದಿನಗಳಲ್ಲಿ ದಿನಕ್ಕೆ 3 ಸಾವಿರ ಜನರು ಪ್ರಾಣಿಗಳನ್ನು ವಿಕ್ಷೀಸಲು ಆಗಮಿಸುತ್ತಿದ್ದಾರೆ. ಪ್ರತಿ ವರ್ಷ ಇಲ್ಲಿಗೆ ಸರಾಸರಿ 2.5 ಲಕ್ಷಕ್ಕೂ ಅಧಿಕ ಜನರು ಭೇಟಿ ನೀಡುತ್ತಿದ್ದು, ವೀಕ್ಷಕರಿಂದ ಲಕ್ಷಾಂತರ ಹಣ ಸಂಗ್ರಹಿಸಲಾಗುತ್ತಿದೆ. ಮಕ್ಕಳು ಸುರಕ್ಷತೆಗಾಗಿ ಸಿಸಿ ಕ್ಯಾಮರಾಗಳನ್ನು ಅಳವಡಿಸುವ ಪ್ರಯತ್ನ ಮಾಡಲಾಗುವುದು. ಪ್ರವಾಸಿಗರಿಗೆ ಮೂಲಸೌಲಭ್ಯ ಒದಗಿಸಲು ಪ್ರವಾಸೋದ್ಯಮ ಇಲಾಖೆಯನ್ನು ಕೋರಲಾಗಿದೆ ಎಂದು ಮಾಹಿತಿ ನೀಡಿದರು.

ಸಂಸದೆ ಪ್ರಿಯಂಕಾ ಜಾರಕಿಹೊಳಿ ಅವರು ಮಾತನಾಡಿ, ಬೇಸಿಗೆಯ ರಜೆಗೆ ಆಗಮಿಸುವ ಪುಟ್ಟ ಮಕ್ಕಳನ್ನು ಆಕರ್ಷಿಸುವಲ್ಲಿ ವಿನೂತನ ಆಟಿಕೆ ಸಾಮಗ್ರಿಗಳನ್ನು ಅಳವಡಿಸಿ, ವೀಕ್ಷಣೆಗೆ ಆಗಮಿಸಿದ ಪ್ರವಾಸಿಗರಿಗೆ ಯಾವುದೇ ತೊಂದರೆ ಆಗದಂತೆ ಅವಕಾಶ ಕಲ್ಪಿಸಿ, ಪ್ರಾಣಿ ಸಂಗ್ರಾಹಲಯ ಅಭಿವೃದ್ಧಿಯಾಗಲಿ ಅದಕ್ಕೆ ಬೇಕಾದ ಅಗತ್ಯ ಕ್ರಮಗೊಳ್ಳಲಾಗುವುದು ಎಂದು ಹೇಳಿದರು.

ರಾಷ್ಟ್ರೀಯ ಹೆದ್ದಾರಿ ಮರು ನಿರ್ಮಾಣದಿಂದ ಪ್ರಾಣಿ ಸಂಗ್ರಾಹಲಯಕ್ಕೆ ಆಗಮಿಸಲು ಪ್ರವಾಸಿಗರಿಗೆ ತೊಂದರೆ ಆಗುತ್ತಿದೆ ಎಂದು ಅಧಿಕಾರಿಗಳು ತಿಳಿಸಿದರು, ಸಂಸದೆ ಪ್ರಿಯಂಕಾ ಜಾರಕಿಹೊಳಿ ಅವರು ಸ್ಥಳದಲ್ಲಿ ಫೋನ್ ಮೂಲಕ ಅಧಿಕಾರಿ ಎಸಿಗೆ ರಾಷ್ಟ್ರೀಯ ಹೆದ್ದಾರಿ ಅಂಡರ್ ಪಾಸ್ ಕಾಮಗಾರಿ ಕೈಗೊಳ್ಳುವಂತೆ ತಾಕೀತು ಮಾಡಿದರು. ಪ್ರಾಣಿ ಸಂಗ್ರಾಹಲಯ ಅಭಿವೃದ್ಧಿ, ಪ್ರಾಣಿಗಳ ನಿರ್ವಹಣೆ, ಪ್ರವಾಸಿಗರ ಸುಸಜ್ಜಿತವಾದ ಆಸನ, ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಕಂಡು ಸಂಸದೆ ಪ್ರಿಯಂಕಾ ಜಾರಕಿಹೊಳಿ ಅವರು ಅಧಿಕಾರಿಗಳ ಕಾರ್ಯಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು.

ಭೂತರಾಮನಟ್ಟಿ ವಯಲ ಅರಣ್ಯ ಅಧಿಕಾರಿ ಪವನ ಕರನಿಂಗ, ಉಪವಲಯ ಅಧಿಕಾರಿ ಜಿಎಚ್ ಕುದರಿ, ಡಾ. ನಾಗೇಶ ಹೂಯಿಲಗೊಳ್ಳ, ಸಹಾಯಕ ಇಂಜಿನಿಯರಿಂಗ್ ಅಡಿವೇಪ್ಪಾ ನಾಸಿಪುಡಿ, ಮೃಗಾಲಯ ಶಿಕ್ಷಣ ಅಧಿಕಾರ ಪ್ರಜ್ವಲ ಕುಲಕರ್ಣಿ ಹಾಗೂ ಇತರರಿದ್ದರು.

## ಸಾಂಬ್ರಾ ವಿಮಾನ ನಿಲ್ದಾಣ ಪರಿಶೀಲನೆ

**ಬೆಳಗಾವಿ:** ಇಲ್ಲಿನ ಸಾಂಬ್ರಾ ವಿಮಾನ ನಿಲ್ದಾಣಕ್ಕೆ ಸಂಸದೆ ಪ್ರಿಯಂಕಾ ಜಾರಕಿಹೊಳಿ ಅವರು ಭೇಟಿ ನೀಡಿ, ವಿಮಾನ ನಿಲ್ದಾಣ ವಿಕ್ಷೀಸಿ, ನೂತನ ನಿರ್ಮಾಣವಾಗುತ್ತಿರುವ ಟರ್ಮಿನಲ್ ಅಭಿವೃದ್ಧಿ ಕಾಮಗಾರಿಗಳ ಕುರಿತು ಅಧಿಕಾರಿಗಳೊಂದಿಗೆ ಚರ್ಚೆ ನಡೆಸಿದರು.

ಟರ್ಮಿನಲ್ ಕಟ್ಟಡ, ರನ್‌ವೇ, ಟ್ಯಾಕ್ಸಿ ವೇ, ಬ್ಯಾಗೇಜ್ ಹ್ಯಾಂಡಲಿಂಗ್ ವ್ಯವಸ್ಥೆ, ಸೆಕ್ಯುರಿಟಿ ಸ್ಕ್ಯಾನರ್ ಸೇರಿದಂತೆ ವಿವಿಧ ಕಾಮಗಾರಿಗಳ ಪರಿಶೀಲನೆ ನಡೆಸಿ, ಭದ್ರತಾ ಉಪಕರಣಗಳೂ ಸೇರಿದಂತೆ ಬಾಕಿ ಕಾಮಗಾರಿಗಳ ಕುರಿತು ಅಧಿಕಾರಿಗಳಿಂದ ಮಾಹಿತಿ ಪಡೆದುಕೊಂಡರು.

ಅಂತರಾಷ್ಟ್ರೀಯ ಮಟ್ಟಕ್ಕೆ ವಿಮಾನ ನಿಲ್ದಾಣಮೇಲ್ದರ್ಜೆಗೆ ಏರಿಸುವ ಕಾಮಗಾರಿ ಕುರಿತು ಸುದೀರ್ಘ ಚರ್ಚೆ ನಡೆಸಿದ ಸಂಸದೆ ಪ್ರಿಯಂಕಾ ಜಾರಕಿಹೊಳಿ ಅವರು, ಹಾಗೂ ಸ್ಥಗಿತಗೊಂಡ ವಿಮಾನ ಮರು ಆರಂಭಿಸಲು ಅಧಿಕಾರಿಗಳಿಗೆ ಸೂಚಿಸಿದರು. ರಾಜ್ಯದ ವಿವಿಧ ಜಿಲ್ಲೆಗಳಿಗೆ ಬೆಳಗಾವಿಯಿಂದ ಸಂಪರ್ಕ ಕಲ್ಪಿಸುವಂತೆ ಅಗತ್ಯ ಕ್ರಮ ಕೈಗೊಳ್ಳಬೇಕು ಎನ್ನುತ್ತ, ಇದರಿಂದ ಬೆಳಗಾವಿ ಅಭಿವೃದ್ಧಿ ಉದ್ಯಮಿ, ಕೈಗಾರಿಕಾ ಅನುಕೂಲವಾಗಲಿದೆ ಎಂದು ತಿಳಿಸಿದ ಅವರು, ನಿಲಜಿಯಿಂದ ಸಾಂಬ್ರಾವರೆಗೂ ಶೀಘ್ರವೇ ರಸ್ತೆ ಕಾಮಗಾರಿ ಆರಂಭಿಸಿ ಜನರಿಗೆ ಸುಗಮ ಸಂಚಾರಕ್ಕೆ ಅನೂಕೂಲ ಮಾಡಿಕೊಂಡುವಂತೆ ಸೂಚಿಸಿದರು.

ಇದೇ ವೇಳೆ ಸಂಸದೆ ಪ್ರಿಯಂಕಾ ಅವರಿಗೆ ಮಾಹಿತಿ ನೀಡಿದ ವಿಮಾನ ನಿಲ್ದಾಣದ ನಿರ್ದೇಶಕ ಎಸ್ ತ್ಯಾಗರಾಜನ್ ಅವರು, ನೆರೆಯ ಮಹಾರಾಷ್ಟ್ರ ಮತ್ತು ಗೋವಾದೊಂದಿಗೆ ಗಡಿ ಹಂಚಿಕೊಂಡಿರುವ ಬೆಳಗಾವಿ ಮೂರು ರಾಜ್ಯಗಳಿಗೆ ಕೇಂದ್ರಸ್ಥಾನವಾಗಿದೆ. 357 ಕೋಟಿ ರೂ. ವೆಚ್ಚದ ಹೊಸ ಟರ್ಮಿನಲ್ ನಿರ್ಮಾಣದಿಂದ ಸಂಪರ್ಕ ವ್ಯವಸ್ಥೆ ಸುಧಾರಿಸಲಿದೆ. ಬೆಳಗಾವಿ ಪ್ರಗತಿ ಹೊಂದಲು ಅನೂಕುಲವಾಗಲಿದೆ. ವಿಮಾನ ನಿಲ್ದಾಣ ಮೇಲ್ದರ್ಜೆಗೇರಿಸುವುದನ್ನು ಒಳಗೊಂಡಂತೆ ಎಲ್ಲ ಭೌತಿಕ ಕಾಮಗಾರಿಗಳು ಕಾರ್ಯರಂಭದಲ್ಲಿವೆ. ಶೀಘ್ರವೇ ಎಲ್ಲ ಕಾಮಗಾರಿಗಳು ಮುಗಿದು ವಿಮಾನಗಳ ಹಾರಾಟ ನಡೆಯಲಿದೆ ಎಂದು ತಿಳಿಸಿದರು.

ನಿಲ್ದಾಣ ಕಾರ್ಯಾರಂಭ ಮಾಡಿದ ನಂತರ ಈ ಭಾಗದ ಸರ್ವಾಂಗೀಣ ಬೆಳವಣಿಗೆಗೆ ಅನುಕೂಲವಾಗಲಿದೆ. ಕೃಷಿ ಉತ್ಪನ್ನಗಳ ರಫ್ತಿಗೂ ಅನುಕೂಲವಾಗಲಿದೆ. ವ್ಯಾಪಾರ ವಹಿವಾಟಿಗೂ ಉತ್ತೇಜನ ದೊರೆಯಲಿದ್ದು, ಜಿಲ್ಲೆಯ ಪ್ರವಾಸೋದ್ಯಮ ಕ್ಷೇತ್ರದ ಬೆಳವಣಿಗೆ ಸಹಕಾರಿಯಾಗಲಿದೆ ಎಂದು ಸಂಸದೆ ಪ್ರಿಯಂಕಾ ಜಾರಕಿಹೊಳಿ ಅವರಿಗೆ ವಿಮಾನ ನಿಲ್ದಾಣದ ನಿರ್ದೇಶಕ ಎಸ್ ತ್ಯಾಗರಾಜನ್ ಹೇಳಿದರು.

ಮೂರು ರಾಜ್ಯಗಳಿಗೆ ಕೇಂದ್ರಸ್ಥಾನವಾಗಿರುವ ವಿಮಾನ ನಿಲ್ದಾಣಕ್ಕೆ ಮುಂದಿನ ದಿನಗಳಲ್ಲಿ ಹೆಚ್ಚಿನ ವಿಮಾನ ಹಾರಾಟ ನಡೆಯಲಿದೆ, ಹೀಗಾಗಿ ಕಾರ್ ಪಾರ್ಕಿಂಗ್ ನಗರ, ಸಂಖ್ಯೆ ಆದಾರದ ಮೇಲೆ ಮಾಸ್ಟರ್ ಪ್ಲ್ಯಾನ್ ಈಗಾಗಲೇ ಹಾಕಲಾಗಿದೆ. ಅದಕ್ಕಾಗಿ, ಸ್ಥಳ ನಿಗದಿ ಪಡಿಸಲಾಗಿದೆ ಎಂದು ವಿಮಾನ ನಿಲ್ದಾಣದ ನಿರ್ದೇಶಕ ಎಸ್ ತ್ಯಾಗರಾಜನ್ ಹೇಳಿದರು.

ವಿಮಾನ ನಿಲ್ದಾಣದ ನಿರ್ದೇಶಕ ಎಸ್ ತ್ಯಾಗರಾಜನ್ , ಡಿಜಿಎಂ, ಸಿಎನ್ ಎಸ್ ಪ್ರತಾಪ್ ರಾವ್ ದೇಸಾಯಿ, ಪೊಲೀಸ್ ಅಧಿಕಾರಿ ಬಾಬು ಚೌಗಲಾ, ಶ್ರವಣ್ಣನ ಡಿಜಿಎಂ ಸಿವಿಲ್ , ಮಾನ್ಯೇಜರ್ ಸುದೀಶ ರಾಗಲ್ , ಮಾನ್ಯೇಜರ್ ಮೋಹನಿ ಶಂಕರ್, ಸೀನಿಯರ್



### ದುರಗಪ್ಪ ಮಲಮೇತ್ರಿ ನಿಧನ



**ಯರಗಟ್ಟಿ:** ಹೊಸೂರ ಗ್ರಾಮದ ಸಾರಿಗೆ ಇಲಾಖೆಯ ನೌಕರದಾರ ದುರಗಪ್ಪ ದೇಮಪ್ಪ ಮಲಮೇತ್ರಿ (58) ನಿಧನರಾದರು. ಮೃತರು 29 ವರ್ಷ ಸಂಕೇಶ್ವರ ಡಿಪೋದಲ್ಲಿ ಪ್ರಸ್ತುತ ಬೈಲಹೊಂಗಲ ವಾಯುವ್ಯ ಸಾರಿಗೆ ಇಲಾಖೆಯಲ್ಲಿ ಕಂಡಕ್ಟರ್ ಆಗಿ ಸೇವೆ ಸಲ್ಲಿಸುತಿದ್ದರು. ಮೃತರಿಗೆ ಪತ್ನಿ ,ಓರ್ವ ಮಗ, ಮಗಳು ಇದ್ದಾರೆ.



**ಬೆಳಗಾವಿ : ವಿಧಾನ ಪರಿಷತ್ ಸದಸ್ಯ ಚನ್ನರಾಜ ಹಟ್ಟಿಹೊಳಿ ಅವರು ರಾಮದುರ್ಗ ತಾಲೂಕಿನ ಇಡಗಲ್ ಗ್ರಾಮದ ಶ್ರೀ ಮೈಲಾರಲಿಂಗೇಶ್ವರ (ಪಡಿಯಪ್ಪ) ದೇವಸ್ಥಾನ ಮಹಾದ್ವಾರ ನಿರ್ಮಾಣದ ಸಲುವಾಗಿ ವೈಯಕ್ತಿಕವಾಗಿ ದೇಣಿಗೆ ನೀಡಿದ್ದಾರೆ. ದೇಣಿಗೆ ಸ್ವೀಕರಿಸಿರುವ ದೇವಸ್ಥಾನದ ಟ್ರಸ್ಟ್ ಕಮೀಟಿಯವರು ಭಾನುವಾರ ಚನ್ನರಾಜ ಅವರ ಮನೆಗೆ ಆಗಮಿಸಿ, ಕೃತಜ್ಞತೆ ಸಲ್ಲಿಸಿ, ಸನ್ಮಾನಿಸಿದರು.**

# ಸತ್ಯ, ಸರಳ ಜೀವನ ನಡೆಸುವ ಮಾಳಿ ಸಮಾಜ



**ಗೋಕಾಕ:** ಶಾಂತ ಸ್ವಭಾವ ಗುಣ ಹೊಂದಿ ಕೊಟ್ಟ ಮಾತಿನಂತೆ ನಡೆದುಕೊಂಡು ಹಣದ ಆಸೆ ಬಿಟ್ಟು ಬೇರೆಯವರಿಗೆ ಮೋಸ ವಂಚನೆ ಮಾಡದೆ ಎಲ್ಲರೂ ನಮ್ಮವರು ಅಂಥ ತಿಳಿದುಕೊಂಡು ಸರಳ ಜೀವನ ನಡೆಸಿ ಬೇರೆಯವರಿಗೆ ಮಾದರಿಯಾಗಿ ಪ್ರೀತಿಯಿಂದ ಜೀವನ ಸಾಗಿಸುವ ಏಕೈಕ ಸಮಾಜ ಮಾಳಿ, ಮಾಲಗಾರ ಸಮಾಜ ಬಾಂದವರೆಂದು ಅಂಬಾ ಪೀಠದ ನಾರಾಯಣ ಶರಣರು ಹೇಳಿದರು.

ಅವರು, ಇಲ್ಲಿಯ ಹೆಗ್ಗಣ್ಣವರ ಭವನದಲ್ಲಿ ನಡೆದ ಮಾಳಿ, ಮಾಲಗಾರ ಸಮಾಜದ ಸಾಧಕರ ಸತ್ಕಾರ ಸಮಾರಂಭದ ದಿವ್ಯ ಸಾನಿಧ್ಯ ವಹಿಸಿ ಮಾತನಾಡಿ, ಸಾವಿತ್ರಿ ಬಾಯಿ ಫುಲೆಯವರು ಇತಿಹಾಸದಲ್ಲಿ ಹೆಸರು ಉಳಿಸಿಕೊಂಡ ಶ್ರೇಷ್ಠ ಸಮಾಜದವರು ಸಮಾಜ ಸಂಘಟನೆ ಮಾಡಿಕೊಂಡು ಒಗ್ಗಟ್ಟಾಗಿ ಒಬ್ಬರಿಗೊಬ್ಬರು ಬೆಸೆದುಕೊಂಡು ಸಮಾಜದಲ್ಲಿ ರಾಜಕೀಯವಾಗಿ ಮುಂಬರುವ ದಿನಗಳಲ್ಲಿ ವಿಧಾನ ಸೌಧದಲ್ಲಿ ಸ್ಥಾನ ಪಡೆದು ಸಮಾಜವು ಉತ್ತರೋತ್ತರ ಬೆಳೆಯಿಲೆಂದು ಆಶೀರ್ವದಿಸಿದರು.

ಅಧ್ಯಕ್ಷರಾದ ಅಶೋಕ ಹೆಗ್ಗನ್ನವರ ಮಾತನಾಡಿ, ಸಮಾಜದಲ್ಲಿ ಉನ್ನತ ಮಟ್ಟಕ್ಕೆ ಬೆಳೆಯಬೇಕಾದರೆ ಸಮಾಜದ ಏಳ್ಗೆಗಾಗಿ ಶ್ರಮ ಪಟ್ಟರೆ ಮಾತ್ರ ಹೆಮ್ಮರವಾಗಿ ಬೆಳೆಯಲು ಸಾಧ್ಯ. ಜನರ ಪ್ರೀತಿಗೆ ಪಾತ್ರರಾದರೆ ಯಶಸ್ಸು ಒಲಿದು ಬರುತ್ತದೆಂದು ಹೇಳಿದರು.

ಶಂಕರ ಕಿವಟಿ, ನೀಲಪ್ಪ ಕಿವಟಿ, ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ವಿಜೇತ ಸಮಾಜ ಸೇವಕ ಮುರಿಗೆಪ್ಪ ಮಾಲಗಾರ, ಮಾತನಾಡಿ ಸಮಾಜಕ್ಕೇ ಆದರ್ಶ ವ್ಯಕ್ತಿಗಳಾಗಿ ಸಮಾಜಕ್ಕೇ ಕೊಡುಗೆ ನೀಡಿ ಸಮಾಜ ಬಡ ಕುಟುಂಬದವರಿಗೆ ಸಹಾಯ ಸಹಕಾರ ನೀಡಿ ಒಳ್ಳೆಯ ಕೆಲಸ ಕಾರ್ಯ ಮಾಡಿದರೆ ತಕ್ಕ ಪಲ ದೊರೆತು ಒಳ್ಳೆಯ ಸ್ಥಾನ ಮಾನ ಸಿಗುತ್ತದೆ. ಸಾಧಕರನ್ನು ಗುರುತಿಸಿ ಅವರಿಗೆ ಸನ್ಮಾನ ಮಾಡುವುದು ಅತ್ಯಂತ ಶ್ರೇಷ್ಠ ಕಾರ್ಯ. ಮಕ್ಕಳಿಗೇ ಉನ್ನತ ಮಟ್ಟದ ಶಿಕ್ಷಣ ಜೊತೆಗೆ ಸಂಸ್ಕಾರ ನೀಡುವಲ್ಲಿ ತಂದೆ ತಾಯಿಗಳ ಪ್ರಮುಖ ಪಾತ್ರ ವಹಿಸಬೇಕೆಂದು ಹೇಳಿದರು.

ಸಾಧಕರಾದ, ಹಿಂದುಳಿದ ವರ್ಗಗಳ ರತ್ನ ಪ್ರಶಸ್ತಿ ವಿಜೇತ ಶಂಕರ ಪ ಕಿವಟಿ. ಕೌಜಲಗಿ ಅರ್ಬನ ಕೊ ಆಫ್ ಬ್ಯಾಂಕ ಅಧ್ಯಕ್ಷ ನೀಲಪ್ಪ ಕಿವಟಿ, ಲೆಕ್ಕಪರಿಶೋಧಕರು ಮತ್ತು ತೆರಿಗೆ ಸಲಹೆಗಾರರು ಗುರುರಾಜ ನಿಡೋಣಿ, ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ವಿಜೇತ ಪತ್ರಕರ್ತ, ಸಮಾಜ ಸೇವಕ ಮುರಿಗೆಪ್ಪ ಮಾಲಗಾರ ಅವರನ್ನು ಸತ್ಕರಿಸಿ ಗೌರವಿಸಿದರು.

ಈ ಸಮಯದಲ್ಲಿ ಸುರೇಶ ನೇಗಿನಹಾಳ, ರಾಜಶೇಖರ ಹೆಗ್ಗನ್ನವರ, ಅಡಿವೆಪ್ಪ ಶಿವಾಪೂರ. ಈರಪ್ಪ ಕಿವಟಿಸಿದ್ಧಪ್ಪ ಜಂಬಗಿ, ಮಹಾಲಿಂಗಪ್ಪ ನೇಗಿನಹಾಳ, ರಾಜು ಹೆಗ್ಗನ್ನವರ, ಭೀಮಶಿ ಮಾಳಿ, ಸುರೇಶ ಕುಂದರಗಿ, ಶಿವು ಹೆಗ್ಗನ್ನವರ, ಬಸವರಾಜ್ ಮಾಳಿ, ಪಿಡಿಓ ವಿನಾಯಕ ಮಾಳಿ, ಅಣ್ಣಪ್ಪ ಚಂಡಕಿ, ರುದ್ರಪ್ಪ ಗೋಕಾಕ, ಮಲ್ಲಪ್ಪ ಕಿವಟಿ, ಸುಧಾ ನಿಡೋಣಿ, ಅಂಜಲಿ ಹೆಗ್ಗನ್ನವರ ಸೇರಿದಂತೆ ಅನೇಕರಿದ್ದರು.

ರಮೇಶ ಕಿವಟಿ ಸ್ವಾಗತಿಸಿ. ಬಿ ಬಿ ಕಿವಟಿ ನಿರೂಪಿಸಿ. ಚಂದ್ರಶೇಖರ ನಿಂಬರಗಿ ವಂದಿಸಿದರು.

# ಮಕ್ಕಳಿಂದ ಹಸಿರು ದೀಪಾವಳಿಯ ಜಾಗೃತಿ



**ಮಹಾಲಿಂಗಪುರ:** ಸಮೀಪದ ನಂದಗಾಂವ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಲೆಯ ಸ್ಕೌಟ್ ಮಕ್ಕಳು ಪರಿಸರಸ್ನೇಹಿ ಹಸಿರು ದೀಪಾವಳಿ ಆಚರಿಸುವ ಬಗ್ಗೆ ಮನೆಮನೆಗೆ ತೆರಳಿ ಜಾಗೃತಿ ಮೂಡಿಸಿದರು.

ಗ್ರಾಮದ ಬೀದಿ ಬೀದಿಗಳಲ್ಲಿ ಜಾಥಾ ಮಾಡಿ, ಪರಿಸರ ಮಾಲಿನ್ಯ ಮಾಡುವ ಸಿಡಿಮದ್ದು, ಪಟಾಕಿ ಬದಲು ಪರಿಸರಸ್ನೇಹಿ ಹಸಿರು ಪಟಾಕಿ ಬಳಸಿ, ಕ್ಯಾಂಡಲ್ ಹಣತೆ ಬದಲು ಮಣ್ಣಿನ ಹಣತೆ, ಪ್ಲಾಸ್ಟಿಕ್ ಆಕಾಶಬುಟ್ಟಿ ಬದಲು ಕಾಗದದ ಆಕಾಶಬುಟ್ಟಿ, ರಾಸಾಯಣಿಕ ರಂಗೋಲಿ ಬದಲು ಮಾಗಿದ ಎಲೆ ಮತ್ತು ಹೂಗಳಿಂದ ತಯಾರಿಸಿದ ರಂಗೋಲಿ ಬಳಸಿ, ರಾಸಾಯಣಿಕ ಬಣ್ಣಗಳಿಂದ ತಯಾರತಿಸಿದ ಬೇಕರಿ ತಿನಿಸು ಬದಲು ಮನೆಯಲ್ಲೇ ತಯಾರಿಸಿದ ಸಿಹಿ ಖಾದ್ಯ ಬಳಸಿ ಎಂಬ ಸಂದೇಶಗಳ ಫಲಕ ಪ್ರದರ್ಶಿಸುತ್ತ, ಘೋಷಣೆ ಕೂಗುತ್ತ ಜಾಗೃತಿ ಮೂಡಿಸಿದರು.

ಭಾರತ ಸ್ಕೌಟ್, ಗೈಡ್ಸ್ ಕರ್ನಾಟಕ ರಾಜ್ಯ ಸಂಸ್ಥೆಯ ಸೂಚನೆಯಂತೆ ಸ್ಕೌಟ್ ಮಾಸ್ಟರ್ ಎಸ್.ಜಿ.ಜುಟನಟ್ಟಿ ಮಕ್ಕಳಿಗೆ ಪರಿಸರಸ್ನೇಹಿ ದೀಪಾವಳಿ ಪರಿಕರ ತಯಾರಿಸುವ ಕೌಶಲ್ಯ ತರಬೇತಿ ನೀಡಿದರು. ಮುಖ್ಯಶಿಕ್ಷಕ ವಿ.ವಿ.ಗೊಂದಿ, ಎಸ್.ಎಂ.ಕಂಬಳಿ ಮತ್ತಿತರರು ಇದ್ದರು.

## ನವೆಂಬರ್ 8 ರಂದು ಹೋಬಳಿ ಮಟ್ಟದ 13 ಗ್ರಾಮಗಳಲ್ಲಿ ಪಿಂಚಣಿ ಅದಾಲತ್

**ವಿಜಯಪುರ :** ಪಿಂಚಣಿದಾರರ ಅಹವಾಲು ಆಲಿಸಲು ಹಾಗೂ ಅರ್ಹರಿಗೆ ಪಿಂಚಣಿ ಮಂಜೂರು ಮಾಡುವ ಕುರಿತ ಸಾಮಾಜಿಕ ಭದ್ರತಾ ಯೋಜನೆಯಡಿಯ ಜಿಲ್ಲೆಯ 13 ಗ್ರಾಮಗಳಲ್ಲಿ ನವೆಂಬರ್ 8 ರಂದು ಬೆಳಿಗ್ಗೆ 11 ಗಂಟೆಗೆ ಹೋಬಳಿ ಮಟ್ಟದ ಪಿಂಚಣಿ ಅದಾಲತ್ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾಧಿಕಾರಿ ಟಿ.ಭೂಬಾಲನ್ ಅವರು ತಿಳಿಸಿದ್ದಾರೆ.

ನವೆಂಬರ 8ರ ಬೆಳಿಗ್ಗೆ 11 ಗಂಟೆಗೆ ವಿಜಯಪುರ ಉಪ ವಿಭಾಗಾಧಿಕಾರಿ ನಿಡಗುಂದಿ ತಾಲೂಕಿನ ಯಲಗೂರ ಗ್ರಾಮ ಪಂಚಾಯತ್ ಕಾರ್ಯಾಲಯದಲ್ಲಿ, ಇಂಡಿ ಉಪ ವಿಭಾಗಾಧಿಕಾರಿ ಇಂಡಿ ತಾಲೂಕಿನ ಬೂದಿಹಾಳ ಗ್ರಾಮದ ಶ್ರೀ ಹನುಮಾನ್ ದೇವಸ್ಥಾನದ ಆವರಣದಲ್ಲಿ ಪಿಂಚಣಿ ಅದಾಲತ್ ನಡೆಸಲಿದ್ದಾರೆ.

ವಿಜಯಪುರ ಗ್ರೇಡ್ 2 ತಹಶೀಲ್ದಾರ ಅವರು ವಿಜಯಪುರದ ವಾರ್ಡ್ ನಂಬರ್ 3ರ ಓಂ ಗಣಪತಿ ದೇವಸ್ಥಾನ, ಸಿಂಧೆ ಕಾಲೋನಿ ಭಾವಸಾರ ನಗರದಲ್ಲಿ, ತಿಕೋಟಾ ಗ್ರೇಡ್ 2 ತಹಶೀಲ್ದಾರ ಅವರು ಹರನಾಳದ ಶ್ರೀ ವಿಠ್ಠಲ ಮಂದಿರದಲ್ಲಿ, ಬಬಲೇಶ್ವರ ಗ್ರೇಡ್ 2 ತಹಶೀಲ್ದಾರ ಅವರು ಧನ್ಯಾಳದ ಮಳೇಸ್ವಾಮಿ ದೇವಸ್ಥಾನದಲ್ಲಿ, ಬಸವನ ಬಾಗೇವಾಡಿ ಗ್ರೇಡ್ 2 ತಹಶೀಲ್ದಾರ ಅವರು ನರಸಲಗಿಯ ಶ್ರೀ ಹನುಮಾನ್ ದೇವಸ್ಥಾನದಲ್ಲಿ ಪಿಂಚಣಿ ಅದಾಲತ್ ನಡೆಸಲಿದ್ದಾರೆ.

ಕೋಲಾರ ತಹಶೀಲ್ದಾರ ಅವರು ಚಿಕ್ಕ ಗರಸಂಗಿಯ ಶ್ರೀ ಹನುಮಾನ ದೇವಸ್ಥಾನದಲ್ಲಿ, ಮುದ್ದೇಬಿಹಾಳ ಗ್ರೇಡ್ 2 ತಹಶೀಲ್ದಾರ ಅವರು ನಾಗರಾಳದ ಶ್ರೀ ಮಾರುತೇಶ್ವರ ದೇವಸ್ಥಾನದಲ್ಲಿ, ತಾಳಿಕೋಟೆಯ ತಹಶೀಲ್ದಾರ ಅವರು ತಾಳಿಕೋಟಿ ಪಟ್ಟಣದ ವಾರ್ಡ್ ನಂಬರ್ 23ರ ಸಮುದಾಯ ಭವನ ವಡ್ಡರ ಓಣಿಯಲ್ಲಿ, ಚಡಚಣದ ಗ್ರೇಡ್ 2 ತಹಶೀಲ್ದಾರ ಅವರು ಮರಗೂರನ ಶ್ರೀ ಹನುಮಾನ್ ದೇವಸ್ಥಾನದಲ್ಲಿ, ಸಿಂದಗಿ ಗ್ರೇಡ್ 2 ತಹಶೀಲ್ದಾರ ಅವರು ಚಿಕ್ಕ ಸಿಂದಗಿಯ ಕನ್ನಡ ಗಂಡು ಮಕ್ಕಳ ಶಾಲೆಯಲ್ಲಿ ಪಿಂಚಣಿ ಅದಾಲತ್ ನಡೆಸಲಿದ್ದಾರೆ.

ದೇವರಹಿಪ್ಪರಗಿ ಗ್ರೇಡ್ 2 ತಹಶೀಲ್ದಾರ ಅವರು ನಿವಾಳಖೇಡದ ಶ್ರೀ ಬೀರಲಿಂಗೇಶ್ವರ ದೇವಸ್ಥಾನದಲ್ಲಿ, ಆಲಮೇಲ ತಹಶೀಲ್ದಾರ ಅವರು ತಾವರ ಖೇಡದ ಸರಕಾರಿ ಗಂಡು ಮಕ್ಕಳ ಶಾಲೆಯಲ್ಲಿ ಪಿಂಚಣಿ ಅದಾಲತ್ ನಡೆಸಲಿದ್ದಾರೆ.

ಪಿಂಚಣಿ ಅದಾಲತ್ ನಡೆಯುವ ಗ್ರಾಮಗಳಲ್ಲಿ ಸಾಮಾಜಿಕ ಭದ್ರತೆ ಪಿಂಚಣಿ ಫಲಾನುಭವಿಗಳಿಗೆ ಎನ್.ಪಿ.ಸಿ.ಐ. ಮ್ಯಾಪಿಂಗ್ ಕಾರ್ಯವನ್ನು ಸಂಬಂಧಿಸಿದ ಬ್ಯಾಂಕ್, ಅಂಚೆ ಕಚೇರಿ ಅಧಿಕಾರಿಗಳ ಸಹಯೋಗದೊಂದಿಗೆ ತಪ್ಪದೇ ಮಾಡಿಸುವಂತೆಯೂ ಹಾಗೂ ಪಿಂಚಣಿ ಅದಾಲತ್‌ನಲ್ಲಿ ಪಿಂಚಣಿದಾರರ ಮಾಹಿತಿಯೊಂದಿಗೆ ಎಲ್ಲಾ ಗ್ರಾಮಗಳ ಗ್ರಾಮ ಲೆಕ್ಕಿಗರು, ಪಂಚಾಯತ್ ಕಾರ್ಯದರ್ಶಿಗಳು, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಹಾಗೂ ಅಂಚೆ ಕಚೇರಿ ಸಿಬ್ಬಂದಿಗಳು ಕಡ್ಡಾಯವಾಗಿ ಹಾಜರಿರುವಂತೆ ಸೂಚಿಸಲಾಗಿದೆ ಎಂದು ಜಿಲ್ಲಾಧಿಕಾರಿಗಳ ಪ್ರಕಟಣೆ ತಿಳಿಸಿದೆ.

## ಜೀವಂತ ಪ್ರಮಾಣ ಪತ್ರ ಸಲ್ಲಿಸಲು ಸೂಚನೆ

**ವಿಜಯಪುರ :** ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಮಾಶಾಸನ ಪಡೆಯುತ್ತಿರುವವರು ನವೆಂಬರ್ ತಿಂಗಳಿನಲ್ಲಿ ಜೀವಂತ ಪ್ರಮಾಣ ಪತ್ರ ಸಲ್ಲಿಸುವಂತೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕರು ಕೋರಿದ್ದಾರೆ.

ಇಲಾಖೆಯಿಂದ ಈಗಾಗಲೇ ಮಾಶಾಸನ ಪಡೆಯುತ್ತಿರುವ, ಕಷ್ಟ ಪರಿಸ್ಥಿತಿಯಲ್ಲಿರುವ ಸಾಹಿತಿ–ಕಲಾವಿದರಿಗೆ ಹಾಗೂ ಮೃತಪಟ್ಟ ಕಲಾವಿದರ ಪತ್ನಿಗೆ ಮಾಶಾಸನ ನೀಡಲಾಗುತ್ತಿದ್ದು, ಆಧಾರ ಪ್ರತಿ, ಪಿಂಚಣಿ ಪುಸ್ತಕ ಪ್ರತಿ, ಬ್ಯಾಂಕ್ ಪಾಸ್‌ಬುಕ್ ಪ್ರತಿ, ಐಡೆಂಟಿಟಿ ಅಳತೆ ಭಾವಚಿತ್ರದೊಂದಿಗೆ ಜೀವಂತ ಪ್ರಮಾಣ ಪತ್ರವನ್ನು ನಗರದ ಸ್ಟೇಶನ್ ರಸ್ತೆಯ ಕಂದಗಲ್ ಶ್ರೀ ಹನುಮಂತರಾಯ ರಂಗಮಂದಿರದಲ್ಲಿರುವ ಸಹಾಯಕ ನಿರ್ದೇಶಕರ ಕಚೇರಿಗೆ ಖುದ್ದಾಗಿ ಸಲ್ಲಿಸುವಂತೆಯೂ,ಈ ಕುರಿತಂತೆ ಹೆಚ್ಚಿನ ಮಾಹಿತಿಗಾಗಿ ದೂರವಾಣಿ 08352–251261 ಸಂಖ್ಯೆಗೆ ಸಂಪರ್ಕಿಸಬಹುದಾಗಿದೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಉದ್ಯಮಶೀಲತಾ ಅಭಿವೃದ್ಧಿ ಕುರಿತು ತರಬೇತಿ

**ಬಾಗಲಕೋಟೆ:** : ಕರ್ನಾಟಕ ಉದ್ಯಮಶೀಲತಾಭಿವೃದ್ಧಿ ಕೇಂದ್ರ ಮತ್ತು ಜಿಲ್ಲಾ ಕೈಗಾರಿಕಾ ಕೇಂದ್ರ ಸಹಯೋಗದಲ್ಲಿ ಕೌಶಲ್ಯಾಭಿವೃದ್ಧಿ ಉದ್ಯಮಶೀಲನೆ ಮತ್ತು ಜೀವನೋಪಾಯ ಇಲಾಖೆ ಪ್ರಾಯೋಜಿಸಿದ ನಿರುದ್ಯೋಗಿ ಯುವಕ, ಯುವತಿಯರಿಗೆ ಬಾಗಲಕೋಟೆಯಲಿ 10 ದಿನಗಳ ಉದ್ಯಮಶೀಲತಾಭಿವೃದ್ಧಿ ಕಾರ್ಯಕ್ರಮವನ್ನು ನವೆಂಬರ ತಿಂಗಳಲ್ಲಿ ಆಯೋಜಿಸಲಾಗಿದೆ. ತರಬೇತಿಯಲ್ಲಿ ಸ್ವಂತ ಉದ್ಯಮ ಸ್ಥಾಪಿಸಲು ವಿಧಾನ, ಸ್ಥಾಪಿಸಬಹುದಾದ ವಿವಿಧ ಉದ್ಯಮಗಳು, ಉದ್ಯಮ ಸ್ಥಾಲಿಸಲಿಕ್ಕೆ ಇರುವ ಅವಕಾಶ, ಬ್ಯಾಂಕ್ ಮತ್ತು ಕೈಗಾರಿಕಾ ಇಲಾಖೆಯಿಂದ ಸಿಗತಕ್ಕಂತಹ ಸಹಾಯ ಸೌಲಭ್ಯ ಮಾರುಕಟ್ಟೆ ಸಮೀಕ್ಷೆ ಕುರಿತು ತರಬೇತಿಯಲ್ಲಿ ಮಾಹಿತಿ ನೀಡಲಾಗುತ್ತಿದೆ. ಆಸಕ್ತರು ನವೆಂಬರ 11 ರೊಳಗಾಗಿ ಮೊನಂ.9901914945ಗೆ ಕರೆ ಮಾಡಿ ಹೆಸರು ನೋಂದಾಯಿಸುವಂತೆ ಸಿಡಾಕ್‌ನ ಜಂಟಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಮಕ್ಕಳ ಮಾರಾಟ ಅಪರಾಧಕ್ಕೆ ಶಿಕ್ಷೆ ಮತ್ತು ದಂಡ

**ಬಾಗಲಕೋಟೆ:** : ಅಂತರರಾಷ್ಟ್ರೀಯ ದತ್ತು ಮಾಸಾಚರಣೆ–2024ರ ಅಂಗವಾಗಿ ಮಕ್ಕಳ ನಿರ್ದೇಶನಾಲಯ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಕಚೇರಿಯಿಂದ ಮಕ್ಕಳ ಮಾರಾಟ ಅಪರಾಧ, ಮಕ್ಕಳನ್ನು ಮಾರುವವರಿಗೆ ಹಾಗೂ ಕೊಳ್ಳುವವರಿಗೂ ಬಾಲನ್ಯಾಯ ಕಾಯ್ದೆ 2015 ಸೆಕ್ಷನ್ 81 ರನ್ವಯ 5 ವರ್ಷಗಳವರೆಗೂ ಸೆರೆಮನೆ ವಾಸದೊಂದಿಗೆ 1 ಲಕ್ಷ ರೂ.ಗಳವರೆಗೆ ದಂಡ ವಿಧಿಸಬಹುದು. ಈ ಅಪರಾಧದಲ್ಲಿ ಆಸ್ಪತ್ರೆಯವರು ಶಾಮೀಲಾದರೆ ಶಿಕ್ಷೆಯ ಅವಧಿ 3 ವರ್ಷಗಳಿಗೆ ಕಡಿಮೆ ಇಲ್ಲದಂತೆ 7 ವರ್ಷಗಳವರೆಗೆ ವಿಸ್ತರಣೆ ಮಾಡಲಾಗುವುದು. ಅನಾಥ ಪರಿತ್ಯೇಕ್ತ ಮತ್ತು ಒಪ್ಪಿಸಲ್ಪಟ್ಟ ಮಕ್ಕಳು ಕಂಡು ಬಂದಲ್ಲಿ ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ನವನಗರ ಬಾಗಲಕೋಟೆ ದೂಸಂ.08354–295345, ಮಕ್ಕಳ ಸಹಾಯವಾಣಿ 1098, ಸರ್ಚ ಸ್ವಯಂ ಸೇವಾ ಸಂಸ್ಥೆ, ಅಮೂಲ್ಯ ದತ್ತು ಸ್ವೀಕಾರ ಕೇಂದ್ರ, ನವನಗರ ಬಾಗಲಕೋಟೆ ಮೊ.ನಂ.9448801473ಗೆ ಸಂಪರ್ಕಿಸುವಂತೆ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ವೀಣಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸೇನಾ ಇಲಾಖೆಗೆ ಸೇರಲು ಯುವಕರು ಹೆಚ್ಚೆಚ್ಚು ಪ್ರಯತ್ನಿಸಲಿ : ಜನ್ಮಟ್ಟಿ

**ಬೈಲಹೊಂಗಲ:** ನಿವೃತ್ತ ಸೈನಿಕರು ಕ್ರಿಯಾಶೀಲತೆಯೊಂದಿಗೆ ಸಮಾಜದಲ್ಲಿ ಮಾದರಿಯಾಗಿ ಬದುಕಿ ತಮ್ಮ ಜೀವನ ಯಶಸ್ವಿಗೊಳಿಸಿಕೊಳ್ಳಬೇಕೆಂದು ಪುರಸಭೆ ಮಾಜಿ ಅಧ್ಯಕ್ಷ ಬಸವರಾಜ ಜನ್ಮಟ್ಟಿ ಹೇಳಿದರು.

ಅವರು ಪಟ್ಟಣದ ಹೊಸೂರ ರಸ್ತೆಯಲ್ಲಿನ ಸೋಶಿಯಲ್ ಕ್ಲಬ್‌ದಲ್ಲಿ ಭಾರತೀಯ ಸೇನೆಯಲ್ಲಿ 24 ವರ್ಷಗಳ ಕಾಲ ಹವಾಲ್ದಾರ ಹುದ್ದೆಯಲ್ಲಿ ಸೇವೆ ಸಲ್ಲಿಸಿ ತಾಯ್ನಾಡಿಗೆ ಆಗಮಿಸಿದ ಅರುಣ ಕಾರಗಿ ಅವರಿಗೆ ಮಾಜಿ ಸೈನಿಕರ ಸಮನ್ವಯ ಸಮೀತಿಯ ಆಶ್ರಯದಲ್ಲಿ ಸೋಮವಾರ ಹಮ್ಮಿಕೊಂಡ ಸತ್ಕಾರ ಹಾಗೂ ಅಭಿನಂದನಾ ಸಮಾರಂಭದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ರಾಷ್ಟ್ರದಲ್ಲಿ ಸೇನಾ ಇಲಾಖೆಯ ಜವಾಬ್ದಾರಿ ಅತ್ಯಂತ ಮಹತ್ವದ್ದಾಗಿದ್ದು ಕರ್ತವ್ಯ ನಿರ್ವಹಿಸುತ್ತಿರುವ ಜವಾನರು ಸವಾಲುಗಳನ್ನು ಎದುರಿಸಿ ಭಾರತ ಮಾತೆಗೆ ಕೀರ್ತಿ ತಂದು ಕರ್ತವ್ಯವನ್ನು ಸಾರ್ಥಕಪಡಿಸಿಕೊಳ್ಳಬೇಕೆಂದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ ನ್ಯಾಯವಾದಿ ಎಫ್.ಎಸ್.ಸಿದ್ದನಗೌಡರ ಮಾತನಾಡಿ, ಭಾರತ ಮಾತೆಯ ಸೇವೆಗೈಯಲು ಸೇನಾ ಇಲಾಖೆಯಲ್ಲಿ ಹಲವಾರು ಅವಕಾಶಗಳಿದ್ದು ಯುವಕರು ಹೆಚ್ಚೆಚ್ಚು ಒಲವು ತೋರಿ ದೇಶವನ್ನು ರಾಷ್ಟ್ರ ದ್ರೋಹಿಗಳಿಂದ ರಕ್ಷಿಸಲು ಸದಾ ಪ್ರಯತ್ನಿಸಿ ತಮ್ಮ ಭವಿಷ್ಯವನ್ನು ಕಂಡುಕೊಳ್ಳಬೇಕೆಂದರು. ಸೇವಾ ಅವಧಿಯ ನಿವೃತ್ತಿಯ ನಂತರ ಮಾಜಿ ಸೈನಿಕರು ಸಂಘಟಣೆಗಳಿಂದ ಸದಾ ಚೈತನ್ಯಶೀಲರಾಗಿ ಮುನ್ನೆಡೆಬೇಕೆಂದರು.



ಪುರಸಭೆ ಅಧ್ಯಕ್ಷ ವಿಜಯ ಬೋಳಣ್ಣವರ, ತಾಲೂಕಾ ಮಾಜಿ ಸೈನಿಕರ ಸಮನ್ವಯ ಸಮೀತಿಯ ಅಧ್ಯಕ್ಷ ಬಿ.ಬಿ.ಬೋಗೂರ, ಉಪಾಧ್ಯಕ್ಷ ಚಂದ್ರಶೇಖರ ನೇಸರಗಿ, ಶ್ರೀ ಸೋಮೇಶ್ವರ ಸಕ್ಕರೆ ಕಾರ್ಖಾನೆಯ ನಿರ್ದೇಶಕ ಮಹಾಂತೇಶ ಮತ್ತಿಕೊಪ್ಪ, ಮಾಜಿ ಸೈನಿಕ ಚನ್ನಪ್ಪ ಬೇವಿನಕೊಪ್ಪ, ಚನ್ನಪ್ಪ ಕಾರಗಿ, ಅನ್ನಪೂರ್ಣ ಕಾರಗಿ, ಗೀತಾ ಕಾರಗಿ, ತಮ್ಮಣ್ಣ ಕೊಳ್ಳಿ, ಬಸವಣೆಪ್ಪ ಕಾರಗಿ, ರಾಮಸಿದ್ದಪ್ಪ ಸವಸುದ್ದಿ, ಶಂಕರ ಕರಡಿಗುದ್ದಿ, ಸೋಮಲಿಂಗ ವಕ್ಕುಂದ, ಬಸಪ್ಪ ಕರಸಟ್ಟಿ, ಅಪ್ಪಯ್ಯ ಯಲಿಬಲಿ, ನಿಂಗಪ್ಪ ಅಂಬಲಿ, ಜಗದೀಶ ಸುತಗಟ್ಟಿ ಮುಂತಾದವರು ವೇದಿಕೆ ಮೇಲಿದ್ದರು. ತಾಲೂಕಾ ಮಾಜಿ ಸೈನಿಕರ ಸಮನ್ವಯ ಸಮೀತಿಯ ಸದಸ್ಯರು ಪಾಲ್ಗೊಂಡಿದ್ದರು.

ಹಾಲಚಂದ್ರ ಹಾಗೂ ರಾಮಚಂದ್ರ ಅವರು ಪ್ರಾರ್ಥಿಸಿದರು. ಶಿಕ್ಷಕ ಪ್ರಕಾಶ ನಾಯ್ಕರ ಸ್ವಾಗತಿಸಿದರು. ಸಿದ್ರಾಮಪ್ಪ ಜಾಯಿ ನಿರೂಪಿಸಿದರು. ಮೇಘಾ ಕಾರಗಿ ವಂದಿಸಿದರು. ಇದಕ್ಕೂ ಮುನ್ನ ಹವಾಲ್ದಾರ ಅರುಣ ಕಾರಗಿ ಅವರು ರಾಣಿ ಚೆನ್ನಮ್ಮ, ಕ್ರಾಂತಿವೀರ ಸಂಗೊಳ್ಳಿ ರಾಯಣ್ಣನ ಮೂರ್ತಿಗಳಿಗೆ ಮಾಲಾರ್ಪಣೆ ಗೌರವ ವಂದನೆ ಸಲ್ಲಿಸಿದರು.

ತೆರೆದ ವಾಹನದಲ್ಲಿ ಪಟ್ಟಣದ ಪ್ರಮುಖ ರಸ್ತೆಯಲ್ಲಿ ಮೆರವಣಿಗೆ ನಡೆಸಲಾಯಿತು. ತಾಲೂಕಾ ಮಾಜಿ ಸೈನಿಕರ ಸಮನ್ವಯ ಸಮೀತಿಯ ಸದಸ್ಯರು, ಗೆಳೆಯರ ಬಳಗ, ಸಂಬಂಧಿಗಳು, ಅಭಿಮಾನಿಗಳ ಬಳಗ ನಿವೃತರಾದ ಅರುಣ ಕಾರಗಿ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು. ಇದೇ ಸಂದರ್ಭದಲ್ಲಿ ಕಾರಗಿ ಕುಟುಂಬಸ್ಥರು ಹಲವಾರು ಮಾಜಿ ಸೈನಿಕರನ್ನು, ವಿವಿಧ ಕ್ಷೇತ್ರದ ಸಾಧಕರನ್ನು ಸತ್ಕರಿಸಿದರು. ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.

### ಜಿಲ್ಲಾ ವಿಪತ್ತು ನಿರ್ವಹಣೆ ಯೋಜನೆಯ ಸುಧಾರಣಾ ವಿಷಯಾಧಾರಿತ ಕಾರ್ಯಾಗಾರ

# ವಿಕೋಪ ಪರಿಸ್ಥಿತಿ ನಿರ್ವಹಣೆಗೆ ಮುಂಜಾಗ್ರತಾ ತರಬೇತಿ ಅಗತ್ಯ: ಅಪರ ಜಿಲ್ಲಾಧಿಕಾರಿ ಸೋಮಲಿಂಗ ಗೆಣ್ಣೂರು



**ವಿಜಯಪುರ,** : ಅತಿವೃಷ್ಟಿ–ಅನಾವೃಷ್ಟಿ, ಬೆಂಕಿ ಅವಘಡಗಳಂತಹ ಪ್ರಾಕೃತಿಕ ವಿಕೋಪ ಸಂಭವಿಸುವ ಪರಿಸ್ಥಿತಿಯಲ್ಲಿ ಜನ ಜಾನುವಾರುಗಳ ರಕ್ಷಣೆಗೆ ಅಗತ್ಯ ಮುಂಜಾಗ್ರತಾ ತರಬೇತಿ ಹೊಂದುವುದು ಅಗತ್ಯವಾಗಿರುತ್ತದೆ ಎಂದು ಅಪರ ಜಿಲ್ಲಾಧಿಕಾರಿ ಸೋಮಲಿಂಗ ಗೆಣ್ಣೂರು ಹೇಳಿದರು.

ಅವರು ನಗರದ ಟಕ್ಕೆ ರಸ್ತೆಯಲ್ಲಿರುವ ಜಿಲ್ಲಾ ತರಬೇತಿ ಸಂಸ್ಥೆಯ ಸಭಾ ಭವನದಲ್ಲಿ ಆಡಳಿತ ತರಬೇತಿ ಸಂಸ್ಥೆ ಮೈಸೂರು, ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರ ಹಾಗೂ ಜಿಲ್ಲಾಡಳಿತದ ಸಹಯೋಗದಲ್ಲಿ ಮಂಗಳವಾರ ನಡೆದ ಜಿಲ್ಲಾ ವಿಪತ್ತು ನಿರ್ವಹಣೆ ಯೋಜನೆಯ ಸುಧಾರಣಾ ವಿಷಯಾಧಾರಿತ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದರು.

ಅನಿರೀಕ್ಷಿತವಾಗಿ ಸಂಭವಿಸಬಹುದಾದ ಪ್ರಾಕೃತಿಕ ವಿಕೋಪಗಳನ್ನು ನಿರ್ವಹಿಸಲು, ತುರ್ತು ಪರಿಹಾರೋಪಾಯಗಳನ್ನು ಹೇಗೆ ಕಾರ್ಯರೂಪಕ್ಕೆ ತರಬಹುದು ಎಂಬುದರ ಬಗ್ಗೆ ಮುಂಚಿತವಾಗಿಯೇ ರೂಪುರೇಷೆ ಸಿದ್ಧಪಡಿಸಿಕೊಂಡಿರಬೇಕು. ವಿದ್ಯುತ್ ಅವಘಡ, ಪ್ರವಾಹದಂತಹ ಯಾವುದೇ ಪ್ರಾಕೃತಿಕ ವಿಕೋಪಗಳನ್ನು ಎದುರಿಸಲು ರಕ್ಷಣಾ ಕಾರ್ಯಾಚರಣೆಯಲ್ಲಿ ರಕ್ಷಣಾ ಸಿಬ್ಬಂದಿ ತಮ್ಮ ಪ್ರಾಣ ಪಣಕ್ಕಿಟ್ಟು ರಕ್ಷಣೆಗೆ ಮುಂದಾಗುತ್ತಾರೆ. ಈ ಸಂದರ್ಭದಲ್ಲಿ ಹಲವು ಇಲಾಖೆಗಳು ಸಮನ್ವಯ ಸಾಧಿಸಿ ಅಗತ್ಯ ಸಿದ್ಧತೆಗಳನ್ನು ಕೈಗೊಂಡು ಪರಿಹಾರಾತ್ಮಕ ಕಾರ್ಯಾಚರಣೆಗೆ ಆದ್ಯತೆ ನೀಡಬೇಕು ಎಂದರು.

ಗ್ರಾಮೀಣ, ನಗರ ಪ್ರದೇಶಗಳ ಹಳ್ಳ, ಕೊಳ್ಳ ಪ್ರಾಕೃತಿಕ ವಿಕೋಪ ಸಂಭವಿಸಬಹುದಾದಂತ ಸ್ಥಳಗಳ ಬಗ್ಗೆ ಸಮಗ್ರ ಮಾಹಿತಿ ಸಂಗ್ರಹಿಸಬೇಕು. ಜನರಿಗೆ ಪ್ರಾಕೃತಿಕ ವಿಕೋಪಗಳ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು ಎಂದರು.

ಆಡಳಿತ ತರಬೇತಿ ಸಂಸ್ಥೆ ಮೈಸೂರಿನ ಅಧಿಕಾರಿಗಳಾದ ಡಾ. ಚಂದ್ರನಾಯಕ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ವಿಕೋಪಗಳನ್ನು ತಡೆಗಟ್ಟಲಿರುವ ಯೋಜನೆಗಳನ್ನು ಅನುಷ್ಠಾನಗೊಳಿಸುವುದರ ಕುರಿತ ತರಬೇತಿ ನೀಡಲಾಗುತ್ತದೆ. ಒಟ್ಟು ಮೂರು ಹಂತದಲ್ಲಿ ತರಬೇತಿ ನೀಡಲಾಗುತ್ತಿದೆ. ಪ್ರಥಮ ಹಂತದಲ್ಲಿ ಜಿಲ್ಲಾ ಕೇಂದ್ರದಲ್ಲಿ ನಂತರ ಮೈಸೂರಿನಲ್ಲಿ ಎರಡನೇ ಹಂತದ ತರಬೇತಿಯನ್ನು ನೀಡಲಾಗುತ್ತದೆ. ಮೂರನೇಯ ಹಂತದಲ್ಲಿ ಆಯ್ದ ಅಧಿಕಾರಿಗಳ ತಂಡವನ್ನು ಬೇರೆ ರಾಜ್ಯಗಳಿಗೆ ಅಧ್ಯಯನ ಪ್ರವಾಸಕ್ಕೆ ಕರೆದೊಯ್ದು ಪ್ರಾಕೃತಿಕ ವಿಕೋಪ ನಿರ್ವಹಣೆಗೆ ಇನ್ನಷ್ಟು ಹೆಚ್ಚಿನ ತರಬೇತಿ ನೀಡಲಾಗುವುದು ಎಂದು ಹೇಳಿದರು.

ಈ ಸಂದರ್ಭದಲ್ಲಿ ಜಿಲ್ಲಾ ತರಬೇತಿ ಸಂಸ್ಥೆಯ ಪ್ರಾಂಶುಪಾಲರಾದ ಜಿ.ಎಸ್. ಹಿರೇಮಠ, ಜಿಲ್ಲಾ ಅಗ್ನಿಶಾಮಕಾಧಿಕಾರಿ ರಂಗನಾಥ, ಜಿಲ್ಲಾ ವಿಕೋಪ ನಿರ್ವಹಣಾ ಕೋಶದ ರಾಕೇಶ ಜೈನಾಪೂರ, ಕಂದಾಯ ಇಲಾಖೆ, ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಸಮಾಜಕಲ್ಯಾಣ ಇಲಾಖೆ, ನಾಗರಿಕ ರಕ್ಷಣಾ ಮತ್ತು ಗೃಹ ರಕ್ಷಕದಳ ಇಲಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಅರಣ್ಯ ಮತ್ತು ಪರಿಸರ ಇಲಾಖೆ, ಕೃಷಿ ಇಲಾಖೆ, ತೋಟಗಾರಿಕೆ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯ ಅಧಿಕಾರಿಗಳು ತರಬೇತಿ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

### ವೀರವನಿತೆ ಒನಕೆ ಓಬವ್ವ ಜಯಂತಿ; ಪೂರ್ವಭಾವಿ ಸಭೆ

# ಅರ್ಥಪೂರ್ಣ ಆಚರಣೆಗೆ ಅಪರ ಜಿಲ್ಲಾಧಿಕಾರಿ ಸೂಚನೆ



ಬೆಳಗಾವಿ : ಸರ್ಕಾರದ ಮಾರ್ಗಸೂಚಿ ಅನ್ವಯ ವೀರವನಿತೆ ಒನಕೆ ಓಬವ್ವ ಜಯಂತಿಯನ್ನು ನವೆಂಬರ್ 11 ರಂದು ಕುಮಾರ ಗಂಧರ್ವ ಕಲಾ ಮಂದಿರದಲ್ಲಿ ಅರ್ಥಪೂರ್ಣವಾಗಿ ಆಚರಣೆ ಮಾಡಲಾಗುವುದು ಎಂದು ಅಪರ ಜಿಲ್ಲಾಧಿಕಾರಿ ವಿಜಯಕುಮಾರ ಹೊನಕೇರಿ ಅವರು ತಿಳಿಸಿದರು.

ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಮಂಗಳವಾರ (ನ.05) ನಡೆದ ವೀರವನಿತೆ ಒನಕೆ ಓಬವ್ವ ಜಯಂತಿ ಆಚರಣೆಯ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ನ.11 ವೀರವನಿತೆ ಒನಕೆ ಓಬವ್ವ ಜಯಂತಿ ಕಾರ್ಯಕ್ರಮವನ್ನು ಕುಮಾರ ಗಂಧರ್ವ ಕಲಾ ಮಂದಿರದಲ್ಲಿ ಅಚ್ಚುಕಟ್ಟಾಗಿ ಆಚರಣೆ ಮಾಡಬೇಕು. ಜಯಂತಿ ಆಚರಣೆಗೆ ಅಗತ್ಯವಿರುವ ರೂಪರೇಶಗಳ ಸಿದ್ಧತೆ ಮಾಡಿಕೊಳ್ಳಬೇಕು ಎಂದು ಹೇಳಿದರು.

ಮಹಾನಗರ ಪಾಲಿಕೆ ವತಿಯಿಂದ ನಗರದ ಪ್ರಮುಖ 5 ವೃತ್ತಗಳಲ್ಲಿ ಜಯಂತಿ ಆಚರಣೆಯ ಕುರಿತು ನಾಮಫಲಕ ಹಾಗೂ ಕಾರ್ಯಕ್ರಮಕ್ಕೆ ಆಗಮಿಸುವ ಸಾರ್ವಜನಿಕರಿಗೆ ಊಟೋಪಚಾರ ವ್ಯವಸ್ಥೆ ಕಲ್ಪಿಸಬೇಕು.

ಮಹಾನಗರ ಪಾಲಿಕೆಯ ಎಸ್.ಸಿಪಿ–ಟಿಎಸ್.ಪಿ 24.01 ಅನುದಾನದಲ್ಲಿ ಇಂಜಿನೀರಿಂಗ್ ಮೆಡಿಕಲ್ ಕಾಲೇಜು ವಿದ್ಯಾರ್ಥಿಗಳಿಗೆ ಲ್ಯಾಪ್ ಟಾಪ್ ವಿತರಣೆ ಮಾಡಬೇಕು ಎಂದು ಪಾಲಿಕೆ ಅಧಿಕಾರಿಗಳಿಗೆ ಸೂಚಿಸಿದರು.

ಅತೀ ಹೆಚ್ಚು ಅಂಕ ಪಡೆದ ಶಾಲಾ ಕಾಲೇಜು ವಿದ್ಯಾರ್ಥಿನಿಯರಿಗೆ ಹಾಗೂ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಮಹಿಳಾ ಸಾಧಕರಿಗೆ ಸನ್ಮಾನ ಕಾರ್ಯಕ್ರಮ ಏರ್ಪಡಿಸಬೇಕು ಎಂದು ಅಪರ ಜಿಲ್ಲಾಧಿಕಾರಿ ವಿಜಯಕುಮಾರ ಹೊನಕೇರಿ ಹೇಳಿದರು.

ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಬಸವರಾಜ ಹೆಗ್ಗನಾಯಕ, ಮಹಾನಗರ ಪಾಲಿಕೆ ಉಪ ಆಯುಕ್ತ ಉದಯಕುಮಾರ ತಳವಾರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಉಪ ನಿರ್ದೇಶಕಿ ವಿದ್ಯಾವತಿ ಭಜಂತ್ರಿ, ಮುಖಂಡರಾದ ಮಲ್ಲೇಶ ಚೌಗಲಾ, ದುರ್ಗೇಶ ಮೇತ್ರಿ, ಮಹಾದೇವ ತಳವಾರ, ಮಲ್ಲಿಕಾರ್ಜುನ್ ರಾಶಿಂಗೆ ಸೇರಿದಂತೆ ಸಮಾಜದ ಮುಖಂಡರು ಸಭೆಯಲ್ಲಿ ಉಪಸ್ಥಿತರಿದ್ದರು.

*****

## ಫಂಡರಪುರ ಜಾತ್ರೆಗೆ ವಿಶೇಷ ಸಾರಿಗೆ ವ್ಯವಸ್ಥೆ

ವಿಜಯಪುರ, : ಮಹರಾಷ್ಟ್ರದ ಫಂಡರಪುರದಲ್ಲಿ ದಿನಾಂಕ:0 ರಿಂದ 14 ರವರೆಗೆ ನಡೆಯುವ ಕಾರ್ತಿಕ ಏಕಾದಶಿ ಜಾತ್ರೆಯ ಅಂಗವಾಗಿ ಜಿಲ್ಲೆಯ ಯಾತ್ರಾರ್ಥಿಗಳಿಗೆ ಉತ್ತಮ ಸಾರಿಗೆ ಸೌಲಭ್ಯ ಕಲ್ಪಿಸುವ ದೃಷ್ಟಿಯಿಂದ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ವಿಜಯಪುರ ವಿಭಾಗದ ವಿಜಯಪುರ, ಇಂಡಿ, ಸಿಂದಗಿ, ತಾಳಿಕೋಟೆ, ಮುದ್ದೇಬಿಹಾಳ, ಬಸವನ ಬಾಗೇವಾಡಿ ಘಟಕದ ಕೇಂದ್ರ ನಿಲ್ದಾಣದಿಂದ ವಿಶೇಷ ಸಾರಿಗೆ ಕಾರ್ಯಾಚರಣೆ ಮಾಡಲಾಗುವುದು. ಒಂದೇ ಗುಂಪಿನಿಂದ ಪ್ರಯಾಣಿಸುವ ಕನಿಷ್ಠ 55 ಜನ ಪ್ರಯಾಣಿಕರು ಲಭ್ಯವಾದಲ್ಲಿ ಅವರ ಸ್ವ–ಸ್ಥಳದಿಂದಲೇ ನೇರವಾಗಿ ಫಂಡರಾಪುರಕ್ಕೆ ಬಸ್ಸಿನ ವ್ಯವಸ್ಥೆ ಕಲ್ಪಿಸಲಾಗುವುದು.

ಪ್ರಯಾಣಿಕರು ಸಾರಿಗೆ ಸೌಲಭ್ಯ ಹಾಗೂ ಹೆಚ್ಚಿನ ಮಾಹಿತಿಗಾಗಿ ಸಹಾಯಕ ಸಂಚಾರ ವ್ಯವಸ್ಥಾಪಕರು ಕೇಂದ್ರ ಬಸ್ ನಿಲ್ದಾಣ ವಿಜಯಪುರ (ಮೊ: 7760992258), ವಿಜಯಪುರ ಘಟಕ–1ರ (7760992263), ವಿಜಯಪುರ ಘಟಕ–2ರ (7760992264), ವಿಜಯಪುರ ಘಟಕ–3ರ (7760914008), ಇಂಡಿ ಘಟಕ (7760992265), ಸಿಂದಗಿ ಘಟಕ (7760992266) ಮುದ್ದೇಬಿಹಾಳ ಘಟಕ (7760992267), ತಾಳಿಕೋಟಿ ಘಟಕ (7760992268), ಬಸವನ ಬಾಗೇವಾಡಿ (7760992269) ಕೇಂದ್ರ ಬಸ್ ನಿಲ್ದಾಣ ವಿಜಯಪುರದ ದೂರವಾಣಿ ಸಂಖ್ಯೆ (08352–251344) ಹಾಗೂ (ಮೊ.7760992258)ಕ್ಕೆ ಸಂಪರ್ಕಿಸಬಹುದಾಗಿದೆ ಎಂದು ವಿಜಯಪುರ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ವಿಭಾಗೀಯ ನಿಯಂತ್ರಣಾಧಿಕಾರಿಗಳ ಪ್ರಕಟಣೆ ತಿಳಿಸಿದೆ.

### ಪುರುಷ – ಮಹಿಳಾ ಯೋಗಾಸನ ತಂಡಕ್ಕೆ ದಿ. 6–7ರಂದು ಕಲ್ಲೋಳಿಯಲ್ಲಿ ಆಯ್ಕೆ

## ಕಲ್ಲೋಳಿಯ ರಾಮಲಿಂಗೇಶ್ವರ ಪದವಿ ಕಾಲೇಜಿನಲ್ಲಿ ರಾಚವಿ ಯೋಗಾಸನ ಪಂದ್ಯಾವಳಿ"


ಮೂಡಲಗಿ : 2024–25ನೇ ಸಾಲಿನ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಅಂತರ್ ಕಾಲೇಜುಗಳ ಏಕವಲಯ ಪುರುಷರ ಹಾಗೂ ಮಹಿಳೆಯರ ಯೋಗಾಸನ ಪಂದ್ಯಾವಳಿ ಮತ್ತು ವಿಶ್ವವಿದ್ಯಾಲಯದ ತಂಡದ ಆಯ್ಕೆ ಪ್ರಕ್ರಿಯೆಯು ತಾಲೂಕಿನ ಕಲ್ಲೋಳಿ ಪಟ್ಟಣದ ಶ್ರೀ ರಾಮಲಿಂಗೇಶ್ವರ ಶಿಕ್ಷಣ ಸಂಸ್ಥೆಯ ಪ್ರಥಮ ದರ್ಜೆ ಕಾಲೇಜಿನಲ್ಲಿ ನ. 6 ಮತ್ತು 7 ರಂದು ಜರುಗಲಿವೆ. ಪಂದ್ಯಾವಳಿಯ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆಯನ್ನು ಸಂಸ್ಥೆಯ ಚೇರಮನ್ನ ಬಸಗೌಡ ಪಾಟೀಲ ವಹಿಸಲಿದ್ದಾರೆ. ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ಕ್ರೀಡಾ ವಿಭಾಗದ ಸಹಾಯಕ ನಿರ್ದೇಶಕ ಡಾ. ಜಗದೀಶ್ ಎಸ್. ಗಸ್ತಿ ಉದ್ಘಾಟಿಸುವರು. ಎಸ್. ಆರ್.ಇ. ಸಂಸ್ಥೆಯ ಆಡಳಿತ ಮಂಡಳಿಯ ಸರ್ವಸದಸ್ಯರು ಉಪಸ್ಥಿತರಿರುವರು ಎಂದು ಪ್ರಾಚಾರ್ಯ ಡಾ. ಸುರೇಶ ಹನಗಂಡಿ, ದೈಹಿಕ ನಿರ್ದೇಶಕ ಬಿ.ಕೆ. ಸೊಂಟನವರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ 99004 32834, 7892872398 ಈ ಮೊಬೈಲ್ ನಂಬರ್ ಗಳಿಗೆ ಸಂಪರ್ಕಿಸಲು ಕೋರಿದ್ದಾರೆ.

## ಬಡಿಗವಾಡ ಗ್ರಾಮದಲ್ಲಿ ರಾಜ್ಯೋತ್ಸವದ ಆಚರಿಸಿ ಮಕ್ಕಳಿಗೆ ಬುಕ್ ವಿತರಣೆ



ಘಟಪ್ರಭಾ. ಕನ್ನಡ ರಕ್ಷಣಾ ವೇದಿಕೆ ಸಂಘಟನೆ ವತಿಯಿಂದ ಸಮೀಪದ ಬಡಿಗವಾಡ ಗ್ರಾಮದಲ್ಲಿ 69ನೇ ಕನ್ನಡ ರಾಜ್ಯೋತ್ಸವದ ಕಾರ್ಯಕ್ರಮದಲ್ಲಿ ಶಾಲಾ ಮಕ್ಕಳಿಗೆ,ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ, ಸತ್ಕರಿಸಿ, ಬುಕ್ಕು ವಿತರಣೆ ಮಾಡಲಾಯಿತು. ತಾಯಿ ಭುವನೇಶ್ವರಿ ಭಾವಚಿತ್ರಕ್ಕೆ ಪೂಜೆ ಸಲ್ಲಿಸಲಾಯಿತು. ಕಾರ್ಯಕ್ರಮದ ದಿವ್ಯಸಾನಿಧ್ಯವನ್ನು ಮ,ನಿ,ಪ್ರ,ಸ್ವ,ಶ್ರೀ ವಿರೂಪಾಕ್ಷಿ ಮಹಾಸ್ವಾಮಿಗಳು ಹೊಸಮಠ ಘಟಪ್ರಭಾ ಇವರು ವಹಿಸಿದ್ದರು. ಹಾಗೂ ಕನ್ನಡ ರಕ್ಷಣಾ ವೇದಿಕೆಯ ರಾಜ್ಯಾಧ್ಯಕ್ಷರಾದ ಡಾ ,ಕೆಂಪಣ್ಣ ಚೌಕಿಶಿ (ವಕೀಲರು) ಕರವೇ ಜಿಲ್ಲಾ ಉಪಾಧ್ಯಕ್ಷರಾದ ಮಾರುತಿ ಚೌಕಸಿ, ,ಮೂಡಲಗಿ ತಾಲೂಕ ಉಪಾಧ್ಯಕ್ಷರಾದ ಸುರೇಶ ಚಿಗಡೊಳ್ಳಿ, ರಾಜೇಖಾನ ಪಠಾಣ, ನಿತಿನ ದೇಶಪಾಂಡೆ, ಮೂಡಲಗಿ ತಾಲೂಕ ಕರವೇ ಅಧ್ಯಕ್ಷರಾದ ಕಲ್ಲಪ್ಪ ಚೌಕಶಿ, ಗ್ರಾಮದ ಹಿರಿಯರಾದ ಯಲ್ಲಪ್ಪ ನಾಯಕ, ಮಹಾದೇವ ತುಕ್ಕಾನಟ್ಟಿ, ಭೀಮಪ್ಪ ಚಿಗಡೊಳ್ಳಿ, ಸಿದ್ರಾಮ ಚೌಕಸಿ, ಶಶಿ ಚೌಕಶಿ, ಗುರುಲಿಂಗ ಚೌಕಸಿ, ನಾರಾಯಣ ಜಡಕಿನ, ಮಲಿಕ್ ಮಾದರ, ಹಾಗೂ ಕನ್ನಡ ರಕ್ಷಣಾ ವೇದಿಕೆ ಕಾರ್ಯಕರ್ತರಿಂದ ಭಾಗವಹಿಸಿದ್ದರು.

## ಚಿದಾನಂದ ಸವದಿಯವರ ಕನ್ನಡ ಭಾಷಣಕ್ಕೆ ಜನಾ ಫುಲ್ ಫಿದಾ ಮಹಾರಾಷ್ಟ್ರದಲ್ಲಿ ಸವದಿ ಪುತ್ರನ ಹವಾ....,!



ಮೋಳೆ ;– ನೆರೆಯ ಮಹಾರಾಷ್ಟ್ರ ರಜ್ಯದ ವಿಧಾನಸಭಾ ಚುನಾವಣೇ ಕಣ ದಿನದಿಂದ ದಿನಕ್ಕೆ ಕಾವೇರುತ್ತಿದ್ದು,ಕರ್ನಾಟಕದ ಗಡಿಗೆ ಅಂಟಿಕೊಂಡಿರುವ ಮಹಾರಾಷ್ಟ್ರದ ಜತ್ ವಿಧಾನಸಭಾ ಮತಕ್ಷೇತ್ರದ ಹಳ್ಳಿ ಹಳ್ಳಿಗಳಲ್ಲಿ ಕನ್ನಡಿಗರೆ ಶೇ.80 ರಷ್ಟಿದ್ದು ಮಾಜಿ ಉಪಮುಖ್ಯಮಂತ್ರಿ ,ಅಥಣಿ ಶಾಸಕ ಲಕ್ಷ್ಮಣ ಸವದಿಯವರ ಪುತ್ರ ಚಿದಾನಂದ ಸವದಿಯವರು ಬಿರುಸಿನ ಪ್ರಚಾರ ನಡೆಸಿದ್ದಾರೆ.

ಗಡಿ ಭಾಗದ ಹಳ್ಳಿಗಳು ಅದರಲ್ಲಿರೂ ಕನ್ನಡ ಭಾಷಿಕರದ್ದೇ ಹೆಚ್ಚಿರುವ ಪ್ರದೇಶಗಳಲ್ಲಿ ಪ್ರಚಾರಕ್ಕೆ ಧುಮುಕಿದ್ದಾರೆ. ಚಿದಾನಂದ ಸವದಿಯವರ ಪ್ರಚಾರ ಕೇಳಲು ಜನ ಕಿಕ್ಕಿರಿದು ಸೇರಿರುತ್ತಾರೆ. ಅವರ ಕನ್ನಡ ಭಾಷಣಕ್ಕೆ ಸಂಪೂರ್ಣ ಫಿಧಾ ಆಗಿದ್ದು, ಸ್ಥಳೀಯ ಸಮಸ್ಯೆಗಳು ಹಾಗೂ ಕಾಂಗ್ರೆಸ್ ಅಭ್ಯರ್ಥಿಗಳ ಸಾಧನೆ ಕುರಿತು ಮತಬೇಟೆ ನಡೆಸಿರುವ ಅವರಿಗೆ ಮಹಾರಾಷ್ಟ್ರದ ಕಾಂಗ್ರೆಸ್ ನಾಯಕರು ಸಾಥ್ ಕೊಟ್ಟಿದ್ದಾರೆ.

ಜತ್ ವಿಧಾನಸಭಾ ಮತಕ್ಷೇತ್ರದ ವಿವಿಧ ಹಳ್ಳಿಗಳಲ್ಲಿ ಪ್ರಚಾರ ನಡೆಸಿರುವ ಅವವರು ಜತ್ ವಿಧಾನಸಭೇಗೆ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ದಿಸಿರುವ ವಿಕ್ರಮ್ ಸಾವಂತ ಅವರ ಗೆಲುವಿಗೆ ಶಕ್ತಿ ಮೀರಿ ಪ್ರಚಾರ ಕೈಗೊಂಡಿದ್ದಾರೆ. ಇವರ ಜೊತೆ ವಿಶ್ವಜೀತ ಕದಮ್, ಹಾಗೂ ಸೊಲ್ಲಾಪುರ ಲೋಕಸಭಾ ಸದಸ್ಯ ಪ್ರಣೀತಿ ಶಿಂಧೆ ಮಜಿ ಸಚಿವ ಪತಮಗರವ್ ಕದಮ್, ಅಥಣಿ ಪುರಸಭಾ ಸದಸ್ಯ ಸಂತೋಷ ಸಾವಡಕರ,,ಅಥಣಿಯ ಕಾಂಗ್ರೆಸ್ ಮುಖಂಡರಾದ ಮಹಾಂತೇಶ ಠಕ್ಕಣ್ಣವರ,ಶಿವು ಗುಡ್ಡಾಪುರ, ರಾಮನಗೌಡ ಪಾಟೀಲ, ಶಿವರುದ್ರ ಗೂಳಪ್ಪನವರ, ಡಾ.ಅರವಿಂದರಾವ್ ಕಾರ್ಚಿಶಿವಾನಂದ ನಾಯಿಕ, ಶಿವಾನಂದ ಗೊಲಬಾಂವಿ,ರಾಹುಲ್ ಕಂಡುಪೂಜಾರಿ, ಸೇಖಇದಂತೆ ಅನೇಕರು ಪ್ರಚಾರದಲ್ಲಿ ಪಾಲ್ಗೊಂಡಿದ್ದರು. ಈ ವೇಳೆ ಮಾತನಾಡಿದ ಚಿದಾನಂದ ಸವದಿ, ಮಹಾರಾಷ್ಟ್ರ ಜತ್, ಸಾಂಗಿ ಹಾಗೂ ಕೊಲ್ಲಾಪುರ ಕ್ಷೇತ್ರಗಳಲ್ಲಿ ಕನ್ನಡಿಗರು ಹೆಚ್ಚಾಗಿ ಇರುವದರಿಂದ ನಮ್ಮ ತಂದೆ ಮಾಜಿ ಉಪಮುಖ್ಯಮಂತ್ರಿ ಲಕ್ಷ್ಮಣ ಸವದಿಯವರನ್ನು ಸ್ಟಾರ್ ಪ್ರಚಾರಕರನ್ನಾಗಿ ನೇಮಕ ಮಾಡಿದ್ದು ಈ ಕ್ಷೇತ್ರಗಳು ಸೇರಿದಂತೆ ಮಹಾರಾಷ್ಟ್ರದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರಲಿದೆ ಎಂದು ಚಿದಾನಂದ ಸವದಿ ವಿಶ್ವಾಸ ವ್ಯಕ್ತ ಪಡಿಸಿದರು.

### ಕೆಎಲ್‌ಇ ಪಾಲಿಟೆಕ್ನಿಕ್‌ನಲ್ಲಿ ೧೦ ದಿನಗಳ ರಾಜ್ಯೋತ್ಸವ ಚಟುವಟಿಕೆ ಸಮಾರೋಪ

# ರಾಜ್ಯೋತ್ಸವ ಒಂದೇ ದಿನಕ್ಕೆ ಸೀಮಿತವಾಗದೇ ನಿತ್ಯೋತ್ಸಾಹದ ನಿತ್ಯೋತ್ಸವ ಆಗಬೇಕು: ಡಿ.ವಿ.ಹಿರೇಮಠ

**ಮಹಾಲಿಂಗಪುರ** : ಕನ್ನಡ ನಾಡು ನುಡಿಯ ಹಬ್ಬವಾದ ರಾಜ್ಯೋತ್ಸವ ಒಂದೇ ದಿನಕ್ಕೆ ಸೀಮಿತವಾಗದೇ ನಿತ್ಯೋತ್ಸಾಹದ ನಿತ್ಯೋತ್ಸವ ಆಗಬೇಕು ಎಂದು ಮಧರಖಂಡಿಯ ಸರಕಾರಿ ಪ್ರೌಢಶಾ ಲೆಯ ಶಿಕ್ಷಕ, ಕನ್ನಡದ ಕಟ್ಟಾಳು ಡಿ.ವಿ.ಹಿರೇಮಠ ಹೇಳಿದರು.

ಸ್ಥಳೀಯ ಕೆಎಲ್‌ಇ ಪಾಲಿಟೆಕ್ನಿಕ್‌ನಲ್ಲಿ ಕಾಲೇಜಿನ ಕನ್ನಡ ಸಂಘದ ಅಡಿಯಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಅವರು ಮಾತನಾಡಿ, ಕನ್ನಡ ಭಾಷೆ ಬಲಿಷ್ಠವಾಗುವುದು ಭಾಷೆಯನ್ನು ಬಳಸುವುದರಿಂದ ಹೊರತು ಭಾಷಣದಿಂದಲ್ಲ. ಕರುನಾಡು ಕಟ್ಟಲು ಕಂಕಣ ಕಟ್ಟಿ ಹೋರಾಡಿದ ಮಹನೀಯರನ್ನು, ಕನ್ನಡ ಭಾಷೆ ಶ್ರೀಮಂತಗೊಳಿಸಿದ ಸಾಹಿತಿಗಳನ್ನು ಎಂದಿಗೂ ಮರೆಯಬಾರದು. ಹನುಮಂತ ಎದೆ ಸೀಳಿ ರಾಮನನ್ನು ತೋರಿಸಿದಂತೆ ಕನ್ನಡಿಗರ ಎದೆ



ಸೀಳಿದರೆ ಕನ್ನಡಾಂಬೆ ಕಾಣುವಷ್ಟು ಭಾಷಾಭಿಮಾನ ಮೈದಳೆಯಬೇಕು ಎಂದರು. ಮಾತಿನಾರಂಭದಲ್ಲಿ ಹಳೆಗನ್ನಡ ಶ್ಲೋಕ ಮತ್ತು ಮುಕ್ತಾಯದಲ್ಲಿ ಕುವೆಂಪು ಅವರ ಗೀತೆ ಹಾಡಿ ರಂಜಿಸಿದರು.

ಪ್ರಾಚಾರ್ಯ ಎಸ್.ಐ.ಕುಂದಗೋಳ ಅಧ್ಯಕ್ಷತೆ ವಹಿಸಿ ಮಾತನಾಡಿ, ಕನ್ನಡಿಗರ ಔದಾರ್ಯ ಅತಿಯಾಗಿ ಭಾಷೆಯ ಮಾಧುರ್ಯ ಕಡಿಮೆಯಾಗುತ್ತಿದೆ. ಬೇರೆ ರಾಜ್ಯಗಳಷ್ಟು ಭಾಷಾ ಪ್ರೇಮ ನಮ್ಮ ರಾಜ್ಯದಲ್ಲಿ ವಿರಳವಾಗುತ್ತಿರುವುದು ವಿಷಾದಕರ ಸಂಗತಿ. ರಾಜಧಾನಿಯಲ್ಲಿ, ಗಡಿಯಲ್ಲಿ ಕನ್ನಡದ ಕಂಪು ಹೆಚ್ಚಾಗಬೇಕಿದೆ. ನಮ್ಮದು ತಾಂತ್ರಿಕ ಮಹಾವಿದ್ಯಾಲಯವಾದರೂ ಹತ್ತು ದಿನಗಳ ಕಾಲ ಕನ್ನಡಪರ ನಾನಾ ಚಟುವಟಿಕೆಗಳನ್ನು ಹಮ್ಮಿಕೊಂಡು ಸಂಭ್ರಮದಿಂದ ಸಮಾರೋಪಗೊಳಿಸುತ್ತಿದ್ದೇವೆ. ನಮ್ಮಲ್ಲಿ ಕನ್ನಡ ಯಾವಾಗಲೂ ಜೀವಂತವಾಗಿದೆ ಎಂದರು.

ಕಾಲೇಜಿನ ಕನ್ನಡ ಸಂಘದ ಅಧ್ಯಕ್ಷ, ಮೆಕ್ಯಾನಿಕಲ್ ವಿಭಾಗದ ಮುಖ್ಯಸ್ಥ ಯು.ಡಿ.ಹಾದಿಮನಿ ಪ್ರಾಸ್ತಾವಿಕ ಮಾತನಾಡಿ, ನಾಡು ಕಟ್ಟಿದವರಿಗೆ, ಭಾಷೆ ಬೆಳೆಸಿದವರಿಗೆ ನಾವು ನ್ಯಾಯ ನೀಡಬೇಕೆಂದರೆ ಭಾಷೆಯನ್ನು ಬಳಸಿ, ಉಳಿಸಿ ಬೆಳೆಸಬೇಕು ಎಂದರು.

ರಾಜ್ಯೋತ್ಸವ ನಿಮಿತ್ತ ಕರ್ನಾಟಕ ನಕ್ಷೆಯಲ್ಲಿ ಐತಿಹಾಸಕ ಸ್ಥಳ ಗುರುತಿಸುವ, ಎಲೆ ಮತ್ತು ಹೂವಿನ ಚಿತ್ತಾರ ಬಿಡಿಸುವ, ಕನ್ನಡ ನಾಡು ನುಡಿ ಬಿಂಬಿಸುವ ನೃತ್ಯ, ರಸಪ್ರಶ್ನೆ, ಕನ್ನಡ ಗಾಯನ ಸ್ಪರ್ಧೆ, ಡೊಳ್ಳು ಬಾರಿಸುವ ಸ್ಪರ್ಧೆ ಆಯೋಜಿಸಲಾಗಿತ್ತು. ವಿಜೇತರ ಹೆಸರನ್ನು ಸುಮನ್ ಖೋತ್ ಘೋಷಿಸಿದರು.

ನಾಡದೇವಿ ಭುವನೇಶ್ವರಿ ಭಾಚಿತ್ರಕ್ಕೆ ಪೂಜೆ ಸಲ್ಲಿಸಿ ಪುಷ್ಪವೃಷ್ಠಿ ಮಾಡುವ ಮೂಲಕ ಕಾರ್ಯಕ್ರಮ ಉದ್ಘಾಟಿಸಲಾಯಿತು. ಪ್ರಾಚಾರ್ಯ, ಉಪನ್ಯಾಸಕ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಸಾಮೂಹಿಕವಾಗಿ ನಾಡಗೀತೆ ಹಾಡಿದ್ದು ವಿಶೇಷವಾಗಿತ್ತು. ವಿದ್ಯಾರ್ಥಿಗಳು ಪ್ರಾರ್ಥನೆ ಹಾಡಿದರು. ಲಕ್ಷ್ಮೀ ಅಂಗಡಿ ಸ್ವಾಗತಿಸಿದರು. ಮಹಾದೇವಿ ಅಂಬಿ ಪರಿಚಯಿಸಿದರು. ನಿರ್ಮಲಾ ಫಕೀರಪುರ ನಿರೂಪಿಸಿದರು.

ಅಂಜನಾ ಮಲಾಜ್ ವಂದಿಸಿದರು. ಸುಭಾಸ್ ಮೂಶಿ, ವಂದನಾ ಪಸಾರ, ಸವಿತಾ ಗೊಂದಿ, ಮಂಜುನಾಥ ಅರಕೇರಿ, ಅಮೀತ ಜಾಧವ, ಚೈತ್ರಾ ಹುದ್ದಾರ, ಸವಿತಾ ಬೀಳಗಿ, ವಿಶಾಲ ಮೆಟಗುಡ, ಈಶ್ವರ ಹೂಲಿ, ಗುರುರಾಜ ಅಥಣಿ ಸೇರಿದಂತೆ ಸಿಬ್ಬಂದಿ ಇದ್ದರು.

BELAGINA SURYODHYA KANNADA DAILY MORNING Editor, Printer, PUblisher and Owned By GURURAJ IRAPPA KADAM Plot No.2743 NEAR KEB POWER HOUSE RAMTEERTH NAGAR, SHIVAJI NAGAR BELAGAVI-590016
DIST-BELAGAVI,STATE KARNATAKA PRINTED At M/S LAXMI PRINTERS, No. 627,Auto Nagar,Belagavi,Dist- Belagavi Karnataka, RNI No. KARKAN/2019/77640, Volume : 06, Issue : 227 Postal Reg No. PMG/KA/NK/BM/135/22-24 / POST AT Vantamury Colony Post Office